Swabhimani Sahakari

Pages : 38 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸೌಹಾರ್ದ ಸಹಕಾರಿ ಕಾಯ್ದೆಯ
ರಜತ ಮಹೋತ್ಸವ 2025

Volume - 22
Issue - 09
September - 2025

ಸೆಪ್ಟೆಂಬರ್ 21
ನವರಾತ್ರಿ ಆರಂಭ

ಶ್ರೀ ಚಾಮುಂಡೇಶ್ವರಿ..
ಅಮ್ಮಾ.. ಶ್ರೀ ಚಾಮುಂಡೇಶ್ವರಿ..
ಸಿಂಹವಾಹಿನಿ ಮಹಿಷಾಸುರ ಮರ್ದಿನಿ
ಶ್ರೀ ಚಾಮುಂಡೇಶ್ವರಿ..
ಹರನೇ ತಾನೊಲಿದ ಶೃಂಗಾರ ಲಹರಿ
ಹರಿಯೇ ಮರುಳಾದ ಮಹದೈಸಿರಿ
ಬ್ರಹ್ಮನೆ ಬೆರಗಾದ ವಾಗ್ವೈಖರಿ
ಕರ್ನಾಟ ಸಾಮ್ರಾಜ್ಯ ಕಾಮೇಶ್ವರಿ
ಶ್ರೀ ಚಾಮುಂಡೇಶ್ವರಿ..
ಅಮ್ಮಾ.. ಶ್ರೀ ಚಾಮುಂಡೇಶ್ವರಿ..








ಸೆಪ್ಟೆಂಬರ್ ೦5
ಈದ್-ಮಿಲಾದ್








ಸೌಹಾರ್ದ ಸಹಕಾರಿಗಳ ಸಂಖ್ಯೆ: 6560

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1733

# ರಜತ ಮಹೋತ್ಸವ ಮತ್ತು 24ನೇ ವಾರ್ಷಿಕ ಸಾಮಾನ್ಯ ಸಭೆಯ ಯಶಸ್ಸೋತ್ತರದ ಹೃನ್ಮನ ಧನ್ಯವಾದಗಳು.



**ಜಿ. ನಂಜನಗೌಡ**

> ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಈದ್‌ಮಿಲಾದ್, ವಿಶ್ವಕರ್ಮ ಜಯಂತಿ, ಶಿಕ್ಷಕರ ದಿನಾಚರಣೆಯ ಹಾಗೂ ಮಹಾಲಯ ಅಮವಾಸ್ಯೆಯ ಹಾರ್ದಿಕ ಶುಭಾಶಯಗಳು. ದಿನಾಂಕ 22.08.2025ರಂದು ಗೇಟ್ ನಂ.04, ಗಾಯತ್ರಿ ವಿಹಾರ, ಗಾಯತ್ರಿ ಗ್ರ್ಯಾಂಡ್, ಅರಮನೆ ಮೈದಾನ, ಬೆಂಗಳೂರಿನಲ್ಲಿ ಜರುಗಿದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯಲು ಕಾರಣ-ರಾದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ, ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ, ಹೃದಯ ಪೂರ್ವಕ ಧನ್ಯವಾದಗಳು.

ರಾಜ್ಯದ ಎಲ್ಲ ಸಹಕಾರಿ ಬಂಧುಗಳಿಗೆ ಈದ್‌ಮಿಲಾದ್, ವಿಶ್ವಕರ್ಮ ಜಯಂತಿ, ಶಿಕ್ಷಕರ ದಿನಾಚರಣೆಯ ಹಾಗೂ ಮಹಾಲಯ ಅಮವಾಸ್ಯೆಯ ಹಾರ್ದಿಕ ಶುಭಾಶಯಗಳು. ದಿನಾಂಕ 22.08.2025ರಂದು ಗೇಟ್ ನಂ.04, ಗಾಯತ್ರಿ ವಿಹಾರ, ಗಾಯತ್ರಿ ಗ್ರ್ಯಾಂಡ್, ಅರಮನೆ ಮೈದಾನ, ಬೆಂಗಳೂರಿನಲ್ಲಿ ಜರುಗಿದ ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ ಮತ್ತು ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ಸೌಹಾರ್ದ ಸಹಕಾರಿ ಚಳುವಳಿಯ ರಜತ ಮಹೋತ್ಸವ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯಲು ಕಾರಣರಾದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳಿಗೆ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಗೆ, ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ, ಹೃದಯ ಪೂರ್ವಕ ಧನ್ಯವಾದಗಳು.

ಸಂಯುಕ್ತ ಸಹಕಾರಿಯ ಇತಿಹಾಸದಲ್ಲಿ ಇದೊಂದು ಅವಿಸ್ಮರಣೀಯ ದಿನ. ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ 2302 ಪ್ರತಿನಿಧಿಗಳು ಭಾಗವಹಿಸಿರುವುದು ದಾಖಲೆ ವಿಷಯ. ಮಧ್ಯಾಹ್ನ ನಡೆದ ರಜತ ಮಹೋತ್ಸವ ಸಮಾವೇಶದಲ್ಲಿ 4782 ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಹಾಗೂ ಪ್ರೇಕ್ಷಕರು, ಸಕ್ರೀಯವಾಗಿ ಭಾಗವಹಿಸುವ ಜೊತೆಗೆ ಎಲ್ಲ ಕಾರ್ಯಕ್ರಮಗಳಲ್ಲಿ ಅತ್ಯಂತ ಶಾಂತತೆ ಹಾಗೂ ಸಹನೆಯಿಂದ ಸಕ್ರೀಯವಾಗಿ ಭಾಗವಹಿಸಿ ಬೃಹತ್ ಕಾರ್ಯಕ್ರಮವನ್ನು ಯಶಸ್ವಿಯಾಗಲು ಸಹಕರಿಸಿದ ಸಹಕಾರಿಗಳಿಗೆ ಅತ್ಯಂತ ಹೆಮ್ಮೆಯಿಂದ ಮತ್ತೊಮ್ಮೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಆ ದಿನದ ಬೆಳಗಿನ ಅವಧಿಯಲ್ಲಿ ಸಹಕಾರಿ ಪ್ರತಿನಿಧಿಗಳ, ಪ್ರೇಕ್ಷಕ ವರ್ಗದವರ ನೋಂದಣಿ, ಸಪ್ತವರ್ಣದ ಸಹಕಾರಿ ಧ್ವಜಾರೋಹಣ, ರಾಷ್ಟ್ರೀಯ ಪ್ರತಿಜ್ಞೆ ಸ್ವೀಕಾರ, ತಂತ್ರಜ್ಞಾನ ಮೇಳ ಉದ್ಘಾಟನೆ, ಸರಿಯಾದ ಸಮಯಕ್ಕೆ ಸಾಮಾನ್ಯ ಸಭೆ ಪ್ರಾರಂಭವಾಗಿ ಯಾವುದೇ ಅಡ್ಡಿ ಆತಂಕಗಳಿಲ್ಲದೆ ನಿರ್ವಿಘ್ನವಾಗಿ ನಡೆದಿರುವುದು ತೃಪ್ತಿಯ ವಿಷಯ. ಈ ಸಾಮಾನ್ಯ ಸಭೆಯಲ್ಲಿ ಹೆಚ್ಚಿನ ಪ್ರತಿನಿಧಿಗಳು ಉತ್ಸಾಹದಿಂದ ಭಾಗವಹಿಸಿ ಅನೇಕ ಸಲಹೆ ನೀಡಿರುವುದು ಉತ್ತಮ ಬೆಳವಣಿಗೆ ಹಾಗೂ ಸ್ವಾಗತಾರ್ಹ.

ಮಧ್ಯಾಹ್ನ ನಡೆದ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಅತಿಥಿಗಣ್ಯರು ಭಾಗವಹಿಸಿ ಸೌಹಾರ್ದ ಸಹಕಾರಿ ಚಳುವಳಿಯ ಬೆಳವಣಿಗೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಸಮಾವೇಶದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿಗೆ ಕೊಡುಗೆಯನ್ನು ನೀಡುತ್ತಾ ಬಂದಿರುವ ಸಹಕಾರಿಗಳಿಗೆ ಉತ್ತಮ ಸಹಕಾರಿ ಸಂಸ್ಥೆ, ಶ್ರೇಷ್ಠ ಸಹಕಾರಿ, ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸನ್ಮಾನಿಸಲಾಗಿದೆ. ಸೌಹಾರ್ದ ಸಹಕಾರಿಗಳಿಗೆ ಅಧ್ಯಯನ ದೃಷ್ಠಿಯಿಂದ ಅಗತ್ಯವಾಗುವ ಪುಸ್ತಕಗಳನ್ನು ಪ್ರಕಟಿಸಿ ಬಿಡುಗಡೆ ಮಾಡಿ ಸಹಕಾರಿಗಳಿಗೆ ಒದಗಿಸಿದೆ. ಜೊತೆಗೆ ಸೌಹಾರ್ದ ಸಹಕಾರಿಗಳು ಹೆಚ್ಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ತಂತ್ರಜ್ಞಾನ ಮೇಳದ ವ್ಯವಸ್ಥೆ ಮಾಡುವ ಮೂಲಕ, ಸೌಹಾರ್ದ ಸಹಕಾರಿ ಕ್ಷೇತ್ರದ ವಿಶೇಷತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಜರುಗಿಸಿರುವುದು ಅಭಿಂದನೀಯ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

## ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–24
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... ........................................ 25–32
ಲೇಖನಗಳು :
ಸಕಾರಾತ್ಮಕ ಪ್ರತಿಕ್ರಿಯೆಯ ಮೂಲಕ ಧನಾತ್ಮಕ ಪ್ರಯೋಜನ ................................ 33–35
ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ........................................ 36–38

# ಸಂಪಾದಕೀಯ

## "ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಸೌಹಾರ್ದ ಸಹಕಾರಿ ಚಳವಳಿ ರಜತ ಮಹೋತ್ಸವ" ಅರ್ಥಪೂರ್ಣ ಆಚರಣೆಯಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಜಾಗೃತಿ ನಿರೀಕ್ಷೆ

ರಾಜ್ಯದಲ್ಲಿ ಜನವರಿ 1 2001 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗಿ 25 ವರ್ಷಗಳಾಗಿವೆ. ಈ ಕಾಯ್ದೆ ಜಾರಿಗೆ ಬಂದ ನಂತರವೇ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ನೋಂದಣಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಪ್ರಾರಂಭವಾಗಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿದೆ. ಹೀಗಾಗಿ ರಜತ ಮಹೋತ್ಸವ ಆಚರಣೆ ಮಾಡುತ್ತಿರುವುದು ಸಂತೋಷದ ವಿಷಯ ಸೌಹಾರ್ದ ಸಹಕಾರಿಗಳ ಹೆಮ್ಮೆಯ ವಿಷಯ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ನೇತೃತ್ವದಲ್ಲಿ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ಚಳುವಳಿಯ ಅಸ್ತಿತ್ವದ ಬಗ್ಗೆ ಜಾಗೃತಿ ಮೂಡಿಸುವ ಈ ರಜತ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ರಜತ ಮಹೋತ್ಸವದ ಕಾರ್ಯಕ್ರಮಗಳ ಉದ್ಘಾಟನೆಯನ್ನು ದಿನಾಂಕ 22 ಅಗಷ್ಟ 2025 ರಂದು ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ ಯವರ ಉದ್ಘಾಟಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿರುವುದು ಸೌಹಾರ್ದ ಸಹಕಾರಿಗಳಿಗೆ ಸಂತೋಷ ತಂದಿದೆ. ಸೌಹಾರ್ದ ಸಹಕಾರಿ ಚಳುವಳಿಯ ನೇತೃತ್ವದಲ್ಲಿ ಈ ರಜತ ಮಹೋತ್ಸವ ಅಂದಾಗ ಹಲವಾರು ವಿಷಯಗಳ ಬಗ್ಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಚಿಂತನೆ ನಡೆಸಿದ್ದಾರೆ.

ಪ್ರಮುಖವಾಗಿ ಈ ರಜತ ಮಹೋತ್ಸವದ ಆಚರಣೆಯ ರೂಪ ರೇಷೆಗಳು. ರಾಜ್ಯ ಮಟ್ಟದಲ್ಲಿ ವಿಭಾಗ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಆಚರಿಸಬಹುದಾದ ಕಾರ್ಯಕ್ರಮಗಳು. ಸೌಹಾರ್ದ ಸಹಕಾರಿಗಳ ಹಂತದಲ್ಲಿ ಆಚರಿಸಬಹುದಾದ ಕಾರ್ಯಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡುವ ಕ್ರಮಗಳ ಬಗ್ಗೆ ಚಿಂತನೆ ಮಾಡಲಾಗಿದೆ. ಈಗಾಗಲೇ ಅನೇಕ ಪ್ರಾಥಮಿಕ ಸೌಹಾರ್ದ ಸಹಕಾರಿಗಳು ಕೂಡ ಈ ರಜತ ಮಹೋತ್ಸವ ಆಚರಣೆಗೆ ಗಮನ ಹರಿಸಿದ್ದಾರೆ. ಹಲವಾರು ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳ ಕ್ರೀಡಾಕೂಟಗಳನ್ನು ಏರ್ಪಡಿಸುವುದರ ಮೂಲಕ ಸಾರ್ವಜನಿಕರ ಗಮನವನ್ನು ಸೆಳೆಯಲಾಗಿದೆ. ಸಹಕಾರಿಗಳ ಅಸ್ತಿತ್ವವನ್ನು ಸ್ಮರಿಸುವುದು. ಸಕಾರಾತ್ಮಕ ಭಾವನೆಗಳನ್ನು ಬೆಳೆಸುವುದು ನಕಾರಾತ್ಮಕ ಭಾವನೆಗಳನ್ನು ಹೋಗಲಾಡಿಸುವುದು ರಜತ ಮಹೋತ್ಸವ ಆಚರಣೆಯ ಮುಖ್ಯ ಗುರಿಯಾಗಿದೆ.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಪ್ರಸಕ್ತ ರಾಜ್ಯದ 2302 ಸೌಹಾರ್ದ ಸಹಕಾರಿಗಳ 4782 ಪ್ರತಿನಿಧಿಗಳ ಸಹಯೋಗದಲ್ಲಿ ರಜತ ಮಹೋತ್ಸವಕ್ಕೆ ಚಾಲನೆ ನೀಡಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ಮನೆಮನಗಳಲ್ಲಿ ರಜತ ಮಹೋತ್ಸವ ಆಚರಣೆಯ ಉತ್ಸಾಹ ಹುಮ್ಮಸ್ಸು ತುಂಬಲಾಗಿದೆ. ಸಂಯುಕ್ತ ಸಹಕಾರಿ ಪ್ರತಿ ಜಿಲ್ಲೆಗಳಲ್ಲಿ ವಿಭಾಗ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ, ಸಹಕಾರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸುವುದು, ವಿಶ್ವವಿದ್ಯಾಲಯಗಳಲ್ಲಿ ಚರ್ಚಾ ಸ್ಪರ್ಧೆಗಳನ್ನು ಆಯೋಜಿಸುವುದು, ಹಿರಿಯ ಸಹಕಾರಿಗಳ ಜೊತೆಗೆ ಸಂದರ್ಶನವನ್ನು ಮಾಡುವುದು, ಪ್ರತಿ ಮಾಹೆಯಲ್ಲಿ ಆನ್‌ಲೈನ್‌ನಲ್ಲಿ ಸಹಕಾರ ಕುರಿತು ಒಂದು ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸುವುದು, ಪತ್ರಿಕಾ ಗೋಷ್ಠಿಗಳನು ಏರ್ಪಡಿಸುವುದು, ಪತ್ರಕರ್ತರುಗಳಿಗಾಗಿ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಯಶಸ್ವಿ ಸೌಹಾರ್ದ ಸಹಕಾರಿ ಸಂಸ್ಥೆಗಳ ಯಶೋಗಾಥೆ ಗಳನ್ನು ಬರೆಯಿಸಿ ಪ್ರಕಟಿಸುವುದು, ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ರೀತಿಯ ಕಾರ್ಯಕ್ರಮಗಳನ್ನು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಹಮ್ಮಿಕೊಳ್ಳಬಹುದಾಗಿದೆ. ತಾವು ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳಿಗೆ ಸಂಯುಕ್ತ ಸಹಕಾರಿ ಮಾರ್ಗದರ್ಶನ ನೀಡಲು ಸಿದ್ಧವಾಗದೆ. ಒಟ್ಟಾರೆ ಈ ರಜತ ಮಹೋತ್ಸವ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚಿನ ಪ್ರಚಾರವಾಗಿ ನಮ್ಮ ವಿಶ್ವಾಸಾರ್ಹತೆ ಹೆಚ್ಚುವಂತಾಗಬೇಕು. ಈ ನಿಟ್ಟಿನಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳು ರಜತ ಮಹೋತ್ಸವ ಆಚರಣೆಗೆ ಸಂಯುಕ್ತ ಸಹಕಾರಿಗೆ ಕೈಜೋಡಿಸಿದಾಗ ಈ ರಜತ ಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಿದಂತಾಗುತ್ತದೆ.



## ಜ್ಞಾನ ಜ್ಯೋತಿ

– ಶ್ರೀ ಸಿದ್ಧೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

### "ಅಡೆತಡೆ"

ಬದುಕಿನಲ್ಲಿ ಅಡೆತಡೆಗಳು ಬಹಳ, ನಾವು ಜೀವನದಲ್ಲಿ ಯಾವುದೇ ಮಾರ್ಗ ಹಿಡಿದು ನಡೆದರೂ ಅಲ್ಲಿ ಏರು– ಇಳಿವು, ಅಡೆತಡೆಗಳು ಇದ್ದದ್ದೆ, ಅವುಗಳ ಮಧ್ಯದಲ್ಲಿದ್ದೇ ನಾವು ಸುಂದರ ಬದುಕನ್ನು ಕಟ್ಟಿಕೊಳ್ಳಬೇಕು. ಹೊಳೆಯಲ್ಲಿ ಈಜುವವನು ಅಲ್ಲಿ ಏಳುವ ತೆರೆಗಳನ್ನೆಂದೂ ವೈರಿಗಳೆಂದರು ಭಾವಿಸುವುದಿಲ್ಲ. ನೀರಿನ ಪ್ರವಾಹವನ್ನೆಂದೂ ದ್ವೇಷಿಸುವುದಿಲ್ಲ. ಈಜುವಾಗ ಬರುವ ಎಲ್ಲ ಅಡೆತಡೆಗಳನ್ನು ಗೆಲುವಿನಿಂದಲೇ ಎದುರಿಸಿ ಗುರಿ ತಲುಪುತ್ತಾನೆ.

ಪತಂಜಲಿ ಮಹರ್ಷಿಗಳು ಸಾವಿರಾರು ವರುಷಗಳ ಹಿಂದೆಯೇ ಯೌಗಿಕ ಕ್ಷೇತ್ರದಲ್ಲಿ ಮಾಡಿದ ಸಂಶೋಧನೆಗಳು ಇಂದು ಜಗತ್ತಿನ ಲಕ್ಷ್ಯವನ್ನೇ ತಮ್ಮತ್ತ ಸೆಳೆದಿವೆ. ಮನಸ್ಸಿನ ಎಳೆ ಎಳೆಯನ್ನು ಅವರು ಅಧ್ಯಯನ ಮಾಡಿದರು. ಮನಸ್ಸಿನ ಶಕ್ತಿ ಸಾಮರ್ಥ್ಯ ಅಗಾಧವದುದು ಎಂದು ಗುರುತಿಸಿದರು. ಮನೋವಿಕಾಸದಿಂದ ಬದುಕಿನ ವಿಕಾಸವಾಗುತ್ತದೆ ಎಂದು ಸಾರಿ ಸಾರಿ ಹೇಳಿದರು.

ಬದುಕಿನ ವಿಕಾಸಕ್ಕೆ ಇರುವ ಅಡೆತಡೆಗಳಿಗೆ ಅಂತರಾಯಗಳೆಂದು ಕರೆಯುತ್ತಾರೆ. ಅವುಗಳಲ್ಲಿ ಬಹಿರಂಗದ ಅಂತರಾಯಗಳು, ಅಂತರಂಗದ ಅಂತರಾಯಗಳು ಎಂದು ಎರಡೂ ಪ್ರಕಾಶ, ಬಹಿರಂಗದ ಅಡೆತಡೆಗಳನ್ನು ನಾವು ಹೇಗಾದರೂ ಗೆಲ್ಲಬಹುದು. ಆದರೆ ಅಂತರಂಗದ ಅಥವಾ ಮನಸ್ಸಿನ ಅಡೆತಡೆಗಳನ್ನು ಅಷ್ಟು ಸುಲಭವಾಗಿ ಗೆಲ್ಲಲು ಬರುವುದಿಲ್ಲ.

ಈ ಜಗತ್ತು ಸತ್ವ–ರಜ–ತಮ ಎಂದು ತ್ರಿಗುಣಾತ್ಮಕವಾಗಿದೆ. ಇದರಲ್ಲಿ ಸಾತ್ವಿಕರು, ರಾಜಸಿಕರು, ತಾಮಸಿಕರು ಎಲ್ಲರೂ ಬದುಕಲೇಬೇಕು. ಅವರೊಂದಿಗೆ ನಾವೂ ಬದುಕಬೇಕು. ಎಂಥ ಪ್ರತಿಕೂಲ ವಾತಾವರಣ ಇದ್ದರೂ ಅದರಲ್ಲಿ ನಮ್ಮ ಬದುಕನ್ನು ನಾವು ರೂಪಿಸಿಕೊಳ್ಳಬೇಕು. ಸುಖ–ಸಮೃದ್ಧಿ, ಶಾಂತಿ–ಸಮಾಧಾನ ಪಡೆಯಬೇಕು. ನಮ್ಮ ವೈರಿಗಳು ಹೊರಗಿಲ್ಲ ನಮ್ಮೊಳಗೇ ಇದ್ದಾರೆ. ಈ ಮಾತನ್ನು ಭಗವದ್ಗೀತೆಯಲ್ಲಿ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ.

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈ ವಾತ್ಮನಾ ಜಿತಃ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥

ಯಾವ ಮನುಷ್ಯನಿಂದ ನಿರ್ಮಲ ಮನದ ಮೂಲಕ ದೇಹಾದಿಗಳ ಗುಂಪು ವಶೀಕೃತವಾಗಿದೆಯೋ ಅವನಿಗೆ ಆ ಮನವೇ ಬಂಧು. ಆದರೆ ಅಜಿತಾತ್ಮನಿಗೆ ಅವನ ಮನಸ್ಸೇ ಅವನಿಗೆ ವೈರಿಯಾಗಿ ವರ್ತಿಸುತ್ತದೆ.


"ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ" ಎಂದು ಋಷಿ–ಮುನಿಗಳು ಹೇಳಿದಂತೆ ಮನುಷ್ಯನ ಸುಖ–ದುಃಖಗಳಿಗೆ ಮನಸ್ಸೇ ಕಾರಣವಾಗಿದೆ. ಮನಸ್ಸು ನಿರ್ಮಲವಾದರೆ, ಸುಖ, ಅದೇ ಮನಸ್ಸು ಮಲಿನವಾದರೆ ದುಃಖ. ಆದ್ದರಿಂದ ನಮ್ಮ ಮನಸ್ಸನ್ನು ನಿರ್ಮಲವಾಗಿ ಇಟ್ಟುಕೊಂಡರೆ ಅದು ನಮಗೆ ಒಳ್ಳೆಯ ಮಿತ್ರನಂತೆ ಸುಖವನ್ನೇ ಕೊಡುತ್ತದೆ. ದೇಹದಿಂದ ಆಗಲಾರದ ಕಠಿಣ ಕೆಲಸವನ್ನು ಮನಸ್ಸು ಸುಲಭವಾಗಿ ಮಾಡುತ್ತದೆ.

ನಮ್ಮ ಮನಸ್ಸು ನಮಗೆ ಮಿತ್ರನಾಗಬೇಕಾದರೆ ಮನದಲ್ಲಿರುವ ಮಾಲಿನ್ಯಗಳನ್ನು ನಾವು ಅವಶ್ಯವಾಗಿ ಹೊರಹಾಕಬೇಕು. ಮನದಲ್ಲಿರುವ ಮೊದಲನೆಯ ಮಾಲಿನ್ಯವೆಂದರೆ ಅತೃಪ್ತಿ. ಈ ಅತೃಪ್ತಿಗೆ ಕಾರಣವೆಂದರೆ ಆಸೆ ಅಥವಾ ಬಯಕೆ. ನಮ್ಮಲ್ಲಿ ಎಷ್ಟೇ ಸಿರಿ–ಸಂಪತ್ತು, ವಿದ್ಯೆ–ಬುದ್ಧಿ ಇದ್ದರೂ ಮನಸ್ಸು ನಮ್ಮನ್ನು ಇನ್ನೊಬ್ಬರೊಂದಿಗೆ ಹೋಲಿಸುತ್ತದೆ. ಕೊರತೆ ಅಥವಾ ಕಡಿಮೆ ಎನಿಸಿದ ಕೂಡಲೇ ಬೇಡಿ ಬಯಸಿ ಬಳಲುತ್ತದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಆಗಸ್ಟ್–25ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 831 | 522 | 520 | 203 | 2076 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 96 | 71 | 55 | 13 | 235 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 107 | 156 | 117 | 32 | 412 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 820 | 437 | 458 | 184 | 1899 |
| **ಆಗಸ್ಟ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 235 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 412** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7160 | 1264 | 2146 | 752 | 11322 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1084 | 234 | 531 | 168 | 2017 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6076 | 1030 | 1615 | 584 | 9305 |
| **ಆಗಸ್ಟ್ 2025ರ ತಿಂಗಳಿನಲ್ಲಿ ಒಟ್ಟು 14 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಸಂಯುಕ್ತ ಸಹಕಾರಿಯ ಸಂಭ್ರಮದ ಸಡಗರದ 24ನೇ ವಾರ್ಷಿಕ ಮಹಾಸಭೆ




**ಬೆಂಗಳೂರು :** ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯತ್ರಿ ವಿಹಾರದಲ್ಲಿ ದಿನಾಂಕ 22.08.2025 ರಂದು ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಸಾಮಾನ್ಯ ಸಭೆಯಲ್ಲಿ ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳ 2302 ಪ್ರತಿನಿಧಿಗಳು ಭಾಗವಹಿಸಿದ್ದರು.



## ಧ್ವಜಾರೋಹಣ ಹಾಗೂ ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ :

ಬೆಳಿಗ್ಗೆ 9.45ಕ್ಕೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಮತ್ತು ಸಹಕಾರಿಗಳ ಪ್ರತಿನಿಧಿಗಳೆಲ್ಲ ಸೇರಿ ಸಹಕಾರಿ ಧ್ವಜಾರೋಹಣವನ್ನು ನೆರವೇರಿಸಿದರು. ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಬೋಧಿಸಿದರು.

## ತಂತ್ರಜ್ಞಾನ ಮೇಳ :

ಪ್ರತಿಸಲದಂತೆ ಈ ಬಾರಿಯೂ ಸಹ ಸೌಹಾರ್ದ ಸಹಕಾರಿಗಳಿಗೆ ಅವರಿಗೆ ಹೆಚ್ಚಿನ ತಂತ್ರಜ್ಞಾನದ ಮಾಹಿತಿಯನ್ನು ಒದಗಿಸುವ ದೃಷ್ಟಿಯಿಂದ ತಂತ್ರಜ್ಞಾನ ಮೇಳವನ್ನು ಏರ್ಪಡಿಸಲಾಗಿತ್ತು. ಈ ಬಾರಿಯ ತಂತ್ರಜ್ಞಾನ ಮೇಳದಲ್ಲಿ 35 ಕಂಪನಿಗಳು ತಮ್ಮ ಕಂಪನಿಯ ವಸ್ತುಗಳ ಮಾರಾಟ ವ್ಯವಸ್ಥೆಯನ್ನು ಹಾಗೂ 5 ಸೌಹಾರ್ದ ಸಹಕಾರಿಗಳು ತಮ್ಮ ಸದಸ್ಯರು ಉತ್ಪಾದಿಸಿದ ವಸ್ತುಗಳ ಮಾರಾಟವನ್ನು ಏರ್ಪಡಿಸಲಾಗಿತ್ತು.. ಈ ತಂತ್ರಜ್ಞಾನ ಮೇಳವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ಎಲ್ಲ ನಿರ್ದೇಶಕರು ಉಪಸ್ಥಿತರಿದ್ದರು.






## ವಾರ್ಷಿಕ ಸಾಮಾನ್ಯ ಸಭೆ :

24ನೇ ವಾರ್ಷಿಕ ಸಾಮಾನ್ಯ ಸಭೆ ಪೂರ್ವ ನಿಗದಿತ ಸಮಯ 10.00 ಗಂಟೆಗೆ ಗಾಯತ್ರಿ ವಿಹಾರ, ಅರಮನೆ ಮೈದಾನ, ಬೆಂಗಳೂರು ಇಲ್ಲಿ ಪ್ರಾರಂಭವಾಯಿತು.

## ಪ್ರಾರ್ಥನೆ :

ಶ್ರೀಮತಿ ಜ್ಯೋತಿ ಪ್ರಕಾಶ ತಂಡದವರಿಂದ ಪ್ರಾರ್ಥನೆ ಸಹಕಾರ ಗೀತೆ ಹಾಗೂ ನಾಡಗೀತೆಯೊಂದಿಗೆ ಪ್ರಾರಂಭಿಸಲಾಯಿತು.



ಪ್ರತಿನಿಧಿಗಳ ಗಮನ ಸೆಳೆದ ಡೊಳ್ಳು ಕುಣಿತ



## ಸ್ವಾಗತ ಹಾಗೂ ನಿರ್ದೇಶಕರ ಪರಿಚಯ :

ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನಕುಮಾರರವರು ಸಭೆಗೆ ಆಗಮಿಸಿದ್ದ ಸೌಹಾರ್ದ ಸಹಕಾರಿಗಳಿಗೆ ಸ್ವಾಗತ ಮಾಡಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳನ್ನು ಸಾಮಾನ್ಯ ಸಭೆಗೆ ಪರಿಚಯಿಸಿದರು.

## ಶ್ರದ್ಧಾಂಜಲಿ :

**ಅಗಲಿದ ಗಣ್ಯರು ಹಾಗೂ ಸಹಕಾರಿಗಳಿಗಾಗಿ ಮೌನಾಚರಣೆ :** ಕಳೆದ ಸಾಲಿನಲ್ಲಿ ನಿಧನರಾದ ಅನೇಕ ಗಣ್ಯಾತಿ ಗಣ್ಯರು, ರಾಜಕಾರಣಿಗಳು, ಸಾಹಿತಿಗಳು, ಚಿತ್ರ ರಂಗದ ಪ್ರಮುಖರು ಹಾಗೂ ಸಹಕಾರಿಗಳ ಹೆಸರುಗಳನ್ನು ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಓದಿದರು. ನಂತರ ಅಗಲಿದ ಎಲ್ಲರಿಗೂ ಶಾಂತಿ ಕೋರಿ ಮೌನ ಆಚರಿಸಲಾಯಿತು.



## ಅಧ್ಯಕ್ಷರ ಪ್ರಾಸ್ತಾವಿಕ ಭಾಷಣ :

ಸಭೆಯ ವಿಷಯಗಳು ಪ್ರಾರಂಭವಾಗುವುದಕ್ಕೆ ಮೊದಲು ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಸಂಯುಕ್ತ ಸಹಕಾರಿಯ ಪ್ರಸಕ್ತ ಸಾಲಿನ ಚಟುವಟಿಕೆಗಳ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿದರು. ಪ್ರಸಕ್ತ ಸಾಲಿನಲ್ಲಿ ಹೊಸದಾಗಿ 280 ಸೌಹಾರ್ದ ಸಹಕಾರಿಗಳು ನೊಂದಣಿಯಾಗಿವೆ. ಈ ವರ್ಷ ಸೌಹಾರ್ದ ಸಹಕಾ–ರಿಗಳಿಗೆ ಸಂಯುಕ್ತ ಸಹಕಾರಿಗೆ ಪ್ರಗತಿ, ಸವಾಲುಗಳು, ಸಾಧನೆಗಳ ಹಾಗೂ ಅಭಿವೃದ್ಧಿಯ ಪರ್ವ ಇದಾಗಿದೆ ಎಂದು ತಿಳಿಸಿದರು. ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷಗಳಾಗಿರುವ ಹಾಗೂ ಅದರಂತೆ ಸೌಹಾರ್ದ ಸಹಕಾರಿ ಚಳುವಳಿಗೂ ಸಹ 25 ವರ್ಷಗಳಾಗಿರುವುದರ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ರಜತ ಮಹೋತ್ಸವವನ್ನು ಆಚರಿಸುತ್ತಿರುವ ಪ್ರಸಕ್ತ ಸಾಲಿನಲ್ಲಿ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗಾಗಿ ತನ್ನ ಶಾಸನಾತ್ಮಕ ಕಾರ್ಯಚಟುವಟಿಕೆಗಳ ಜೊತೆಗೆ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಜರುಗಿಸಿದೆ. ವಿಶೇಷವಾಗಿ ಜನವರಿ 1 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿ ದಿನವನ್ನು ಏಕಕಾಲಕ್ಕೆ 2750 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ಸಹಕಾರಿ ಧ್ವಜಾರೋಹಣವನ್ನು ಮಾಡಿ ಇಂಡಿಯ್ ಬುಕ್ ಆಫ್ ರೆಕಾರ್ಡ ನಲ್ಲಿ ದಾಖಲೆಯಾಗಿರುವುದು ವಿಶೇಷ. ಅನೇಕ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ರಜತಮಹೋತ್ಸವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯ ಅಸ್ತಿತ್ವವನ್ನು ಕಾರ್ಯಾಚರಣೆಯನ್ನು ಸಾರ್ವಜನಿಕರಿಗೆ ಗೊತ್ತುಪಡಿಸಿದ್ದಾರೆ. ವಿಶ್ವ ಸಂಸ್ಥೆಯವರು ಘೋಷಿಸಿದ ಹಾಗೆ ಸಹಕಾರಿ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬಂತೆ ರಾಜ್ಯದ ಸೌಹಾರ್ದ ಸಹಕಾರಿಗಳು ಉತಮ ಸಾಧನೆಗಳನ್ನು ಮಾಡಿ ಸಹಕಾರಿ ಕ್ಷೇತ್ರದಲ್ಲಿ ಮಾದರಿ ಎನಿಸಿಕೊಂಡಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಹೆಮ್ಮೆಯ ವಿಷಯ. ಇದೇ ಸಂದರ್ಭದಲ್ಲಿ ಕೇಂದ್ರ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ರಾಷ್ಟ್ರದಲ್ಲಿ ರಾಷ್ಟ್ರೀಯ ಸಹಕಾರ ನೀತಿಯನ್ನು ಜಾರಿಗೆ ತರಲಾಗಿದೆ. ಸಹಕಾರ ಕ್ಷೇತ್ರದಲ್ಲಿ ಶಿಕ್ಷಣ ಹಾಗೂ ತರಬೇತಿಗಳಿಗೆ ಹೆಚ್ಚಿನ ಮಹತ್ವವನ್ನು ನೀಡುವ ಹಾಗೂ ಕೌಶಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಪ್ರಥಮ ಬಾರಿಗೆ ತ್ರಿಭುವನ ವಿಶ್ವವಿದ್ಯಾಲಯವನ್ನು ಸ್ಥಾಪಿಸಿರುವುದು ಸಹಕಾರಿಗಳಿಗೆ ಸಂತೋಷತರುವಂತಹದ್ದಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳ ಜೊತೆಗೆ ಸಮಾಲೋಚನೆ ಸಭೆಗಳನ್ನು ನಡೆಸಿ ಸೌಹಾರ್ದ ಹಕಾರಿಗಳ ಸಮಸ್ಯೆಗಳಿಗೆ ಸ್ಪಂದಿಸುವ ಕಾರ್ಯನಿರ್ಹಿಸಲಾಗಿದೆ. ರಾಜ್ಯದಾದ್ಯಂತ ಈ ಸಂಪರ್ಕ ಸಭೆಗಳು ಅತ್ಯಂತ ಉತ್ಸಾಹದಿಂದ ನಡೆಸಲಾಗಿದೆ. ಸಹಕಾರಿಗಳು ಉತ್ಸಾಹದಿಂದ ಭಾಗವಹಿಸಿದ್ದಾರೆ. ಗುಣಾತ್ಮಕ ಚರ್ಚೆಗಳಾಗಿವೆ. ಇವೆಲ್ಲವೂ ನಮ್ಮ ಅಭಿವೃದ್ಧಿಗೆ ಪೂರಕ ಎಂದು ತಿಳಿಸಿದರು.

ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ಚಳುವಳಿಯ ಪ್ರಗತಿ: ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯು ಜನವರಿ 01, 2001 ರಿಂದ ಜಾರಿಯಾಗಿದೆ. ಇದಕ್ಕೆ ಸಂಬಂಧಿಸಿದ ನಿಯಮಗಳು ಸಹ ರಚನೆಗೊಂಡು 2004 ರಿಂದ ಜಾರಿಯಲ್ಲಿರುತ್ತವೆ. ಸೌಹಾರ್ದ ಸಹಕಾರಿ ಕಾಯ್ದೆಗೆ ಇದುವರೆಗೆ 07 ಬಾರಿ (2004, 2005, 2013, 2014, 2016, 2017, 2021ರಲ್ಲಿ) ತಿದ್ದುಪಡಿಗಳಾಗಿವೆ. ಇನ್ನು ಕೆಲವು ವಿಷಯಗಳು ತಿದ್ದುಪಡಿಯ ಹಂತದಲ್ಲಿವೆ. ಈ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಹಾಗೂ ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ, ಈ ಧ್ಯೇಯಗಳಿಗೆ ಅನುಗುಣವಾಗಿ ಇರಬೇಕೆಂದು ಸೌಹಾರ್ದ ಸಹಕಾರಿಗಳು ಅಪೇಕ್ಷಿಸುತ್ತಾರೆ. ಇದಕ್ಕೆ ಸರ್ಕಾರವು ಸ್ಪಂದಿಸಬೇಕೆಂದು ಸೌಹಾರ್ದ ಸಹಕಾರಿಗಳ ಒತ್ತಾಸೆಯಾಗಿದೆ. ಈ ಬಗ್ಗೆ ತಿದ್ದುಪಡಿಗಳಾದಗಲೆಲ್ಲಾ ಸರ್ಕಾರಕ್ಕೆ ಹಾಗೂ ಸಹಕಾರ ಇಲಾಖೆಯ ಸಚಿವರುಗಳಿಗೆ, ಇಲಾಖೆಯ ಮುಖ್ಯಸ್ಥರುಗಳ ಜೊತೆಗೆ ಬಾದಕ ಅಂಶಗಳ ಬಗ್ಗೆ ಚರ್ಚಿಸಿ ಮನವಿ ಮಾಡುತ್ತಾ ಬರಲಾಗಿದೆ.

ಹೆಚ್ಚಿನ ಠೇವಣಿ ಹೊಂದಿರುವ ದೊಡ್ಡ ದೊಡ್ಡ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ನಡೆಸಿ ಅಂತಹ ಸಂಸ್ಥೆಗಳಲ್ಲಿ ಕಂಡುಬರುವ ನ್ಯೂನ್ಯತೆ,

ಲೋಪಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿ ನಿರಂತರ ಶ್ರಮಿಸುತ್ತಿದೆ. ಸಮಸ್ವಾತ್ಮಕ ಸೌಹಾರ್ದ ಸಹಕಾರಿಗಳ ಮೇಲೆ ನಿರಂತರ ನಿಗಾವಹಿಸಲು "ಟಾಸ್ಕ್‌ಫೋರ್ಸ್" ವಿಭಾಗವು ನಿರಂತರ ಶ್ರಮಿಸುತ್ತಿದೆ. ಸೌಹಾರ್ದ ಸಹಕಾರ ಕ್ಷೇತ್ರದ ಗುಣಮಟ್ಟ ಹೆಚ್ಚಿಸುವಲ್ಲಿ ಸೌಹಾರ್ದ ಸಹಕಾರಿಗಳ ಪಾತ್ರ ಹೆಚ್ಚಿನ ಮಹತ್ವದ್ದಾಗಿದೆ. ಜವಾಬ್ದಾರಿಯುತ ಆಡಳಿತ ಮಂಡಳಿ ಹಾಗೂ ಕ್ರಿಯಾಶೀಲ ಸದಸ್ಯತ್ವದೊಂದಿಗೆ ಈ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಲು ತಮ್ಮೆಲ್ಲರಲ್ಲಿ ವಿನಂತಿ ಮಾಡುತ್ತೇನೆ.

ಸಂಪರ್ಕ ಸಭೆಗಳಲ್ಲಿ ಸಹಕಾರಿಗಳ ಕ್ರಿಯಾಶೀಲ ಭಾಗವಹಿಸುವಿಕೆ: ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ನಿರ್ದೇಶಕರುಗಳನ್ನು ಒಳಗೊಂಡಂತೆ ರಾಜ್ಯಾದ್ಯಂತ ಪ್ರವಾಸಗಳನ್ನು ಮಾಡುವ ಮೂಲಕ ಹಾಗೂ ಸಂಪರ್ಕ ಸಭೆಗಳನ್ನು ಆಯೋಜಿಸಿ ಪಾಲ್ಗೊಳ್ಳುವ ಮೂಲಕ ಈ ಕ್ಷೇತ್ರದ ಅಗತ್ಯತೆ, ಸಹಕಾರಿಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳುವ ಕೆಲಸವನ್ನು ಮಾಡಲಾಗಿದೆ. 2025–26ನೇ ಸಾಲಿನಲ್ಲಿ ರಾಜ್ಯಾದ್ಯಂತ 26 ಸಂಪರ್ಕ ಸಭೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಗಳಲ್ಲಿ ರಾಜ್ಯದ 2717 ಸೌಹಾರ್ದ ಸಹಕಾರಿಗಳಿಂದ 5874 ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಂಪರ್ಕ ಸಭೆಯಲ್ಲಿ ಸಹಕಾರಿಗಳು ನೀಡಿರುವ ಸಲಹೆ/ಅಭಿಪ್ರಾಯಗಳನ್ನಾಧರಿಸಿ ಸೂಕ್ತ ಕಾರ್ಯಯೋಜನೆಯೊಂದಿಗೆ ಈ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಲು ನಾವು ಸಿದ್ಧರಾಗಿದ್ದೇವೆ. ಈ ಸಭೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೌಹಾರ್ದ ಸಹಕಾರಿಗಳು ಕ್ರಿಯಾಶೀಲವಾಗಿ ಭಾಗವಹಿಸಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು, ಸಲಹೆ ನೀಡಿರುವುದನ್ನು ಸಂತೋಷದಿಂದ ಸ್ವೀಕರಿಸಿದ್ದೇನೆ ಹಾಗೂ ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟವನ್ನು ಎತ್ತರಕ್ಕೇರಿಸಬೇಕು. ಸಮಸ್ವಾತ್ಮಕ ಸೌಹಾರ್ದ ಸಹಕಾರಿಗಳು ಇರದಂತೆ ಕ್ರಮವಹಿಸಬೇಕು. ಎಲ್ಲ ಸೌಹಾರ್ದ ಸಹಕಾರಿಗಳು ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡು ಕಾರ್ಯನಿರ್ವಹಿಸಬೇಕು ಎಂಬುದು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ಅಪೇಕ್ಷೆ.



### ವಿಷಯಗಳ ಮಂಡನೆ :

ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ವಾರ್ಷಿಕ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ಅನುಕ್ರಮವಾಗಿ ವಿಷಯಗಳನ್ನು ಮಂಡಿಸಿದರು. ಪ್ರತಿಯೊಂದು ವಿಷಯದ ಬಗ್ಗೆ ಕೂಲಂಕುಷ ಸುದೀರ್ಘ ಚರ್ಚೆಗಳ ನಂತರ ಸಭೆಯು ಸರ್ವಾನುಮತದಿಂದ ಎಲ್ಲ ವಿಷಯಗಳನ್ನು ಅನುಮೋದಿಸಿತು.

### ವಂದನಾರ್ಪಣೆ :

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ವಂದನಾರ್ಪಣೆ ಮಾಡಿದರು.





ಭಾಗವಹಿಸಿದ ಸಹಕಾರಿಗಳು






ಸಭೆಯಲ್ಲಿ ಮಾತನಾಡಿದ ಪ್ರತಿನಿಧಿಗಳು

# ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷ
# ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 25 ವರ್ಷ
## “ರಜತ ಮಹೋತ್ಸವ” ಸಂಭ್ರಮ ಅದ್ದೂರಿಯ ಉದ್ಘಾಟನಾ ಕಾರ್ಯಕ್ರಮ.




ಉದ್ಘಾಟನೆ

---

### ಸಹಕಾರಿ ಸಂಸ್ಥೆಗಳು ಶ್ರೀ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕೇಂದ್ರಗಳು : ಶ್ರೀ ಪ್ರಹ್ಲಾದ ಜೋಶಿ, ಮಾನ್ಯ ಸಚಿವರು, ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ, ಭಾರತ ಸರ್ಕಾರ, ನವದೆಹಲಿ.



ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ಹಾಗೂ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಗೆ 25 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಆಚರಿಸಲಾಗುತ್ತಿರುವ ರಜತ ಮಹೋತ್ಸವದ ಉದ್ಘಾಟನೆಯನ್ನು ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಸಚಿವರಾದ ಶ್ರೀ ಪ್ರಹ್ಲಾದ ಜೋಶಿಯವರು ಉದ್ಘಾಟಿಸಿ ಮಾತನಾಡುತ್ತ ಸಹಕಾರ ಕ್ಷೇತ್ರ ಈ ದೇಶದಲ್ಲಿ ಕಳೆದ 121 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ದೇಶದ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಈ ದೇಶದ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತಿದೆ. ಎಂದು ತಿಳಿಸಿದ ಸಚಿವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಪ್ರಾರಂಭವಾಗಿ 25 ವರ್ಷಗಳು ತುಂಬಿರುವ ಹಿನ್ನೆಲೆಯಲ್ಲಿ ರಜತಮಹೋತ್ಸವವನ್ನು ಆಚರಿಸುತ್ತಿರುವುದು ಸಮಯೋಚಿತವಾಗಿದೆ. ಇಂತಹ ಆಚರಣೆಗಳಿಂದ ಈ ಕ್ಷೇತ್ರದ ಸಹಕಾರಿಗಳಿಗೆ ಹೆಚ್ಚಿನ ಉತ್ಸಾಹವನು ತುಂಬಿದಂತಾಗುತ್ತದೆ ಮತ್ತು ಸಾರ್ವಜನಿಕವಾಗಿ ಸಹಕಾರಿ ಕ್ಷೇತ್ರದ ಅಸ್ತಿತ್ವದ ಬಗ್ಗೆ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮತ್ತು ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾದ ಮೇಲೆ ತೆಗೆದುಕೊಂಡ ಅನೇಕ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

---




ಸಂಯುಕ್ತ ಸಹಕಾರಿಯ ಪರಿಷ್ಕೃತ ಪ್ರಕಟಣೆಗಳ ಬಿಡುಗಡೆ




ಸ್ಮರಣ ಸಂಚಿಕೆ ಪುಸ್ತಕ ಬಿಡುಗಡೆ



## ಸಾರ್ವಜನಿಕರ ನಂಬಿಕೆ ಉಳಿಸಿಕೊಳ್ಳಿ : ಶ್ರೀ ಡಿ. ಸುಧಾಕರ, ಮಾನ್ಯ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶ್ರೀ ಡಿ. ಸುಧಾಕರ ಮಾನ್ಯ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ. ಇವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಯ ಬೆಳವಣಿಗೆ ಬಹಳ ಉತ್ತಮವಾಗಿದೆ. ಸಾಧನೆ ಸಾರ್ವಜನಿಕರು ಮೆಚ್ಚುವಂತಹದ್ದಾಗಿದೆ. ಈ ನಂಬಿಕೆಯನ್ನು ಯಾವಾಗಲೂ ಉಳಿಸಿ ಬೆಳಸಿಕೊಂಡು ಹೋಗುವಂತಹದ್ದಾಗಬೇಕು. ಕೇಂದ್ರ ಸರಕಾರ ನಬಾರ್ಡ ಮೂಲಕ ನೀಡುತ್ತಿದ್ದ ಸಬ್ಸಿಡಿಯನ್ನು ಶೇ. 12% ಇಳಿಸಿದೆ. ಇದರಿಂದ ಲಕ್ಷಾಂತರ ರೈತರಿಗೆ ಅನ್ಯಾಯವಾಗಿದೆ ಕೇಂದ್ರ ಇದರ ಬಗ್ಗೆ ಗಮನಹರಿಸಬೇಕು ಎಂದು ತಿಳಿಸಿ ರಾಜ್ಯದ ಸೌಹಾರ್ದ ಸಕಾರಿ ಕ್ಷೇತ್ರದ ಈ ರಜತ ಮಹಹೋತ್ಸವ ಯಶಸ್ವಿಯಾಗಲಿ ಎಂದು ತಿಳಿಸಿದರು.

## ಸಹಕಾರಿ ಕ್ಷೇತ್ರ ಸಮಾಜದ ಆರ್ಥಿಕ ಅಭಿವೃದ್ಧಿಯ ಅವಿಭಾಜ್ಯ ಅಂಗ : - ಶ್ರೀ ಬಿ. ಆರ್ ಪಾಟೀಲ, ಮಾನ್ಯ ಶಾಸಕರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು



ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಶ್ರೀ ಬಿ.ಆರ್ ಪಾಟೀಲ ಮಾನ್ಯ ಶಾಸಕರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು ಇವರು ಸಹಕಾರ ಕ್ಷೇತ್ರ ಸಮಾಜದ ಆರ್ಥಿಕ ಹಾಗೂ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಈ ದೇಶದ ರೈತರ ಹಾಗೂ ಕೃಷಿ, ಹೈನುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರವನ್ನು ನೀಡಿರುವ ಈ ಸಹಕಾರ ಚಳುವಳಿ ಇನ್ನೂ ಹೆಚ್ಚು ಬಲಿಷ್ಠವಾಗಿ ಕಾರ್ಯನಿರ್ವಹಿಸಬೇಕು. ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆದಿದೆ. ಸಂಯುಕ್ತ ಸಹಕಾರಿಯು ಉತ್ತಮವಾಗಿ ಈ ಕ್ಷೇತ್ರದ ನಿರ್ವಹಣೆ ಮಾಡುತ್ತಿದ್ದಾರೆ. ಈ ಸೌಹಾರ್ದ ಸಹಕಾರ ಕ್ಷೇತ್ರದ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಆಚರಣೆಗಳು ಹೆಚ್ಚು ಪರಿಣಾಮಕಾ–ರಿಯಾಗಿ ಜರುಗಿದೆ. ಸೌಹಾರ್ದ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳು ಹೆಚ್ಚು ಜನಪ್ರಿಯವಾಗಲಿ ಎಂದು ತಿಳಿಸಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಶುಭಕೋರಿದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರರವರು ಸ್ವಾಗತ ಕೋರಿದರು. ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಕೃಷ್ಣಾರೆಡ್ಡಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಶ್ರೀ ಅರಗ ಜ್ಞಾನೇಂದ್ರ, ಮಾನ್ಯ ಮಾಜಿ ಸಚಿವರು ಹಾಗೂ ಹಾಲಿ ಶಾಸಕರು, ತೀರ್ಥಹಳ್ಳಿ, ವಿಧಾನಸಭಾ ಕ್ಷೇತ್ರ, ಕರ್ನಾಟಕ ಸರ್ಕಾರ, ನಾಡೋಜ ಶ್ರೀ ಜಗದೀಶ ಗುಡಗುಂಟಿ ಮಾನ್ಯ ಶಾಸಕರು, ಜಮಖಂಡಿ ವಿಧಾನಸಭಾ ಕ್ಷೇತ್ರ ಹಾಗೂ ಮಾನ್ಯ ಅಧ್ಯಕ್ಷರು ಪ್ರಭುಲಿಂಗೇಶ್ವರ ಸೌಹಾರ್ದ ಸಹಕಾರಿ ನಿ., ಜಮಖಂಡಿ, ಶ್ರೀ ಸುನೀಲಗೌಡ ಪಾಟೀಲ ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಮಾನ್ಯ ಅಧ್ಯಕ್ಷರು, ಬಿ.ಎಲ್.ಡಿ. ಸೌಹಾರ್ದ ಸಹಕಾರಿ ನಿ., ಬಿಜಾಪುರ. ಶ್ರೀ ಯಶಪಾಲ ಸುವರ್ಣ, ಮಾನ್ಯ ಶಾಸಕರು ಹಾಗೂ ಮಾನ್ಯ ಅಧ್ಯಕ್ಷರು ಮೀನು ವ್ಯಾಪಾರಸ್ಥರ ವಿವಿದೋದ್ದೇಶಗಳ ಸೌಹಾರ್ದ ಸಹಕಾರ ಸಂಘ ನಿ., ಉಡುಪಿ, ಶ್ರೀ ಹನುಮಂತ ನಿರಾಣಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಹಾಗೂ ಅನೇಕ ಹಿರಿಯ ಸಹಕಾರಿ ಮುಖಂಡರು ಉಪಸ್ಥಿತರಿದ್ದರು. ರಾಜ್ಯದ ಸೌಹಾರ್ದ ಸಹಕಾರಿಗಳಿಂದ 4500ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

## 2024ನೇ ಸಾಲಿನ ಸಹಕಾರ ರತ್ನ ಪುರಸ್ಕೃತರಿಗೆ - ಶ್ರೇಷ್ಠ ಸಹಕಾರಿಗಳಿಗೆ - ಉತ್ತಮ ಸೌಹಾರ್ದ ಸಹಕಾರಿಗಳಿಗೆ ಸನ್ಮಾನ ಕಾರ್ಯಕ್ರಮ

### ಸನ್ಮಾನಿತರಾದ ಉತ್ತಮ ಸೌಹಾರ್ದ ಸಹಕಾರಿಗಳು

1. ಹರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ದಾವಣಗೆರೆ.
2. ಸಮನ್ವಯ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು
3. ಹೈದ್ರಬಾದ ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿ., ಶಹಾಪುರ
4. ದಿ.ಶಿಂದೋಳ್ಳಿ ಅರ್ಬನ್ ಕ್ರೇಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ,ಶಿಂದೋಳ್ಳಿ

5. ಶ್ರೀ ಗುರುಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಸಿಂದಗಿ, ವಿಜಯಪುರ

### ಸನ್ಮಾನಿತರಾದ ಶ್ರೇಷ್ಠ ಸಹಕಾರಿಗಳು

1. ಶ್ರೀ ಆರ್. ನಾಗೇಂದ್ರ ಗುಪ್ತ, ಅಧ್ಯಕ್ಷರು ಅಕ್ಷಯ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್ ಲಿ., ಚಿಕ್ಕಬಳ್ಳಾಪುರ
2. ಶ್ರೀ ನವೀನ್ ಚಂದ್ರ ಎಸ್ ಸುವರ್ಣ, ಅಧ್ಯಕ್ಷರು ಅಡ್ವೆ ವಿವಿದೋದ್ದೇಶ ಸೌಹಾರ್ದ ಪತ್ತಿನ ಸಹಕಾರಿ ನಿ., ಉಡುಪಿ
3. ಶ್ರೀ ವಜ್ರಗಿರಿ ನಟರಾಜ, ಅಧ್ಯಕ್ಷರು ವಿಶ್ವಸಿರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಳ್ಳಾರಿ
4. ಡಾ. ಚಂದ್ರಕಾಂತ ಕುರುಬೆಟ್ಟಿ, ಸಂಸ್ಥಾಪಕ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ. ನಿಪ್ಪಾಣಿ, ಬೆಳಗಾವಿ
5. ಶ್ರೀ ಉದಯ ಕುರ್ಡೇಕರ, ಅಧ್ಯಕ್ಷರು ಶ್ರೀ ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ ನಿ. ಹಾವೇರಿ.




ಉತ್ತಮ ಸಹಕಾರಿ ಪ್ರಶಸ್ತಿ ಪುರಸ್ಕೃತರು



ಶ್ರೇಷ್ಠ ಸಹಕಾರಿ ಪ್ರಶಸ್ತಿ ಪುರಸ್ಕೃತರು

## 2024ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ :

### ಸಹಕಾರ ರತ್ನ ಪುರಸ್ಕೃತರು :

1. ಶ್ರೀ ಡಿ. ಸುಧಾಕರ್, ಮಾನ್ಯ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಮಾನ್ಯ ಅಧ್ಯಕ್ಷರು, ಹೊಯ್ಸಳ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ
2. ಶ್ರೀ ಆರ್ ಮಲ್ಲೇಶಪ್ಪ, ಮಾನ್ಯ ನಿರ್ದೇಶಕರು, ಚಳ್ಳಕೆರೆ ರೇವಣಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿತ್ರುದುರ್ಗ
3. ಶ್ರೀ ಜಿ. ಎನ್ ಹೆಗಡೆ ಹಿರೆಸರ, ಮಾನ್ಯ ಅಧ್ಯಕ್ಷರು, ಶ್ರೀಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಮ್ಮಚಗಿ
4. ಶ್ರೀ ನಾಗಲಿಂಗಪ್ಪ ಬಾಳಪ್ಪ ಪತ್ತಾರ, ಮಾನ್ಯ ಅಧ್ಯಕ್ಷರು, ಸ್ವಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ
5. ಶ್ರೀ ನವೀನ್ ಭಂಡಾರಿ, ಮಾನ್ಯ ಅಧ್ಯಕ್ಷರು, ಸುಂದರರಾಮ್ ಶೆಟ್ಟಿ ನಗರ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು
6. ಶ್ರೀ ಎಸ್ ಎನ್ ವಿಶ್ವನಾಥ್, ಮಾನ್ಯ ಅಧ್ಯಕ್ಷರು, ಹಿಮಗಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೊಪ್ಪ
7. ಶ್ರೀ ಎಸ್ ಲಕ್ಷ್ಮೀ ನಾರಾಯಣ್, ಮಾನ್ಯ ಅಧ್ಯಕ್ಷರು, ತುಮಕೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ತುಮಕೂರು
8. ಶ್ರೀ ದೊಡ್ಡಪ್ಪ ದೇಸಾಯಿ, ಮಾನ್ಯ ಅಧ್ಯಕ್ಷರು, ಶ್ರೀ ಹೇಮರೆಡ್ಡಿ ಮಲ್ಲಮ್ಮ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ
9. ಶ್ರೀ ಆರ್.ಕೆ ಪಾಟೀಲ್, ಮಾನ್ಯ ಅಧ್ಯಕ್ಷರು, ಸಮೃದ್ಧ ಸೌಹಾರ್ದ ಸಹಕಾರಿ ನಿಯಮಿತ, ಕಲಬುರಗಿ
10. ಶ್ರೀ ಸೈಯದ್ ಮೆಹಬೂಬ್‌ಪಾಷ, ಮಾನ್ಯ ಅಧ್ಯಕ್ಷರು, ತುಮಕೂರು ನವಚೇತನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ನಿ., ಚೆಳ್ಳಕೆರೆ, ತುಮಕೂರು
11. ಶ್ರೀ ವಿನಯಕುಮಾರ್ ಸೂರಿಂಜೆ, ಮಾನ್ಯ ನಿರ್ದೇಶಕರು, ನವೋದಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು, ದಕ್ಷಿಣ ಕನ್ನಡ
12. ಶ್ರೀ ಮುರಗೆಪ್ಪ ಸಂಗನಬಸಪ್ಪ ಸರಶೆಟ್ಟಿ, ಮಾನ್ಯ ನಿರ್ದೇಶಕರು, ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತಾಳಿಕೋಟೆ
13. ಶ್ರೀ ಮುರುಗೇಶ್ ಆಯ್ ಕಡ್ಲಿಮಟ್ಟಿ, ವಿಕಾಸ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಕಮತಗಿ, ಬಾಗಲಕೋಟೆ
14. ಶ್ರೀ ಬಾಬುರಾವ ವಿ ಕುಂಬಾರ, ಸರ್.ಎಮ್.ವಿಶ್ವೇಶ್ವರಯ್ಯಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ
15. ಶ್ರೀ ನಿಂಗನಗೌಡ ಮುದ್ದಿಗೌಡ ಮರಿಗೌಡ್ರು, ಮಾನ್ಯ ನಿರ್ದೇಶಕರು ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿಯಮಿತ ಧಾರವಾಡ





# 24ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸೌಹಾರ್ದ ಸಹಕಾರಿಗಳ ರಜತ ಮಹೋತ್ಸವ ಕಾರ್ಯಕ್ರಮದ ಕುರಿತು ಮನದಾಳದ ಮಾತು

**ಶರಣಗೌಡ ಜಿ. ಪಾಟೀಲ**
**ವ್ಯವಸ್ಥಾಪಕ ನಿರ್ದೇಶಕ**

ಸಂಯುಕ್ತ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆ, ರಜತ ಮಹೋತ್ಸವ ಯಶಸ್ಸಿಗೆ ರಾಜ್ಯದ ಸೌಹಾರ್ದ ಸಹಕಾರಿಗಳು, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಪ್ರೋತ್ಸಾಹ ಹಾಗೂ ಸಿಬ್ಬಂದಿ ವರ್ಗದವರ ಶ್ರಮ ಶ್ಲಾಘನೀಯ ಅಭಿನಂದನೀಯ.

ಸೌಹಾರ್ದ ಸಹಕಾರಿ ಕ್ಷೇತ್ರದ 25 ವರ್ಷಗಳ ಸಾಧನೆಗಳನ್ನು ಮೆಲುಕು ಹಾಕುವ ಸವಾಲುಗಳು ಎದುರಿಸುವ ಬಗ್ಗೆ ಕ್ರಿಯಾಯೋಜನೆ ಸಿದ್ಧಪಡಿಸುವುದು ಮತ್ತು ಪ್ರಗತಿಯ ಪರ್ವದತ್ತ ಹೆಜ್ಜೆ ಇಡುವ ಈ 24ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ರಜತ ಮಹೋತ್ಸವದ ಪ್ರತಿಯೊಂದು ಕಾರ್ಯದಲ್ಲಿ ಎಲ್ಲರೂ ಸಮರ್ಪಿಸಿಕೊಂಡು ಕಾರ್ಯನಿರ್ವಹಿಸಿರುವುದು ಅತ್ಯಂತ ಹೆಮ್ಮೆ ಪಡುವ ವಿಷಯ. ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕ ಹಾಗೂ ರಜತಮಹೋತ್ಸವ ಆಚರಣೆಯ ದಿನಾಂಕ ನಿಗದಿಪಡಿಸಿದ ದಿನದಿಂದ ಅಧ್ಯಕ್ಷರು, ಆಡಳಿತ ಮಂಡಳಿ ಎಲ್ಲ ಸದಸ್ಯರು ಕ್ರಿಯಾಶೀಲರಾಗಿ ತಮ್ಮ ತಮ್ಮ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮಾಹಿತಿ ರವಾನೆಯ ಕಾರ್ಯದಲ್ಲಿ ನಿರತರಾದದ್ದು ಅವರ ಕಾರ್ಯಕ್ಷಮತೆ ಕಾರ್ಯದಕ್ಷತೆಯನ್ನು ಮೆಚ್ಚುವಂತಹದ್ದು.

ಮಾನ್ಯ ಅಧ್ಯಕ್ಷರು ಈ ಬಾರಿ ರಾಜ್ಯದ 27 ಕೇಂದ್ರಗಳಲ್ಲಿ ಸಂಪರ್ಕ ಸಭೆಗಳನ್ನು ನಡೆಸಿದ್ದಾರೆ. ಈ ಸಂಪರ್ಕ ಸಭೆಗಳಲ್ಲಿ ಆಯಾ ಜಿಲ್ಲೆಗಳ ನಿರ್ದೇಶಕರುಗಳು ಸಕ್ರೀಯವಾಗಿ ಭಾಗವಹಿಸಿದ್ದಾರೆ. ಈ ಸಂಪರ್ಕ ಸಭೆಗಳಲ್ಲಿ ರಾಜ್ಯದ 2717 ಸೌಹಾರ್ದ ಸಹಕಾರಿಗಳ 5874 ಪ್ರತಿನಿಧಿಗಳು ಭಾಗವಹಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಚಿಂತನ ಮಂಥನ ನಡೆಸಿದ ಸಂದರ್ಭದಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ಬಗ್ಗೆ ಮತ್ತು ರಜತ ಮಹೋತ್ಸವ ರೂಪರೇಷೆಗಳ ಆಚರಣೆ ಬಗ್ಗೆ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಪಡೆದಿರುವುದು ಎಲ್ಲವೂ ಒಂದು ಟೀಮ್‌ವರ್ಕನಂತೆ ಕೆಲಸ ನಿರ್ವಹಿಸಿ ಯಶಸ್ಸು ಕಾಣಲು ಸಾಧ್ಯವಾಗಿದೆ. ಪರಿಣಾಮವಾಗಿ 24ನೇ ವಾರ್ಸಿಕ ಸಾಮಾನ್ಯ ಸಭೆಗೆ 2302 ಹೆಚ್ಚಿನ ಹಾಜರಾತಿ ಸರ್ವಕಾಲಿಕ ದಾಖಲಾಗಿದೆ. ಆದರಿಂದ ಎಲ್ಲರಿಗೂ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಯುಕ್ತ ಸಹಕಾರಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಉಪಸಿಬ್ಬಂದಿ ವರ್ಗದವರು ಎಲ್ಲರೂ ತಮಗೆ ವಹಿಸಿದ ಕಾರ್ಯಗಳನ್ನು ಅತ್ಯಂತ ಶ್ರದ್ಧಾಪೂರ್ವಕವಾಗಿ ದಕ್ಷತೆಯಿಂದ ನಿರ್ವಹಿಸಿದ್ದಾರೆ. ಎಲ್ಲಾ ಜಿಲ್ಲೆಗಳ ಸೌಹಾರ್ದ ಸಹಕಾರಿ ಅಭಿವೃದ್ಧಿ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಪ್ರತಿನಿಧಿಗಳಿಗೆ ಮಾಹಿತಿ ನೀಡುವುದು ಅವರ ಭಾಗವಹಿಸುವಿಕೆ ಬಗ್ಗೆ ಧೃಡಿಕರಿಸುವುದು ಮತ್ತು ಭಾಗವಹಿಸುವಂತೆ ಜ್ಞಾಪಿಸುವುದು ಈ ಎಲ್ಲ ಕೆಲಸಗಳನ್ನು ಬಹಳ ಅಚ್ಚು ಕಟ್ಟಾಗಿ ನಿರ್ವಹಿಸಿರುವುದು ಆಡಳಿತ ಮಂಡಲಿಯವರ ಮೆಚ್ಚುಗೆಗೆ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅದರಂತೆ ಪ್ರಾಂತೀಯ ಅಧಿಕಾರಿಗಳು ಅವರ ವಿಭಾಗಗಳ ನೇತೃತ್ವ ವಹಿಸಿ ಪ್ರತಿನಿಧಿಗಳಿಗೆ ಮಾರ್ಗದರ್ಶನ ಮಾಡುತ್ತ ಕಾರ್ಯಕ್ರಮಗಳ ಬಗ್ಗೆ ವಿವರ ನೀಡುತ್ತ ಜಿಲ್ಲಾ ಸೌಹಾರ್ದ ಸಹಕಾರಿ ಅಧಿಕಾರಗಳಿಗೆ ಆಗಿಂದ್ದಾಗೆ ಮಾರ್ಗದರ್ಶನ ಮಾಡುತ್ತ ಉತ್ತಮವಾಗಿ ಕಾರ್ಯನಿರ್ವಹಿಸಿರುವುದು ಈ ಯಶಸ್ಸಿನ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾದ ಅತಿಥಿ ಗಣ್ಯರ ಬಗ್ಗೆ ಆಡಳಿತ ಮಂಡಳಿಯವರು ತೆಗೆದುಕೊಂಡ ತೀರ್ಮಾನ ಸ್ವಾಗತಾರ್ಹವಾಗಿದೆ. ಆಮಂತ್ರಿಸಿದ ಅತಿಥಿ ಗಣ್ಯರಾದ ಶ್ರೀ ಪ್ರಹ್ಲಾದ ಜೋಶಿ ಮಾನ್ಯ ಸಚಿವರು, ಕೇಂದ್ರ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ, ಭಾರತ ಸರ್ಕಾರ, ನವದೆಹಲಿ. ಶ್ರೀ ಡಿ. ಸುಧಾಕರ ಮಾನ್ಯ ಸಚಿವರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ. ಶ್ರೀ ಬಿ. ಆರ್ ಪಾಟೀಲ ಮಾನ್ಯ ಶಾಸಕರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗ, ಕರ್ನಾಟಕ ಸರ್ಕಾರ, ಬೆಂಗಳೂರು ಮತ್ತು ವಿಧಾನಸಭಾ ಸದಸ್ಯರುಗಳಾದ ಮತ್ತು ಮಾಜಿ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ, ಹಾಲಿ ಶಾಸಕರುಗಳಾದ ಶ್ರೀ ನಾಡೋಜ ಶ್ರೀ ಜಗದೀಶ ಗುಡಗುಂಟಿ, ಶ್ರೀ ಯಶಪಾಲ ಸುವರ್ಣ, ವಿಧಾನ ಪರಿಷತ್ ಸದಸ್ಯರಾದ ಶ್ರೀ ಹನಮಂತ ನಿರಾಣಿ, ಶ್ರೀ ಸುನೀಲಗೌಡ ಪಾಟೀಲ್ ಮುಂತಾದವರು ಬಹಳ ಆಸಕ್ತಿಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿರುವುದು ಅತ್ಯಂತ ಸಂತೋಷದ ವಿಷಯ.

ಕಾರ್ಯಕ್ರಮದ ಸ್ಥಳ ನಿಯೋಜನೆಗಾಗಿ ಆಡಳಿತ ಮಂಡಳಿಯವರು ವಿಚಾರ ಮಾಡಿ ಅರಮನೆ ಮೈದಾನದ ಗಾಯತ್ರಿ ವಿಹಾರವನ್ನು ಆಯ್ಕೆ ಮಾಡಿದರು. ಗಾಯತ್ರಿ ವಿಹಾರದವರು ಈ ಎರಡೂ ಕಾರ್ಯಕ್ರಮಗಳಿಗೆ ಅಗತ್ಯವಾಗುವ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಒದಗಿಸಿದ್ದಾರೆ. ಅದರಂತೆ ರುಚಿಯಾದ ಸವಿಯಾದ ಉಪಹಾರ, ಊಟ, ಕಾಫೀ, ಟೀ, ಸ್ನಾಕ್ಸ್‌ಗಳನ್ನು ಸಮಯಕ್ಕೆ ಮತ್ತು ಅಗತ್ಯ ವ್ಯವಸ್ಥೆಗಳಿಗೆ ಅನುಸಾರವಾಗಿ ಸರಬರಾಜು ಮಾಡಿದ ಎ. ಎಸ್. ಗ್ರೂಪ್ ಕೇಟರರ್ಸ್ ಬೆಂಗಳೂರು ಇವರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ನನ್ನ ವೈಯಕ್ತಿಕವಾಗಿ ಕೃತಜ್ಞತೆಗಳು.

ಹಿಂದಿನ ಪುಟದಿಂದ...

ಈ ಬಾರಿಯ ತಂತ್ರಜ್ಞಾನ ಮೇಳದಲ್ಲಿ ಪ್ರತಿ ವರ್ಷಕ್ಕಿಂತ ಹೆಚ್ಚಿನ ಕಂಪನಿಯವರು ತಂತ್ರಜ್ಞಾನ ಮಾಹಿತಿ ನೀಡುವುದಕ್ಕಾಗಿ ಭಾಗವಹಿಸಿರುವುದು ವಿಶೇಷ. ಈ ತಂತ್ರಜ್ಞಾನ ಮೇಳದಿಂದ ಸೌಹಾರ್ದ ಸಹಕಾರಿಗಳಿಗೆ ಹೆಚ್ಚಿನ ತಂತ್ರಜ್ಞಾನ ಪ್ರಸಾರ ಮಾಡಿದ್ದಂತಾಗಿದೆ. ಈ ತಂತ್ರಜ್ಞಾನ ಮೇಳದಲ್ಲಿ ಭಾಗವಹಿಸಿದ ಎಲ್ಲಾ ಕಂಪನಿಗಳಿಗೂ ನನ್ನ ಕೃತಜ್ಞತೆಗಳು.

ಸಂಯುಕ್ತ ಸಹಕಾರಿಯು ಇಂತಹ ದೊಡ್ಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಾಗ (ಮೆಗಾ ಇವೆಂಟ್) ಹಲವು ಸುತ್ತಿನ ಸಭೆಗಳನ್ನು ನಡೆಸಲಾಗುತ್ತದೆ. ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಈ ಸಭೆಗಳ ಅಧ್ಯಕ್ಷತೆ ವಹಿಸಿ ನಿರ್ವಹಿಸಲಾಗುವ ಎಲ್ಲ ಕೆಲಸ ಕಾರ್ಯಗಳ ಪಟ್ಟಿ ಮಾಡಿ (ಚೆಕ್‌ಲಿಸ್ಟ್) ಮಾಡಿದ ನಂತರ ಕಾರ್ಯಗಳನ್ನು ವಿಂಗಡನೆ ಮಾಡಲಾಗುತ್ತದೆ. ನಂತರ ಕೆಲಸ ಕಾರ್ಯಗಳ ನಿರ್ವಹಣೆಗಾಗಿ ಅಧಿಕಾರಿಗಳ ನೇತೃತ್ವ ಅವರಿಗೆ ಸಹಯೋಗ ನೀಡುವ ಅಧಿಕಾರಿಗಳು ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತದೆ. ಈ ರೀತಿ ಕಾರ್ಯನಿರ್ವಹಣಾ ಆದೇಶವನ್ನು ಹೊರಡಿಸಿದ ನಂತರ ಆಯಾ ವಿಭಾಗದ ಕಾರ್ಯನಿರ್ವಹಣೆಯನ್ನು ನಿಯೋಜಿತ ಅಧಿಕಾರಿಗಳು ಸಭೆಗಳನ್ನು ನಡೆಸಿ ಕಾರ್ಯನಿರ್ವಹಣೆ ಮಾಡಿ ಈ ರಜತ ಮಹೋತ್ಸವ ಹಾಗೂ 24ನೇ ವಾರ್ಷಿಕ ಸಾಮಾನ್ಯ ಸಭೆಗಳನ್ನು ಯಶಸ್ಸು ಗೊಳಿಸಿರುವುದು ವಿಶೇಷವಾಗಿ ಸೌಹಾರ್ದ ಜಿಲ್ಲಾ ಸೌಹಾರ್ದ ಸಂಯೋಜಕರು ಹೆಚ್ಚಿನ ಆಸಕ್ತಿ ವಹಿಸಿ ಕಾರ್ಯನಿರ್ವಹಿಸಿದ್ದಾರೆ. ನನಗೆ ವೈಯಕ್ತಿಕವಾಗಿ ಸಂತೋಷವಾಗಿದೆ. ಸಿಬ್ಬಂದಿಯವರ ಕಾರ್ಯದಕ್ಷತೆ ಹಾಗೂ ಕಾರ್ಯಕ್ಷಮತೆಗೆ ಹೆಮ್ಮೆ ಪಡುತ್ತೇನೆ. ಈ ಎರಡು ಕಾರ್ಯಕ್ರಮಗಳ ಸಂಪೂರ್ಣ ಯಶಸ್ಸಿಗೆ ಕಾರಣರಾದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಹಿತೈಷಿಗಳಿಗೆ, ಸಹಕಾರ ಇಲಾಖಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗಾಗಿ ತಮ್ಮ ಸಂಪೂರ್ಣ ಪ್ರೋತ್ಸಾಹ ಹಾಗೂ ಬೆಂಬಲ ಸದಾ ಇರಲಿ.

## ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದ ಸಂಪರ್ಕ ಸಭೆಯ ವರದಿಗಳು



**ವಿಜಯನಗರ :** ದಿನಾಂಕ 01.08.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ವಿಜಯನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಪರ್ಕ ಸಭೆಯನ್ನು ಹೊಸಪೇಟೆ ಸಿಟಿ ಕೋ-ಅಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಉದ್ಘಾಟಿಸಿ ಸಹಕಾರಿಗಳೊಂದಿಗೆ ಸಮಾಲೋಚಿಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಎಲ್.ಎಸ್ ಆನಂದರವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಪೋಲೀಸ್ ಅಧಿಕಾರಿಗಳಾದ ಶ್ರೀ ರಾಜು ಪಿಎಸ್.ಐ ರವರು ಆಗಮಿಸಿ ಸೈಬರ್ ಕ್ರೈಂ ಮತ್ತು ಅದನ್ನು ತಡೆಗಟ್ಟುವ ವಿಧಾನಗಳ ಕುರಿತು ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಮತ ರ್‍ಯಾಕಲೆಯವರು ಸಾಮಾನ್ಯ ಸಭೆಯ ಪೂರ್ವ ತಯಾರಿ ಕುರಿತು ಮಾಹಿತಿ ನೀಡಿದರು. ವಿಜಯನಗರ ಜಿಲ್ಲೆಯ 70 ಸಹಕಾರಿಗಳಿಂದ 95 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಳ್ಳಾರಿ :** ದಿನಾಂಕ 02.08.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬಳ್ಳಾರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಂಪರ್ಕ ಸಭೆಯನ್ನು ಹೋಟೆಲ್ ನಕ್ಷತ್ರ ಅಂಜನಾ ಡೈಗ್ನೊಸ್ಟಿಕ್ ಎದುರುಗಡೆ ಬಳ್ಳಾರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಉದ್ಘಾಟಿಸಿ ಸಹಕಾರಿಗಳೊಂದಿಗೆ ಸಮಾಲೋಚಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹನುಮಂತಯ್ಯಶೆಟ್ಟಿಯವರು ವಹಿಸಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಕಲ್ಲುಗಿ ಮಂಜುನಾಥ ಅಧ್ಯಕ್ಷರು, ಶ್ರೀ ಶರಣ ಸಕ್ಕರೆ ಕರಡೀಶ ಸೌಹಾರ್ದ ಸಹಕಾರಿ ನಿ., ಬಳ್ಳಾರಿ. ಶ್ರೀ ಸತ್ಯನಾರಾಯಣ ಮೇಘ ಸೌಹಾರ್ದ ಸಹಕಾರಿ ಸಂಘ ನಿ.,ಬಳ್ಳಾರಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಪೋಲಿಸ್ ಅಧಿಕಾರಿಗಳಾದ ಡಾ ಸಂತೋಷ ಚವ್ಹಾಣ ಡಿವೈಎಸ್.ಪಿಯವರು ಇವರು ಆಗಮಿಸಿ ಸೈಬರ್ ಕ್ರೈಂ ಮತ್ತು ಅದನ್ನು ತಡೆಗಟ್ಟುವ ವಿಧಾನಗಳ ಕುರಿತು ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಪ್ರಾಸ್ತವಿಕ ನುಡಿಯನ್ನು ನಡೆಸಿಕೊಟ್ಟರು.ಬಳ್ಳಾರಿ ಜಿಲ್ಲೆಯ 72 ಸಹಕಾರಿಗಳಿಂದ 98 ಪ್ರತಿನಿಧಿಗಳು ಭಾಗವಹಿಸಿದ್ದರು.



**ಶಿವಮೊಗ್ಗ :** ದಿನಾಂಕ 16.08.2025ರಂದು ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಕಾರ್ಯಕ್ರಮವನ್ನು ಸರ್ಕಾರಿ ನೌಕರರ ಭವನ, ಶಿವಮೊಗ್ಗ ಇಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಸಂಯುಕ್ತ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮನೋಹರ ಮಸ್ಕಿ ರವರು ಹಾಗೂ ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು. ವೃತ್ತಿಪರತೆ ಮತ್ತು ವ್ಯವಹಾರ ಅಭಿವೃದ್ಧಿ ವಿಷಯದ ಕುರಿತು ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಮಾಹಿತಿ ನೀಡಿದರು. 86 ಸೌಹಾರ್ದ ಸಹಕಾರಿಗಳಿಂದ 196 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 04 ಆಗಸ್ಟ್ 2025 ರಂದು ಬೆಳಗಾವಿ ಜಿಲ್ಲೆಯ ಅಥಣಿ, ಕಾಗವಾಡ, ರಾಯಭಾಗ, ಚಿಕ್ಕೋಡಿ, ನಿಪ್ಪಾಣಿ ಮತ್ತು ಹುಕ್ಕೇರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಶ್ರೀ ಎಂ.ಕೆ. ಕವಟಗಿಮಠ ಕನ್ವೆನ್ಷನ್ ಹಾಲ್, ಹಾಲಟ್ಟಿ– ಚಿಕ್ಕೋಡಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ನೇರವೇರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಭರತ ಬನವನೆ, ಅಧ್ಯಕ್ಷರು ಶ್ರೀ ಪಾರ್ಶ್ವನಾಥ ತೀರ್ಥಕರ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಶ್ರೀ ಚಂದ್ರಕಾಂತ ಕೋಟಿವಾಲೆ, ಅಧ್ಯಕ್ಷರು ಶ್ರೀ ಶ್ರದ್ಧಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ, ಶ್ರೀ ಮಹಾವೀರ ನೀಲಜಗಿ, ಅಧ್ಯಕ್ಷರು ಶ್ರೀ ಮಹಾವೀರ ಮಲ್ಟಿಪರಪಜ್ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ, ಶ್ರೀ ಸುಭಾಷ್ ಕವಲಾಪುರೆ, ಅಧ್ಯಕ್ಷರು ಶ್ರೀ ಪ್ರಭುದೇವ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಶ್ರೀ ಸಂಜಯ ಅಡಕೆ, ಅಧ್ಯಕ್ಷರು ಶ್ರೀ ಸಿದ್ಧಿ ವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಚಿಕ್ಕೋಡಿ, ಶ್ರೀ ಬಾಬುರಾವ್ ಯಾದವ್, ಅಧ್ಯಕ್ಷರು ಹನುಮಾನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ರವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಎರಡನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ, ಅಪರ ನಿಬಂಧಕರು (ನಿ) ಬೆಂಗಳೂರು ಇವರು ಆಡಳಿತ ಮಂಡಳಿಯ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ತರಬೇತಿಯಲ್ಲಿ ಒಟ್ಟು 288 ಸೌಹಾರ್ದ ಸಹಕಾರಿಗಳಿಂದ 907 ಜನ ಪ್ರತಿನಿಧಿಗಳು ಭಾಗಿಯಾಗಿದ್ದರು.



**ಬೆಳಗಾವಿ :** ದಿನಾಂಕ 05 ಆಗಸ್ಟ್ 2025 ಮಂಗಳವಾರ ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪುರ, ಬೈಲಹೊಂಗಲ, ರಾಮದುರ್ಗ, ಕಿತ್ತೂರು, ಗೋಕಾಕ, ಮೂಡಲಗಿ, ಸವದತ್ತಿ, ಯರಗಟ್ಟಿ ಹಾಗೂ ಯಮಕನಮರಡಿ ಭಾಗದ ಸುತ್ತಮುತ್ತಲಿನ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಕೆ.ಇ.ಬಿ ಹಾಲ್, ಶಿವಬಸವ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಾಳಪ್ಪ ಮೇಳಕೂಡ ಅಧ್ಯಕ್ಷರು, ಬಸವೇಶ್ವರ ಸೌಹಾರ್ದ ಸಹಕಾರಿ, ಕಲ್ಲೋಳಿ ರವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಎರಡನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗುರುಸ್ವಾಮಿ, ಅಪರ ನಿಬಂಧಕರು (ನಿ) ಬೆಂಗಳೂರು ಇವರು ಆಡಳಿತ ಮಂಡಳಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು. ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯಲ್ಲಿ ಒಟ್ಟು 332 ಸೌಹಾರ್ದ ಸಹಕಾರಿಗಳಿಂದ 821 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಹಕಾರಿ ಕಾಯ್ದೆಗಳಿಗೆ ತಿದ್ದುಪಡಿ

ರಾಜ್ಯದ ಸಹಕಾರಿ ಕಾಯ್ದೆಗಳಿಗೆ ತಿದ್ದುಪಡಿಗಳು ವಿಧಾನ ಮಂಡಳದ ಎರಡು ಅಧಿವೇಶನಗಳಲ್ಲಿ ಅನುಮೋದನೆಯಾಗಿ ಗೌರವಾನ್ವಿತ ರಾಜ್ಯಪಾಲರ ಅಂಗೀಕಾರದ ಹಂತದಲ್ಲಿವೆ. ಗೌರವಾನ್ವಿತ ರಾಜ್ಯಪಾಲರ ಅನುಮೋದನೆ ನಂತರ ತಿದ್ದುಪಡಿಗಳು ಜಾರಿಗೆ ಬರುತ್ತವೆ. ಈ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತರಬೇತಿ ಕಾರ್ಯಕ್ರಮಗಳ ಮೂಲಕ ತಿಳುವಳಿಕೆ ನೀಡಲಾಗುವುದು.



**ಹಾವೇರಿ :** ದಿನಾಂಕ 06 ಆಗಸ್ಟ್ 2025 ಬುಧವಾರ ಹಾವೇರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಶಿವ ರೆಸಿಡೆನ್ಸಿ, ಹೋಟೆಲ್. ಹಾನಗಲ್ ರೋಡ್, ಹಾವೇರಿ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ರವರು ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಉದಯ್ ಕುರುಡೇಕರ್ ಅಧ್ಯಕ್ಷರು, ಸುವರ್ಣ ಪತ್ತಿನ ಸೌಹಾರ್ದ ಸಹಕಾರಿ, ಹಾವೇರಿ, ಶ್ರೀ ರಮೇಶ್ ಶಿವನಗೌಡ ಪಾಟೀಲ, ಅಧ್ಯಕ್ಷರು, ಕಲ್ಪತರು ಇರಡ್ಡ ಸೌಹಾರ್ದ ಪತ್ತಿನ ಸಹಕಾರಿ ನಿ., ಅಕ್ಕಿ ಆಲೂರ ಹಾಗೂ ಶ್ರೀ ಮೋಹನ್ ರಾಯ್ಕರ, ಅಧ್ಯಕ್ಷರು, ದೈವಜ್ಞ ಬ್ರಾಹ್ಮಣ ಪತ್ತಿನ ಸೌಹಾರ್ದ ಸಹಕಾರಿ ನಿ., ಸವಣೂರು ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಎರಡನೇಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ್ ಜೋಶಿ, ನಿರ್ದೇಶಕರು ವಿಕಾಸ್ ಕೋ ಆಪರೇಟಿವ್ ಬ್ಯಾಂಕ್, ಹೊಸಪೇಟೆ ಇವರು ಆಡಳಿತ ಮಂಡಳಿಯ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಉಪನ್ಯಾಸ ನೀಡಿದರು. ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ಮತ್ತು ಶ್ರೀಮತಿ ಗಂಗಮ್ಮ ನಾಯ್ಕರ್ ಉಪಸ್ಥಿತರಿದ್ದರು. ಒಟ್ಟು 97 ಸೌಹಾರ್ದ ಸಹಕಾರಿಗಳಿಂದ 150 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.



**ಉತ್ತರ ಕನ್ನಡ :** ದಿನಾಂಕ 13 ಆಗಸ್ಟ್ 2025ರ ಬುಧವಾರದಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ಮಂದಾರ ಎಲ್ಲೈಟ್, ಕುಮಟಾ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಇವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮೋಹನದಾಸ ಜೆ.ನಾಯಕ ಇವರು ವಹಿಸಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀಮತಿ ಸರಸ್ವತಿ ರವಿ, ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಮಧ್ಯಾಹ್ನದ ಅವಧಿಯಲ್ಲಿ ಹಿರಿಯ ಸಹಕಾರಿಗಳಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ ಇವರು ಆಡಳಿತ ಮಂಡಲಿ ಸದಸ್ಯರ ಹಕ್ಕು, ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯಲ್ಲಿ ಉಪಸ್ಥಿತ ಗಣ್ಯರ ಸ್ವಾಗತವನ್ನು ಸೇಫ್ ಸ್ಟಾರ್ ಸೌಹಾರ್ದ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಮಹೇಶ್ ಶೆಟ್ಟಿ ಇವರು ನಡೆಸಿಕೊಟ್ಟರು. ಸಭೆಯಲ್ಲಿ ಒಟ್ಟು 138 ಸೌಹಾರ್ದ ಸಹಕಾರಿಗಳಿಂದ 194 ಪ್ರತಿನಿಧಿಗಳು ಭಾಗವಹಿಸಿದ್ದರು.



**ಧಾರವಾಡ :** ದಿನಾಂಕ 14 ಆಗಸ್ಟ್ 2025ರ ಗುರುವಾರದಂದು ಧಾರವಾಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹೋಟೆಲ್ ರಾಯಲ್ ರಿಟ್ಜ್, ಅಮರಗೋಳ ಹುಬ್ಬಳ್ಳಿ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ

ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರು ವಹಿಸಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ರವೀಂದ್ರ ಯಲಿಗಾರ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ ಜೋಶಿ ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಮಧ್ಯಾಹ್ನದ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಅಮೃತ ಜೋಶಿ ಇವರು ಆಡಳಿತ ಮಂಡಲಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು. ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಮಲ್ಲಿಕಾರ್ಜುನ ಕುಂಬಾರ ಇವರು ನಡೆಸಿಕೊಟ್ಟರು. ಸಭೆಯಲ್ಲಿ ಉಪಸ್ಥಿತ ಗಣ್ಯರ ಸ್ವಾಗತವನ್ನು ಶ್ರೀ ಕಲ್ಮೇಶ ಎಮ್ ಇವರು ನೇರವೇರಿಸಿದರು. ಸಭೆಯಲ್ಲಿ ಒಟ್ಟು 86 ಸೌಹಾರ್ದ ಸಹಕಾರಿಗಳಿಂದ 305 ಪ್ರತಿನಿಧಿಗಳು ಭಾಗವಹಿಸಿದ್ದರು.



**ವಿಜಯಪುರ :** ದಿನಾಂಕ 11 ಆಗಸ್ಟ್ 2025ರ ಸೋಮವಾರದಂದು ವಿಜಯಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಭಾವಸಾರ ಸಾಂಸ್ಕೃತೀಕ ಸಮುದಾಯ ಭವನ, ಆನಂದ ನಗರ ವಿಜಯಪುರ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಸಂಯುಕ್ತ ಸಹಕಾರಿಯ ನಿಕಟಪೂರ್ವ ವೃತ್ತಿಪರ ನಿರ್ದೇಶಕರಾದ ಶ್ರೀ ಸುಭಾಷ ಇಂಡಿ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ. ಉಪ್ಪಿನ ಹಾಗೂ ಕಲಬುರ್ಗಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಸಹಕಾರಿಗಳೊಂದಿಗೆ ಸಂಪರ್ಕ ಸಭೆಯನ್ನು ನಡೆಸಿದರು. ಮಧ್ಯಾಹ್ನದ ಅವಧಿಯಲ್ಲಿ ಕಲಬುರ್ಗಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ಇವರು ಆಡಳಿತ ಮಂಡಲಿ ಸದಸ್ಯರ ಹಕ್ಕು, ಜವಾಬ್ದಾರಿ ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಿದರು. ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಸರಾಜ ಎಸ್ ಇವರು ನಡೆಸಿಕೊಟ್ಟರು. ಶ್ರೀಮತಿ ಪ್ರತಿಭಾ ಮಠ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಸಭೆಯಲ್ಲಿ ಒಟ್ಟು 205 ಸೌಹಾರ್ದ ಸಹಕಾರಿಗಳಿಂದ 328 ಪ್ರತಿನಿಧಿಗಳು ಭಾಗವಹಿಸಿದ್ದರು.



**ಬಾಗಲಕೋಟೆ :** ದಿನಾಂಕ 12 ಆಗಸ್ಟ್ 2025 ಮಂಗಳವಾರದಂದು ಬಾಗಲಕೋಟೆ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಹಾಗೂ ವಿಷಯಾಧಾರಿತ ತರಬೇತಿಯನ್ನು ಜಿಲ್ಲಾಧಿಕಾರಿಗಳ ಸಭಾಭವನ, ನವನಗರ, ಬಾಗಲಕೋಟೆ ಇಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ವಹಿಸಿದ್ದರು.ಅತಿಥಿಗಳಾಗಿ ಸಹಕಾರ ಭಾರತಿ ಜಿಲ್ಲಾಧ್ಯಕ್ಷರಾದ ಡಾ॥ ಎಂ.ಎಸ್.ದಡ್ಡೆಣ್ಣವರ, ಶ್ರೀ ಶಾಂತಗೌಡ ಪಾಟೀಲ, ಅಧ್ಯಕರು, ಸಿದ್ದೇಶ್ವರ ಸೌಹಾರ್ದ ಸಹಕಾರಿ ನಿ, ಜಾಲಿಹಾಳ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ಉಪಸ್ಥಿತರಿದ್ದರು. ಮೊದಲನೇಯ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಮಧ್ಯಾಹ್ನದ ಅವಧಿಯಲ್ಲಿ ಸಹಕಾರ ಸಂಘಗಳ ಇಲಾಖೆ ಅಧೀಕ್ಷಕರಾದ ಶ್ರೀ ಹನುಮಂತ ಇವರು ಆಡಳಿತ ಮಂಡಲಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು. ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯ ನಿರೂಪಣೆ ಮತ್ತು ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೆಂಕಟೇಶ್ ರಾಠೋಡ ಇವರು ನಡೆಸಿಕೊಟ್ಟರು. ಶ್ರೀಮತಿ ರೇಷ್ಮಾ ಪಾಟೀಲ ವಂದಿಸಿರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಶೇಗುಣಸಿ ಉಪಸ್ಥಿತರಿದ್ದರು. ಸಭೆಯಲ್ಲಿ ಒಟ್ಟು 265 ಸೌಹಾರ್ದ ಸಹಕಾರಿಗಳಿಂದ 593 ಪ್ರತಿನಿಧಿಗಳು ಭಾಗವಹಿಸಿದ್ದರು.



**ಗದಗ :** ದಿನಾಂಕ 14 ಆಗಸ್ಟ್ 2025 ಗುರುವಾರದಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿಯನ್ನು ಲಯನ್ಸ್ ಭವನ, ಗದಗ ನಲ್ಲಿ ಆಯೋಜಿಸಲಾಗಿತ್ತು. ಸಭೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ನಾಗರಾಜ್ ದೇಶಪಾಂಡೆ ಇವರು ವಹಿಸಿದ್ದರು. ಅತಿಥಿಗಳಾಗಿ ಶ್ರೀ ಶೇಖರಪ್ಪ ಮಾಜನ್ ಶೆಟ್ಟರ್, ಅಧ್ಯಕ್ಷರು, ಆದರ್ಶ ಸೌಹಾರ್ದ ಸಹಕಾರಿ ಸಂಘ ನಿ, ಬೆಳ್ಳಟ್ಟಿ ಮತ್ತು ಶ್ರೀ ರಾಮ್ ಜಿ, ಅಧ್ಯಕ್ಷರು ಶ್ರೀ ಜನನಿ ಸೇವಾ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ, ಗಜೇಂದ್ರಗಡ ಮತ್ತು ಶ್ರೀ ಎಸ್ ಎಸ್ ಪಟ್ಟಣಶೆಟ್ಟಿ, ಅಧ್ಯಕ್ಷರು, ಜಗದ್ಗುರು ತೋಟದಾರ್ಯ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ, ಗದಗ ಇವರು ವಹಿಸಿದ್ದರು. ಮೊದಲ ಅವಧಿಯಲ್ಲಿ ಶ್ರೀ ವಿ.ಜಿ .ಕುಲಕರ್ಣಿ ಸಹಕಾರ ಅಭಿವೃದ್ಧಿ ಅಧಿಕಾರಿ (ನಿ) ಧಾರವಾಡ ಇವರು ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಜವಾಬ್ದಾರಿಗಳು ಕುರಿತು ಮಾಹಿತಿ ನೀಡಿದರು. ಮಧ್ಯಾಹ್ನದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಂಪರ್ಕ ಸಭೆ ಜರುಗಿತು. ಬೆಳಗಾವಿ ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಭೆಯ ನಿರೂಪಣೆ ಹಾಗೂ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯದ ಶ್ರೀ ಪ್ರವೀಣ್ ಬಾರ್ಕಿ ಇವರು ನಡೆಸಿಕೊಟ್ಟರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಗಂಗಮ್ಮ ನಾಯ್ಕರ ಇವರು ವಂದಿಸಿದರು. ಸಭೆಯಲ್ಲಿ ಒಟ್ಟು 34 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು :** ದಿನಾಂಕ 18.08.2025 ರಂದು ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯ ಸೌಹಾರ್ದ ಸಹಕಾರಿ ಸಂಘಗಳ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ 18 ಆಗಸ್ಟ್ 2025ರ ಸೋಮವಾರದಂದು ಬೆಳಗ್ಗೆ 10:30 ಗಂಟೆಗೆ "ಮಾಯಾ,ಸ್ ಕಿಂಗ್ಸ್ ಕೋರ್ಟ್ ಹೋಟೆಲ್, ಜೆ.ಎಲ್.ಬಿ ರಸ್ತೆ, ಮೆಟ್ರೋಪೋಲ್ ಸರ್ಕಲ್, ಮೈಸೂರು ಇಲ್ಲಿ ಹಮ್ಮಿಕೊಳ್ಳಲಾಯಿತು.

ಸಂಪರ್ಕ ಸಭೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ. ಆರ್. ರವರು, ಮಾನ್ಯ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ ಬಿ.ಹೆಚ್ ರವರು, ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್.ವಿ. ರಾಜೀವ್ ರವರು, ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು, ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಗುರುರಾಜ್ ಬಿ ಟಿ ರವರು, ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಎಂ.ಕೆ. ಸೋಮಯ್ಯ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಕಾರ್ಯಕ್ರಮದ ಸ್ವಾಗತವನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಇವರು ನೆರವೇರಿಸಿದರು. ಕಾರ್ಯಕ್ರಮದ ಉದ್ಘಾಟನೆ ನಂತರ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಸಂಪರ್ಕಸಭೆಯನ್ನು ಉದ್ದೇಶಿಸಿ ಮಾತನಾಡಿ ನಂತರ ಸೌಹಾರ್ದ ಸಹಕಾರಿಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಪ್ರಶ್ನೆಗಳನ್ನು ಕೇಳಿದರು. ಸಹಕಾ–ರಿಗಳು ಕೇಳಿದ ಪ್ರಶ್ನೆಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು ಉತ್ತರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ಇವರು ನೆರವೇರಿಸಿದರು.

ತರಬೇತಿ ವಿಷಯ "ಸಹಕಾರಿ ಸಂಸ್ಥೆಗಳ ಆರ್ಥಿಕ ಶಿಸ್ತಿನ

ನಿರ್ವಹಣೆಯಲ್ಲಿ ನಿರ್ದೇಶಕರ ಹಕ್ಕುಗಳು ಮತ್ತು ಜವಬ್ದಾರಿಗಳು ಕುರಿತು ಹಾಗೂ ಮಾನ್ಯ ನಿವೃತ್ತ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರಾದ ಶ್ರೀ ರತ್ನ ನಾಯಕ್ ರವರು ಇವರು ಮಾಹಿತಿಯನ್ನು ನೀಡಿದರು. ಈ ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯ 95 ಸೌಹಾರ್ದ ಸಹಕಾರಿಗಳಿಂದ 162 ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ



**ಬೀದರ :** ದಿನಾಂಕ 16.08.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಕಲಬುರಗಿ ಪ್ರಾಂತೀಯ ಕಲಬುರಗಿ ಕಛೇರಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ವಿಷಯಾಧಾರಿತ ತರಬೇತಿಯನ್ನು ಸಹಾರ್ದ ತರಬೇತಿ ಸಂಸ್ಥೆ ನೌಬಾದ, ಬೀದರ ನಲ್ಲಿ ಅಯೋಜಿಸಲಾಗಿತ್ತು ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ಸಂಜುಕುಮಾರ ಪಾಟೀಲರವರು, ನಿರ್ದೇಶಕರಾದ ಶ್ರೀ ರಾಜಶೇಖರ ನಾಗಮೂರ್ತಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆ ಮೇಲೆ ಉಪಸ್ಥಿತರಿದ್ದ ಎಲ್ಲಾ ಗಣ್ಯಮಾನ್ಯರು ಉದ್ಘಾಟಿಸಿದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ನುಡಿದರು. ಸ್ವಾಗತವನ್ನು ಶ್ರೀ ವೀರಶಟ್ಟಿಕೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ನಿರೂಪಣೆಯನ್ನು ಶಿವಕಾಂತ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ನಡೆಸಿಕೊಟ್ಟರು. ತರಬೇತಿಯಲ್ಲಿ 43 ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.

## ಯುವಕರು ಹಾಗೂ ಸಂವಾದ ಕಾರ್ಯಕ್ರಮ



**ರಾಯಚೂರು :** ದಿನಾಂಕ 19.08.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಹಾಗೂ ಸಿಂಧನೂರು ತಾಲೂಕಿನ ಎಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಕನಕದಾಸ ಶಿಕ್ಷಣ ಮಹಾವಿದ್ಯಾಲಯ ಸುಕಾಲ ಪೇಟೆ ಸಿಂಧನೂರು ನಲ್ಲಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಸಹಕಾರ ಮತ್ತು ಯುವಕರು ಎಂಬ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಕೆ ವಿರುಪಾಕ್ಷಪ್ಪ ಮಾಜಿ ಸಂಸದರು, ಭಾರತ ಸರ್ಕಾರ ಇವರು ಉದ್ಘಾಟಿಸಿದರು. ಸಹಕಾರಿ ಪಿತಾಮಹರಾದ ಶ್ರೀ ಸಿದ್ದಣ್ಣಗೌಡ ಪಾಟೀಲರವರ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಶ್ರೀ ಮಂಜುಳಾ, ಪ್ರಭುರಾಜ, ಮಾನ್ಯ ಅಧ್ಯಕ್ಷರು ನಗರ ಸಭೆ ಸಿಂಧನೂರು ಇವರು ನೇರವೇರಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಎಂ ದೊಡ್ಡ ಬಸವರಾಜ, ಮಾನ್ಯ ಅಧ್ಯಕ್ಷರು, ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು. ಶ್ರೀ ಬಿ ರಾಜಶೇಖರ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ.,ಬೆಂಗಳೂರು, ಶ್ರೀ ಕೆ ರಾಜಶೇಖರ, ಮಾನ್ಯ ಸದಸ್ಯರು, ನಗರಸಭೆ, ಸಿಂಧನೂರು, ಶ್ರೀ ಪದ್ಮನಾಭ ನಾಯ್ಡು ಒಕ್ಕೂಟದ ನಿರ್ದೇಶಕರು, ಶ್ರೀ ಭಾವರಾವ್ ಪ್ರಧಾನ ವ್ಯವಸ್ಥಾಪಕರು, ಶ್ರೀ ಬಸವೇಶ್ವರ ಪತ್ತಿನ ಸೌಹರ್ದ ಸಹಕಾರಿ ನಿ., ಸಿಂಧನೂರು ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸಹಕಾರ ಕ್ಷೇತ್ರದ ಪರಿಚಯ, ಸಹಕಾರ ಸಚಿವಾಲಯ. ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳು ಎಂಬ ವಿಷಯದ ಕುರಿತು ಶ್ರೀ ನಟರಾಜ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ವಿಷಯವನ್ನು ಮಂಡಿಸಿದರು. ನಂತರ ಸಹಕಾರ ಸಂಘಗಳ/ಬ್ಯಾಂಕುಗಳ ಕಾರ್ಯಚಟುವಟಿಕೆಗಳ ಎಂಬ ವಿಷಯದ ಕುರಿತು ಶ್ರೀ ಭಾವರಾವ್ ಪ್ರಧಾನ ವ್ಯವಸ್ಥಾಪಕರು ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಇವರು ವಿಷಯ ಮಂಡಿಸಿದರು. ನಂತರ ಸಹಕಾರ ಕ್ಷೇತ್ರದ ಅನೂಕೂಲತೆಗಳು, ಅವಕಾಶಗಳು ಎಂಬ ವಿಷಯದ ಕುರಿತು ಶ್ರೀ ರಾಜಶೇಖರ ಬಿ ಮಾನ್ಯ ಮಾಜಿ ವೃತ್ತಿಪರ ನಿರ್ದೇಶಕರು ಕ. ರಾ.ಸೌ.ಸಂ.ಸ.ನಿ.,ಬೆಂಗಳೂರು ಇವರು ವಿಷಯ ಮಂಡಿಸಿದರು. ನಂತರ ವಿದ್ಯಾರ್ಥಿಗಳ ಜೊತೆ ಸಂವಾದ ಕಾರ್ಯಕ್ರಮದ ನಡೆಯಿತು. ಕೊನೆಯಲ್ಲಿ

ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಎಂ. ದೊಡ್ಡ ಬಸವರಾಜ ಮಾನ್ಯ ಅಧ್ಯಕ್ಷರು, ರಾಯಚೂರು ಜಿಲ್ಲಾ ಸಔಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರು ಅಧ್ಯಕ್ಷೀಯ ನುಡಿಗಳನ್ನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಮತ್ತು ಸ್ವಾಗತವನ್ನು ನಟರಾಜರವರು ಮಾಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಪ್ರಾಸ್ತವಿಕ ನುಡಿಯನ್ನು ನುಡಿದರು. ವಂದನಾರ್ಪಣೆಯನ್ನು ಒಕ್ಕೂಟದ ಕಾರ್ಯನಿರ್ವಾಹಕರಾದ ಶ್ರೀ ಹುಸೇನ್ ಸಾಬ್ ರವರು ನೆರವೆಸಿದರು. ಸಿಂಧನೂರು ತಾಲೂಕಿನ ವಿವಿಧ ಕಾಲೇಜಿನ 200 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಪ್ರಯೋಜನೆಯನ್ನು ಪಡೆದರು.



**ಬೀದರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರ್ಗಿ, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಹಾಗೂ ಬಸವೇಶ್ವರ ಶಿಕ್ಷಣ ಸಂಸ್ಥೆ ಬಸವಕಲ್ಯಾಣ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬಸವಕಲ್ಯಾಣದ ಶ್ರೀ ಬಸವೇಶ್ವರ ದೇವಸ್ಥಾನ ಶಿಕ್ಷಣ ಸಂಸ್ಥೆ ಬಸವ ಮಾರ್ಕೆಟ್ ಹತ್ತಿರ ಬಸವಕಲ್ಯಾಣದಲ್ಲಿ ಪದವಿ ವಿದ್ಯಾರ್ಥಿಗಳಿಗೆ " ಸಹಕಾರ ಮತ್ತು ಯುವಕರು "ಎಂಬ ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಸಂವಾದ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶರಣು ಸಲಗರ್ ಮಾನ್ಯ ,ಶಾಸಕರು ಬಸವಕಲ್ಯಾಣ ಇವರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇದರ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ್ ಜ್ಯಾಂತಿಕರ್ ಇವರು ವಹಿಸಿದರು. ಸಂವಾದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಸವರಾಜ್ ಕೊರ್ಕೆ ರವರು , ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನಿರ್ದೇಶಕರಾದ ಶ್ರೀ ಶಿವಬಸಪ್ಪ ಚನ್ನಮಲ್ಲೆ ಹಾಗೂ ಸಂಜೀವ್ ಕುಮಾರ್ ಸಜ್ಜನ್ ಇವರು ಭಾಗವಹಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಸೂರ್ಯಕಾಂತ ರಾಕಲೇ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಇವರು ನಡೆಸಿಕೊಟ್ಟರು ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಬಸವರಾಜ್ ಬಂದಾಳೆ ಮಾನ್ಯ ಉಪನ್ಯಾಸಕರು ಬಸವಕಲ್ಯಾಣ ಹಾಗೂ ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಭೀಮಾಶಂಕರ್ ಬಿರಾದಾರ್ ಮಾನ್ಯ ಉಪನ್ಯಾಸಕರು ಬಸವೇಶ್ವರ ಶಿಕ್ಷಣ ಸಂಸ್ಥೆ ಬಸವಕಲ್ಯಾಣ ಇವರು ನಡೆಸಿಕೊಟ್ಟರು. ಸಂವಾದ ಕಾರ್ಯಕ್ರಮದ ವಿಷಯ ಮಂಡನೆಯನ್ನು ಶ್ರೀ ಗುರುನಾಥ್ ಜ್ಯಾಂತಿಕರ್ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು ಇವರು ನಡೆಸಿಕೊಟ್ಟರು.ಪದವಿ ವಿಧ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿರುವ ಸಂವಾದ ಕಾರ್ಯಕ್ರಮದಲ್ಲಿ ಒಟ್ಟು 126 ವಿಧ್ಯಾರ್ಥಿಗಳು ಹಾಗೂ ಸ್ಥಳಿಯ ಸಹಕಾರಿಗಳು ಭಾಗವಹಿಸಿದರು.

## ವಾರ್ಷಿಕ ಸಾಮಾನ್ಯ ಸಭೆಗಳು



**ಬೆಳಗಾವಿ :** ಶ್ರೀ ಸಾಯಿ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ ಸಹಕಾರಿಯ 12ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಶ್ರೀ ಎಂ.ಕೆ ಕವಟಗಿಮಠ ಕನ್ವೆನ್ಷನ್ ಹಾಲ್, ಚಿಕ್ಕೋಡಿ ಇಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂ. ಶ್ರೀ ಶಿವಪ್ರಸಾದ ದೇವರು, ಚಿಂಚಣಿ ಸಿದ್ಧ ಸಂಸ್ಥಾನ ಮಠ, ಚಿಂಚಣಿ ರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಅಧ್ಯಕ್ಷತೆ ವಹಿಸಿದರು. ಉಪಾಧ್ಯಕ್ಷರಾದ ಶ್ರೀ ಷಡಕ್ಷರಿ ಮೂಗೇರಿ ರವರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಸತೀಶ ಪಾಟೀಲ ರವರು, ಶಾಖಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಹಾಗೂ ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.




**ಶಿವಮೊಗ್ಗ :** ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ. ಶಿವಮೊಗ್ಗ ಇದರ 20ನೇ ವಾರ್ಷಿಕ ಸಾಮಾನ್ಯ ಸಭೆ ಸಹಕಾರಿಯ ಮಾನ್ಯ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್. ಪ್ರಸನ್ನ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ಮಠ ದುರ್ಗಿಗುಡಿ ಶಿವಮೊಗ್ಗದಲ್ಲಿ ಜರುಗಿತು. ಈ ಸಂದರ್ಭದಲ್ಲಿ 200 ಕ್ಕಿಂತ ಹೆಚ್ಚಿನ ಸದಸ್ಯರು ಭಾಗವಹಿಸಿದ್ದರು.

# ಮೈಸೂರು ಪ್ರಾಂತೀಯ ಕಛೇರಿ ಸ್ವಂತ ಕಟ್ಟಡದ ಭೂಮಿ ಪೂಜಾ ಕಾರ್ಯಕ್ರಮ





**ಮೈಸೂರು :** 18.08.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿಯ ನೂತನ ಕಟ್ಟಡ ನಿರ್ಮಾಣ ಮಾಡುವ ಉದ್ದೇಶದಿಂದ ನಿವೇಶನದ ಭೂಮಿ ಪೂಜೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ. ಆರ್. ರವರು, ಮಾನ್ಯ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ ಬಿ.ಹೆಚ್ ರವರು, ಹಾಗೂ ಮಾನ್ಯ ಶಿಕ್ಷಣ ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್.ವಿ. ರಾಜೀವ್ ರವರು, ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು, ಶ್ರೀಮತಿ ಭಾರತಿ ಜಿ. ಭಟ್ ರವರು, ಮಾನ್ಯ ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಸಿ.ಎನ್. ಪರಾಶಿವಮೂರ್ತಿರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು, ಮಾನ್ಯ ಉಪನಿಬಂಧಕರಾದ ಶ್ರೀ ವಿಜಯಕುಮಾರ್ ರವರು, ಮೈಸೂರು ಜಿಲ್ಲೆಯ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು, ಮಂಡ್ಯ ಜಿಲ್ಲೆಯ ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು ಹಾಗೂ ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು, ಸಂಯುಕ್ತ ಸಹಕಾರಿಯ ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ. ಕಾರಕೂನ್ ರವರು, ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ಹಾಗೂ ಇತರೆ ಪ್ರಾಂತದ ಸಿಬ್ಬಂದಿಗಳು ಭಾಗವಹಿಸಿದ್ದರು.

## ಪತ್ರಿಕಾ ಗೋಷ್ಠಿ




**ಶಿವಮೊಗ್ಗ :** ದಿನಾಂಕ 16.08.2025ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಪತ್ರಿಕಾ ಭವನ, ಶಿವಮೊಗ್ಗ ಇಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಪತ್ರಿಕಾಗೋಷ್ಠಿಯನ್ನು ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು, ಬೆಂಗಳೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಶ್ರೀಧರ್ ರವರು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 18–08–2025 ರಂದು ಮೈಸೂರು ಪ್ರೆಸ್‌ಕ್ಲಬ್ ಇಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ 2001ರಲ್ಲಿ ಜಾರಿಗೆ ಬಂದು 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾ–ರಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ರಜತ ಮಹೋತ್ಸವದ ಸಂಭ್ರಮದಲ್ಲಿರುವ ಹಿನ್ನಲೆಯಲ್ಲಿ ಪತ್ರಿಕಾಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಈ ಪತ್ರಿಕಾಗೋಷ್ಠಿಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಹಾಗೂ ಮಾನ್ಯ ಉಪಾಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ. ಆರ್. ರವರು, ಮಾನ್ಯ ನಿರ್ದೇಶಕರು ಹಾಗೂ ಮಾಜಿ ಅಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ ಬಿ.ಹೆಚ್ ರವರು, ಹಾಗೂ ಮಾನ್ಯ ಶಿಕ್ಷಣ, ಸಲಹಾ ಸಮಿತಿ ಸದಸ್ಯರಾದ ಶ್ರೀ ಹೆಚ್.ವಿ. ರಾಜೀವ್ ರವರು, ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು, ಶ್ರೀಮತಿ ಭಾರತಿ ಜಿ. ಭಟ್ ರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು ನಡೆಸಿಕೊಟ್ಟರು.

# ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ದಾವಣಗೆರೆ :** ದಿನಾಂಕ 06.08.2025ರಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ನಂದಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಚನ್ನಗಿರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ನಂದಿ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ಇದರ ಅಧ್ಯಕ್ಷರಾದ ಶ್ರೀ ಶಿವಕುಮಾರ್ ರವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ 34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಲಾಭಾಂಶ ಹಂಚಿಕೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿ ವಿಷಯಗಳ ಕುರಿತು ಮಾಹಿತಿ ನೀಡಿದರು. 05 ಸಹಕಾರಿಗಳಿಂದ 08 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ :** ದಿನಾಂಕ 08.08.2025ರಂದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಶ್ರೀ ಕನ್ಯಕಾ ಸೌಹಾರ್ದ ಸಹಕಾರಿ ಸಂಘ ನಿ, ಹಿರಿಯೂರು ಇಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಹಸಿರು ಗಿಡಕ್ಕೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗಂಗೋತ್ರಿ ಸೌಹಾರ್ದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ 34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಲಾಭಾಂಶ ಹಂಚಿಕೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿ ವಿಷಯಗಳ ಕುರಿತು ಮಾಹಿತಿ ನೀಡಿದರು. 03 ಸಹಕಾರಿಗಳಿಂದ 05 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 08.08.2025 ರಂದು** ಶ್ರೀ ಕನ್ಯಕಾ ಸೌಹಾರ್ದ ಸಹಕಾರಿ ಸಂಘ ನಿ, ಹಿರಿಯೂರು, ಚಿತ್ರದುರ್ಗ ಜಿಲ್ಲೆ ಸಹಕಾರಿಗೆ ಸಂಯುಕ್ತ ಸಹಕಾ–ರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ಭೇಟಿ ನೀಡಿ ಅಗತ್ಯ ಸಲಹೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಸಹಕಾ–ರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

**ದಿನಾಂಕ 13.08.2025 ರಂದು** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಗಂಗೋತ್ರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಚಳ್ಳಕೆರೆ ಇಲ್ಲಿ ಆಯೋಜಿಸಲಾಗಿತ್ತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗಂಗೋತ್ರಿ ಸೌಹಾರ್ದ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಉಪಸ್ಥಿತ–ರಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ 34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಲಾಭಾಂಶ ಹಂಚಿಕೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿ ವಿಷಯಗಳ ಕುರಿತು ಮಾಹಿತಿ ನೀಡಿದರು. 11 ಸಹಕಾರಿಗಳಿಂದ 23 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಿನಾಂಕ 14.08.2025 ರಂದು** ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮೊಳಕಾಲ್ಮೂರು ಸೌಹಾರ್ದ ಸಹಕಾರಿ ನಿ, ಮೊಳಕಾಲ್ಮೂರು ಇಲ್ಲಿ ಆಯೋಜಿಸಲಾಗಿತ್ತು. ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಕೆ.ವಿ. ರಾಧಾಕೃಷ್ಣ ರವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಕಲಂ 34ರ ಮಾಹಿತಿ ಸಲ್ಲಿಕೆ, ಲೆಕ್ಕಪರಿಶೋಧನಾ ವರದಿ ಸಲ್ಲಿಕೆ, ಸಾಮಾನ್ಯ ಸಭೆ, ಲಾಭಾಂಶ ಹಂಚಿಕೆ, ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿ ವಿಷಯಗಳ ಕುರಿತು ಮಾಹಿತಿ ನೀಡಿದರು. 11 ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟೆ :** ದಿನಾಂಕ 07.08.2025 ರಂದು ಬಾಗಲಕೋಟೆ ಜಿಲ್ಲೆಯ ಬಾದಾಮಿ, ಇಳಕಲ್, ಹುನಗುಂದ ಹಾಗೂ ಗುಳೇದಗುಡ್ಡ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಯುವಶಕ್ತಿ ಐಟಿಐ ಕಾಲೇಜು, ಗುಳೇದಗುಡ್ಡ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಸಾಮಾನ್ಯ ಸಭೆ ಜರುಗಿಸುವ ಕುರಿತು, ಸಭೆಯ ನಡವಳಿಗಳನ್ನು ದಾಖಲಿಸುವ ಕುರಿತು, ಕಾಲಕಾಲಕ್ಕೆ ಸಲ್ಲಿಸಬೇಕಾದ ಮಾಹಿತಿಗಳ ಕುರಿತು, ಕಲಂ 18 ರ ಅನ್ವಯ ಹೂಡಿಕೆ ಕುರಿತು, ಕಲಂ 34 ಅಡಿ ಮಾಹಿತಿ ಸಲ್ಲಿಕೆ, ಅನುಪಾಲನಾ ವರದಿ ಸಲ್ಲಿಕೆ ಕುರಿತು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವೆಂಕಟೇಶ ರಾಠೋಡ ಹಾಗೂ ಶ್ರೀ ಸುರೇಶ್ ಶೇಗುಣಸಿ ಇವರು ಮಾಹಿತಿ ನೀಡಿದರು. ಈ ತರಬೇತಿಯಲ್ಲಿ ಒಟ್ಟು 38 ಸೌಹಾರ್ದ ಸಹಕಾರಿಗಳಿಂದ 48 ಜನ ಪ್ರತಿನಿಧಿಗಳು ಹಾಜರಾಗಿದ್ದರು.



**ಹಾವೇರಿ** : ದಿನಾಂಕ 01.08.2025 ರಂದು ಹಾವೇರಿ ಜಿಲ್ಲೆಯ ಹಾನಗಲ್, ಶಿಗ್ಗಾವ್ ಮತ್ತು ಸವನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜನತಾ ಶಿಕ್ಷಣ ಸೌಹಾರ್ದ ಸಹಕಾರಿ ಸಂಘ, ಹಾನಗಲ್ ಇಲ್ಲಿ ಆಯೋಜನೆ ಮಾಡಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಕೆ. ಶಿವಲಿಂಗಪ್ಪ ಇವರು ವಹಿಸಿದ್ದರು. ಸದರಿ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳ ಸಾಮಾನ್ಯ ಸಭೆ ನಡೆಸುವ ವಿಧಾನ, ಕಲಂ 34ರ ಮಾಹಿತಿ ಸಲ್ಲಿಕೆ, ಕಲಂ 18ರ ಅನ್ವಯ ಹೂಡಿಕೆ, ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ, ಚುನಾವಣಾ ಮಾಹಿತಿ, ಶಾಸನಾತ್ಮಕ ಪಾವತಿಗಳ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಪ್ರವೀಣ ಬಾರ್ಕಿ ಇವರು ಮಾಹಿತಿ ನೀಡಿದರು. ತರಬೇತಿಯಲ್ಲಿ 18 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗಿಯಾಗಿದ್ದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ

**ಮೈಸೂರು** : ದಿನಾಂಕ : 01.08.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರವರು ಶ್ರೀ ಶಾರದಾ ಸೌಹಾರ್ದ ಸಹಕಾರಿ ಸಂಘ ನಿಯಮಿತ., ಈ ಸಹಕಾರಿ ಆಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಿದರು. ನಂತರ ಸದರಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಮಾರ್ಗದರ್ಶನ ಮಾಡಿದರು.

**ಮಂಡ್ಯ** : ದಿನಾಂಕ : 09.08.2025ರಂದು ನಾಗಮಂಗಲ ತಾಲೂಕು ಶಿಕ್ಷಣ ಇಲಾಖಾ ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ನಾಗಮಂಗಲ, ಮಂಡ್ಯ ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದಅಭಿವೃದ್ಧಿ ಅಧಿಕಾರಿ, ಇವರು ಭಾಗವಹಿಸಿ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ಆಡಳಿತ ಮಂಡಲಿ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು, ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ 8 ಜನ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ಚಾಮರಾಜನಗರ** : ದಿನಾಂಕ : 13.08.2025ರಂದು ಜೈ ಭೀಮ್ ಬಿಸಿನೆಸ್ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಈ ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಇವರು ಭಾಗವಹಿಸಿ ಸಹಕಾರಿಯ ಕಾರ್ಯನಿರ್ವಹಣೆಯಲ್ಲಿ ಆಡಳಿತ ಮಂಡಲಿ ನಿರ್ದೇಶಕರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು, ಹಾಗೂ ಸೌಹಾರ್ದ ಕಾಯ್ದೆಯ ಬಗ್ಗೆ, ಸಹಕಾರಿಯು ಪತ್ತಿನ ಚಟುವಟಿಕೆಗಳನ್ನು ಸದಸ್ಯರಿಗೆ ಆರ್ಥಿಕ ಸೌಲಭ್ಯವನ್ನು ನೀಡುವ ಕುರಿತು ಮತ್ತು ಸಹಕಾರಿಯು ಲಾಭದತ್ತ ಸಾಗುವ ಕುರಿತು ಮಾಹಿತಿಯನ್ನು ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ 8 ಜನ ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಹಾಜರಿದ್ದರು.

**ಹಾಸನ** : ದಿನಾಂಕ : 16.08.2025ರಂದು ಹಾಸನದ ಪುಷ್ಪಗಿರಿ ಸೌಹಾರ್ದ ಸಹಕಾರಿ ನಿ., ಈ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಹಾಸನ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಅಶೋಕ ಜಿ ರವರು ಭಾಗವಹಿಸಿ ನಿರ್ದೇಶಕರ ಹಕ್ಕುಗಳು, ಕರ್ತವ್ಯಗಳು ಮತ್ತು ಸಾಲ ವಸೂಲಾತಿಯ ಮತ್ತು ಸೌಹಾರ್ದ ಕಾಯ್ದೆ ಮತ್ತು ಉಪವಿಧಿಗಳ ಕುರಿತಂತೆ ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಅಗತ್ಯ ಮಾಹಿತಿಯನ್ನು ಆಡಳಿತ ಮಂಡಳಿ ಸದಸ್ಯರಿಗೆ ನೀಡಿದರು.

**ಉಡುಪಿ** : ದಿನಾಂಕ : 12.08.2025ರಂದು ಕಿನಾರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್ ರವರು ಭಾಗವಹಿಸಿ ನಿರ್ದೇಶರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

**ದಿನಾಂಕ : 13.08.2025ರಂದು** ನ್ಯೂ ಉಡುಪಿ ಸೌಹಾರ್ದ ಕೋ–ಆಪರೇಟೀವ್ ಲಿ., ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ವಿಜಯ್ ಬಿ.ಎಸ್ ರವರು ಭಾಗವಹಿಸಿ ನಿರ್ದೇಶರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

**ಮಂಡ್ಯ** : ದಿನಾಂಕ:10.08.2025ರಂದು ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಈ ಸಹಕಾರಿಯು ಭಾರತೀ ನಗರ, ಕೆ.ಎಂ ದೊಡ್ಡಿ, ಮದ್ದೂರು ಇಲ್ಲಿ ಶಾಖೆಯನ್ನು ಪ್ರಾರಂಭಿಸಿದ್ದು ಈ ಕಾರ್ಯಕ್ರಮದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಬಲರಾಮ್ ಎನ್ ರವರು ಭಾಗವಹಿಸಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಶುಭಾಶಯವನ್ನು ಕೋರಲಾಯಿತು ಹಾಗೂ ಈ ಭಾಗದಲ್ಲಿ ಸಹಕಾರಿಯ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಸಹಕಾರಿಯು ತನ್ನ ಸದಸ್ಯರುಗಳಿಗೆ ಆರ್ಥಿಕ ಸೌಲಭ್ಯವನ್ನು ನೀಡುವ ಕುರಿತು ಮಾಹಿತಿಯನ್ನು ತಿಳಿಸಲಾಯಿತು.



# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ

79ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜರೋಹಣವನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ಬೆಂಗಳೂರು ವಿಭಾಗ ಹಾಗೂ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ ಮತ್ತು ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ, ಮೈಸೂರು ವಿಭಾಗದಲ್ಲಿ ಹಾಗೂ ಜಿಲ್ಲಾ ಸಂಪರ್ಕ ಕಛೇರಿಗಳಲ್ಲಿ ಆಚರಿಸಲಾಯಿತು.



**ಬೆಂಗಳೂರು:** 79ನೇಯ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ. ಜಿ. ಪಾಟಿಲ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯ, ಬೆಂಗಳೂರು ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಧ್ವಜಾರೋಹಣವನ್ನು ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲೀ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಕಲಬುರಗಿ ಜಿಲ್ಲೆ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ರವರು ಹಾಗೂ ಸ್ಥಳೀಯ ಸಹಕಾರಿಗಳ ಗಣ್ಯರು ಹಾಜರಿದ್ದರು ಮತ್ತು ಮಾನ್ಯ ಪ್ರಾಂತಿಯ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ** : 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಧ್ವಜಾರೋಹಣವನ್ನು ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ದಾವಾ ಪಂಚಾಯ್ತಿ ನ್ಯಾಯಾಲಯದ ಮಾನ್ಯ ಪೀಠಾಧಿಕಾರಿಗಳಾದ ಶ್ರೀಮತಿ ರಂಜನಾ ಪೋಳರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ, ಪ್ರಾಂತೀಯ ಕಚೇರಿಯ ಸಿಬ್ಬಂದಿಗಳು ಮತ್ತು ಸ್ಥಳೀಯ ಸಹಕಾರಿಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.



**ಮೈಸೂರು** : 79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಧ್ವಜಾರೋಹಣವನ್ನು ಶ್ರೀ ನೀಲಕಂಠಕುಮಾರ್ ಶೆಟ್ಟಿ, ಮಾನ್ಯ ಉಪಾಧ್ಯಕ್ಷರು, ನಿವೃತ್ತ ಸೈನಿಕರ ಸಂಘ, ಮೈಸೂರು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು ಹಾಗೂ ಪ್ರಾಂತೀಯ ಅಧಿಕಾರಿ ಹಾಗೂ ಸಿಬ್ಬಂದಿಗಳು ವರ್ಗದವರು ಉಪಸ್ಥಿತರಿದ್ದರು.



**ಬೀದರ** : ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಹಾಗೂ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಅವರು ನೆರವೇರಿಸಿದರು. ಸ್ಥಳೀಯ ಸಹಕಾರಿಗಳ ಗಣ್ಯರು ಹಾಗೂ ಜಿಲ್ಲಾ ಸಂಪರ್ಕ ಕಛೇರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಆಗಸ್ಟ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ಸಮಾಪನಾಧಿಕಾರಿ ನೇಮಕವಾಗಿರುವ ಸೌಹಾರ್ದ ಸಹಕಾರಿಗಳ ವಿವರ :**

| ಕ್ರ. ಸಂ. | ಸಹಕಾರಿಯ ಹೆಸರು | ನೇಮಕಾತಿ ಪ್ರಾಧಿಕಾರ | ಸಮಾಪನಾಧಿಕಾರಿಯ ಹೆಸರು |
|---|---|---|---|
| 1 | ಆದರ್ಶ ಪ್ರಿಂಟಿಂಗ್ ಮತ್ತು ಸ್ಟೇಷನರಿ ಸೌಹಾರ್ದ ಸಹಕಾರಿ ನಿ., ಹನುಮಂತಪ್ಪ ಅಂಗಡಿ ಕಾಂಪ್ಲೇಕ್ಸ್, ಹೊಸಪೇಟೆ ರಸ್ತೆ, ಕೊಪ್ಪಳ ಜಿಲ್ಲೆ | ಸಹಾಯಕ ನಿಬಂಧಕರು, ಕೊಪ್ಪಳ | ಶ್ರೀ ಓಂಕಾರ್, ಜಿಲ್ಲಾ ಸಂಯೋಜಕರು, ಕೊಪ್ಪಳ |
| 2 | ಧನಲಕ್ಷ್ಮೀ ಸ್ವ–ಶಕ್ತಿ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ., ಬೇವೂರು, ಯಲಬುರ್ಗಾ ತಾಲೂಕು, ಕೊಪ್ಪಳ ಜಿಲ್ಲೆ | | |
| 3 | ಸಂಪೂರ್ಣ ಸ್ವ–ಶಕ್ತಿ ಸೌಹಾರ್ದ ಸಹಕಾರಿ ನಿ., ಗದಗ ರಸ್ತೆ, ಪಾರ್ವತಿ ನಿಲಯ, ಬಸವನಗರ, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ | | |
| 4 | ಶ್ರೀ ರೇಣುಕಾ ಯಲ್ಲಮ್ಮದೇವಿ ಸೌಹಾರ್ದ ಪತ್ತಿನ ಸಹಕಾರಿ ನಿ., 16ನೇ ವಾರ್ಡ ಪೆಂಜಾರ್ ಸ್ಟ್ರೀಟ್, ಅಮರ್ ಲಾಡ್ಜ್ ಹಿಂದುಗಡೆ, ಮುನ್ಸಿಪಲ್ ನಂ.3–5–5, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ | | |
| 5 | ಅಳವಂಡಿ ಗ್ರಾಮೀಣ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಳವಂಡಿ, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ | | |
| 6 | ಪ್ರತಿಭಾ ಮಹಿಳಾ ಸ್ವಸಹಾಯ ಸೌಹಾರ್ದ ಸಹಕಾರಿ ನಿ., ತಾವರೆಗೇರಾ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ | | |
| 7 | ಶ್ರೀ ಬೀರಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಡಿಮಾನಾಳ್, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ | | |
| 8 | ಶ್ರೀ ಜ್ವಾಲಾ ಪತ್ತಿನ ಸೌಹಾರ್ದ ಸಹಕಾರಿ ನಿ., ವಿದ್ಯಾನಗರ, 1ನೇ ಕ್ರಾಸ್, ಅಮರೇಗೌಡ ಅಡ್ವೋಕೆಟ್ ರೆಸಿಡೆನ್ಸಿ ಹತ್ತಿರ, ಬಸ್ ಸ್ಟಾಂಡ್ ಎದುರು, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ | | |
| 9 | ಕೊಪ್ಪಳ ಕಾವೇರಿ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಟಿಎಪಿಸಿಎಂಎಸ್ ಕೌಂಪೌಂಡ್, ಕೊಪ್ಪಳ ತಾಲೂಕು, ಕೊಪ್ಪಳ ಜಿಲ್ಲೆ | | |
| 10 | ಶ್ರೀ ಓಂ ಸಾಯಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ ಜಿ. ಬೆಳಗಾವಿ | ಸಹಾಯಕ ನಿಬಂಧಕರು, ಬೆಳಗಾವಿ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಹುಕ್ಕೇರಿ ತಾಲ್ಲೂಕ |
| 11 | ಹೀರಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹನುಮಾನ್ ನಗರ, ಸಂಕೇಶ್ವರ, ತಾ. ಹುಕ್ಕೇರಿ ಜಿ. ಬೆಳಗಾವಿ | | |
| 12 | ದಿ ಕರ್ನಾಟಕ ಜನಹಿತ ಮಲ್ಟಿಪರಪಜ ಸೌಹಾರ್ದ ಸಹಕಾರಿ ನಿ., ಬೆಳಗಾವಿ | | |
| 13 | ಶ್ರೀ ಹರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಖಾನಾಪೂರ ಜಿ. ಬೆಳಗಾವಿ | | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಳಗಾವಿ ಮತ್ತು ಖಾನಾಪೂರ |
| 14 | ಯಥಿಕಲ್ ಸೌಹಾರ್ದ ಸಹಕಾರಿ ನಿ., ಶೆಟ್ಟಿ ಗಲ್ಲಿ, ಬೆಳಗಾವಿ | | |
| 15 | ದೀನದಲಿತರ ಅನುಪಯೋಗಿ ವಸ್ತುಗಳ ಮಾರಾಟಗಾರರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ದುರ್ಗಾ ಕಾಂಪ್ಲೇಕ್ಸ್, ಪಿ.ಬಿ. ರೋಡ್, ಹಾವೇರಿ | ಸಹಾಯಕ ನಿಬಂಧಕರು, ಹಾವೇರಿ | ಶ್ರೀ ಪ್ರವೀಣ ಬಾರ್ಕಿ, ಹಾವೇರಿ ಜಿಲ್ಲಾ ಸಂಯೋಜಕರು |
| 16 | ರಾಣಿಬೆನ್ನೂರು ತೋಟಗಾರಿಕಾ ಬೆಳೆಗಾರರ ಮಾರಾಟ ಹಾಗೂ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ಕುಣಬೇವು ರಸ್ತೆ, ರಾಣೇಬೆನ್ನೂರು ತಾಲೂಕು, ಹಾವೇರಿ ಜಿಲ್ಲೆ | | |

| | | | |
|---|---|---|---|
| 17 | ಶ್ರೀ ಸಪ್ತಗಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆದಗಲಿ ಸಂಕೀರ್ಣ, ಎ ಬ್ಲಾಕ್, ಬಸವೇಶ್ವರ ನಗರ, ತಾ. & ಜಿ. ಹಾವೇರಿ | ಸಹಾಯಕ ನಿಬಂಧಕರು, ಹಾವೇರಿ | ಶ್ರೀ ಪ್ರವೀಣ ಬಾರ್ಕಿ, ಹಾವೇರಿ ಜಿಲ್ಲಾ ಸಂಯೋಜಕರು |
| 18 | ಶ್ರೀ ಏಕಲವ್ಯ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸರಕಾರಿ ನೌಕರರ ಭವನ, ಹಿರೆಕೇರೂರು ತಾಲೂಕು, ಹಾವೇರಿ ಜಿಲ್ಲೆ | | |
| 19 | ಶ್ರೀ ರಾಜೇಶ್ವರಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಬಸವೇಶ್ವರ ಸರ್ಕಲ್, ಬಸವೇಶ್ವರ ನಗರ, ಬ್ಯಾಡಗಿ ತಾಲೂಕು, ಹಾವೇರಿ ಜಿಲ್ಲೆ | | |
| 20 | ಶ್ರೀ ನವಜ್ಯೋತಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ದೇವಿಹೊಸೂರ ಬಿಲ್ಡಿಂಗ್, ಅಗಡಿ ರಸ್ತೆ, 11ನೇ ಕ್ರಾಸ್, ಶಿವಲಿಂಗನಗರ, ಹಾವೇರಿ ತಾಲೂಕು, ಹಾವೇರಿ ಜಿಲ್ಲೆ | | |
| 21 | ರಾಜಮಾತಾ ಜೀಜಾಬಾಯಿ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಫಾಡಗೆ ಬಿಲ್ಡಿಂಗ್, ರೈಲ್ವೇ ಸ್ಟೇಷನ್ ರಸ್ತೆ, ರಾಣೇಬೆನ್ನೂರು ತಾಲೂಕು, ಹಾವೇರಿ ಜಿಲ್ಲೆ | | |
| 22 | ಶ್ರೀ ಕುರವತ್ತಿ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಗಚ್ಚ, ತಾ. & ಜಿ. ಹಾವೇರಿ | | |
| 23 | ಸ್ಪಂದನ ಮಹಿಳಾ ಸೌಹಾರ್ದ ಸಹಕಾರಿ ನಿ., ಬಾಳೆಮಕ್ಕಿ, ಸುಳ್ಯ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ | ಉಪ ನಿಬಂಧಕರು, ದ.ಕ. ಜಿಲ್ಲೆ, ಮಂಗಳೂರು | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ದ.ಕ. ಜಿಲ್ಲೆ, ಮಂಗಳೂರು |
| 24 | ಅವಶ್ಯ ಸೌಹಾರ್ದ ಪತ್ತಿನ ಸಹಕಾರಿ ನಿ., ನಂ. 892/ಬಿ, ಮೋದಿ ಹಾಸ್ಪಿಟಲ್ ರೋಡ್, ವೆಸ್ಟ್ ಆಫ್ ಕಾರ್ಡ್ ರೋಡ್, ಬೆಂಗಳೂರು | ಸಹಾಯಕ ನಿಬಂಧಕರು, 1ನೇ ವಲಯ ಬೆಂಗಳೂರು ನಗರ ಜಿಲ್ಲೆ | ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ನಗರ 1 ಮತ್ತು 4ನೇ ವಲಯ |

## ಶ್ರೀ ಅಂಬಾಭವಾನಿ ಸೌಹಾರ್ದ ಸಹಕಾರಿ ಸಂಘ ಉದ್ಘಾಟನೆ



**ಕಲಬುರಗಿ :** ಶ್ರೀ ದಿ. ಅಣ್ಣಾರಾವ ಪಾಟೀಲ್ ಸರಡಗಿ ವೇದಿಕೆ ಗಂಜ ಕಾಲೋನಿ ಕಲಬುರ್ಗಿ ಇಲ್ಲಿ ಶ್ರೀ ಅಂಬಾಭವಾನಿ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕಲಬುರ್ಗಿ ನೂತನ ಸಹಕಾರಿಯ ಉದ್ಘಾಟನೆಯನ್ನು ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಇವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಪೂಜ್ಯ ಶ್ರೀ ಮ.ನಿ.ಪ್ರ.ಚರಲಿಂಗ ಮಹಾಸ್ವಾಮಿಗಳು ಗದಗಿ ಮಠ ಮುಕ್ತಾಂಪುರ ಕಲಬುರ್ಗಿ ಇವರು ವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅಂಬಾಭವಾನಿ ಸೌಹಾರ್ದ ಸಹಕಾರಿ ಸಂಘ ನಿ ಕಲಬುರ್ಗಿ ಇದರ ಅಧ್ಯಕ್ಷರಾದ ಶ್ರೀಮತಿ ಶ್ರೀ ಕಮಲಾ ಶರಣಬಸಪ್ಪ ಬಿರಾದಾರ ವಹಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿತಿಗಳಾಗಿ ಶ್ರೀಮತಿ ಶೈಲಾಜ ತಪಲಿ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು ಎಸ್ ಎಸ್ ಪಾಟೀಲ, ಮಾನ್ಯ ಅಧಕ್ಷರು, ಕಲಬುರ್ಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಕಲಬುರ್ಗಿ, ಶ್ರೀ ಸಂಜೀವ ಮಹಾಜನ ಮಾಜಿ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಬೆಂಗಳೂರು, ಶ್ರೀ ಸೂರ್ಯಕಾಂತ ರಾಖಲೆ ಪ್ರಾಂತೀಯ ಅಧಿಕಾರಿಗಳು ಕ.ರಾ.ಸೌ.ಸಂ.ಸನಿ. ಕಲಬುರ್ಗಿ ಹಾಗೂ ಶ್ರೀ ರವಿಶಂಕರ ಜಮದರಖಾನಿ ಅಧ್ಯಕ್ಷರು ಶ್ರೀ ಅಂಬಾಭಾವಾನಿ ದೇವಸ್ಥಾನ,ಗಂಜ ಕಾಲೋನಿ ಕಲಬುರ್ಗಿ ಇವರು ಭಾಗವಹಿಸಿದರು.


# ರಜತ ಮಹೋತ್ಸವ ಕಾರ್ಯಕ್ರಮ



**ಹಾವೇರಿ :** ದಿನಾಂಕ 24.08.2025 ರಂದು ಶಿವ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ರಟ್ಟಿಹಳ್ಳಿ ಸಹಕಾರಿಯ ವಾರ್ಷಿಕ ಮಹಾಸಭೆ ಮತ್ತು 25ನೇ ವರ್ಷದ ರಜತ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಡಾ॥ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ತರಳಬಾಳು ಜಗದ್ಗುರು ಶಾಖಾಮಠ, ಸಾಣೆಹಳ್ಳಿ ಇವರು ವಹಿಸಿದ್ದರು. ಸಭೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶ್ರೀ ಶಂಭುಲಿಂಗಪ್ಪ ಬಿ ಗೋಳಪ್ಪನವರ, ಅಧ್ಯಕ್ಷರು ಶಿವ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ. ರಟ್ಟಿಹಳ್ಳಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಕೆ.ಶಿವಲಿಂಗಪ್ಪ ಇವರು ಉಪಸ್ಥಿತರಿದ್ದರು. ಅತಿಥಿಗಳಾಗಿ ಹಾವೇರಿ ಜಿಲ್ಲೆಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ವಿ.ಜಿ.ಕುಲಕರ್ಣಿ ಮತ್ತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ. ಪಿ. ಪಾಟೀಲ್ ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 09.08.2025ರಂದು ಕರಾವಳಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ದಾವಣಗೆರೆ ಸಹಕಾರಿಯ 25ನೇ ವರ್ಷದ ರಜತ ಮಹೋತ್ಸವ ಕಾರ್ಯಕ್ರಮವು ಜರುಗಿತು. ಕಾರ್ಯಕ್ರಮದ ಉದ್ಘಾಟನೆಯನ್ನು ದಾವಣಗೆರೆ ಜಿಲ್ಲೆಯ ಮಾನ್ಯ ಲೋಕಸಭಾ ಸದಸ್ಯರಾದ ಸನ್ಮಾನ್ಯ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ ರವರು ಹಾಗೂ ಮಾಜಿ ಸಚಿವರಾದ ಸನ್ಮಾನ್ಯ ಶ್ರೀ ಜಯಪ್ರಕಾಶ ಹೆಗ್ಡೆ ರವರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಆರ್. ಪ್ರಭುದೇವ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿ.ಎ. ಉಮೇಶ್ ಶೆಟ್ಟಿ ರವರು ವಹಿಸಿದ್ದರು. ವೇದಿಕೆಯ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್. ಸೀತಾರಾಮ ಶೆಟ್ಟಿ ರವರು, ನಿರ್ದೇಶಕರುಗಳು ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಖಲೀಲ್ ಅಹ್ಮದ್ ರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಉದ್ಘಾಟಕರುಗಳು, ಮುಖ್ಯ ಅತಿಥಿಗಳು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಸದರಿಯವರಿಗೆ ಸಹಕಾರಿಯ ವತಿಯಿಂದ ಸನ್ಮಾನಿಸಿ ಗೌರವ ಸಮರ್ಪಣೆ ಮಾಡಿದರು.



**ಶಿವಮೊಗ್ಗ :** ದಿನಾಂಕ 24.08.2025ರಂದು ಧರ್ಮನ್ಯಾಸ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ಹೊಸಹಳ್ಳಿ ಸಹಕಾರಿಯ 25ನೇ ವರ್ಷದ ಬೆಳ್ಳಿ ಹಬ್ಬದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರು ಹಾಗೂ ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ವಿ. ರವಿಕುಮಾರ್ ರವರು ವಹಿಸಿದ್ದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್. ರವರು ಭಾಗವಹಿಸಿದ್ದರು.



**ದಾವಣಗೆರೆ :** ದಿನಾಂಕ 15.08.2025ರಂದು ದಿ ಇಂಡಿಯನ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ನಿ. ಹರಿಹರ, ದಾವಣಗೆರೆ ಜಿಲ್ಲೆ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯ ನಂತರ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಮ್.ಆರ್. ಪ್ರಭುದೇವ್ ರವರು ಭಾಗವಹಿಸಿ ಸೌಹಾರ್ದ ಕಾಯ್ದೆ ಹಾಗೂ ಸದಸ್ಯರ ಹಕ್ಕು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಉಪಸ್ಥಿತರಿದ್ದರು.

## ಉದ್ಘಾಟನೆ




**ಬೆಳಗಾವಿ :** ದಿನಾಂಕ 01.08.2025 ರಂದು ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ ಸಹಕಾರಿಯ 17ನೇ ಶಾಖೆಯನ್ನು ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕಿನ ಚಿಂಚಲಿ ಗ್ರಾಮದಲ್ಲಿ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಗದೀಶ ಕವಟಗಿಮಠರವರು ಭಾಗವಹಿಸಿ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಸವರಾಜ ತಡಸನವರ, ಉಪಾಧ್ಯಕ್ಷರಾದ ಶ್ರೀ ಗೋಟುರ, ಆಡಳಿತ ಮಂಡಳಿ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು, ಸಿಬ್ಬಂದಿ ವರ್ಗದವರು ಮತ್ತು ಸಹಕಾರಿಯ ಸದಸ್ಯರು ಉಪಸ್ಥಿತರಿದ್ದರು.



**ಬೆಳಗಾವಿ :** ದಿನಾಂಕ 06.08.2025 ರಂದು ಶ್ರೀ ಹರಿಶಕುಮಾರ, ಬಿ.ವಿ. ವಸೂಲಾಧಿಕಾರಿಗಳು (ನಿ.441) ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಬೆಳಗಾವಿ ಇವರು ಪ್ರಾಂತೀಯ ಕಛೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು




**ಚಿಕ್ಕಮಗಳೂರು :** ದಿನಾಂಕ: 15.08.2025 ಶುಕ್ರವಾರ ದಂದು ತರೀಕೆರೆ ತಾಲ್ಲೂಕಿನಲ್ಲಿ ಹೊಸದಾಗಿ ನೊಂದಣಿಯಾದ ಹರಿಶ್ರೀ ಕ್ರೆಡಿಟ್ ಸೌಹಾರ್ದ ಸಹಕಾರಿಯ ನೂತನ ಉದ್ಘಾಟನಾ ಸಮಾರಂಭ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಇ ವಾಸುದೇವ್ ಮೂರ್ತಿ, ಉಪಾಧ್ಯಕ್ಷರಾದ ಶ್ರೀಮತಿ ಸ್ವಪ್ನ ಭೀಮೇಶ್ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಹುಲಿಯಾಂಬಿಕ ಮತ್ತು ಸಹಕಾರಿಯ ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರು ಹಾಗೂ ಸದಸ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ತರೀಕೆರೆ ತಾಲ್ಲೂಕಿನ ಸಹಕಾರ ಕ್ಷೇತ್ರದ ನಾಯಕರು ಹಾಗೂ ಸಹಕಾರ ರತ್ನ ಪುರಸ್ಕೃತರಾದ ಶ್ರೀಯುತ ಶಿವಶಂಕರ್ ರವರು, ಶ್ರೀ ಎಮ್ ನರೇಂದ್ರ ರವರು ಹಾಗೂ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಯ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿರವರು ಉಪಸ್ಥಿತರಿದ್ದರು. ಹಾಗೂ ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಯವರಾದ ಶ್ರೀ ಅಶೋಕ ಜಿ ರವರು ಉಪಸ್ಥಿತರಿದ್ದು, ನಿರ್ದೇಶಕರಿಗೆ ಹಾಗೂ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಪರಿಚಯ, ಕಾಯ್ದೆಯ ಆಶಯವನ್ನು ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆ ಕುರಿತಂತೆ ನೆರೆದಿದ್ದ ಸದಸ್ಯರಿಗೆ ಮಾಹಿತಿಯನ್ನು ನೀಡಿದರು



**ಮಂಡ್ಯ :** ದಿನಾಂಕ : 15.08.2025ರಂದು ಮಂಡ್ಯ ಜಿಲ್ಲೆಯಲ್ಲಿ ಪ್ರಗತಿಪರ ಸೌಹಾರ್ದ ಸಹಕಾರಿ ಸಂಘ ನಿ., ಮಂಡ್ಯ ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರಾ ಇವರು ಭಾಗವಹಿಸಿ ಸೌಹಾರ್ದ ಕಾಯ್ದೆ ಮತ್ತು ಸಹಕಾರ ಕ್ಷೇತ್ರ ಬೆಳವಣಿಗೆ, ಸಹಕಾರಿಯು ಮಾಡಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಸಭೆಯಲ್ಲಿ ಭಾಗವಹಿಸಿದ್ದ ಸದಸ್ಯರಿಗೆ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿಂಧು , ಮುಖ್ಯ ಪ್ರವರ್ತಕರು ಪ್ರಗತಿಪರ ಸೌಹಾರ್ದ ಸಹಕಾರಿ ಸಂಘ ನಿ., ಇವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಗುರುರಾಜ್ ಬಿ. ಟಿ ಅಧ್ಯಕ್ಷರು, ಶ್ರೀ ಸಿದ್ದಲಿಂಗಯ್ಯ ಉಪಾಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಮಂಡ್ಯ ಹಾಗೂ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಮಂಡ್ಯ ಇವರು ಭಾಗವಹಿಸಿದ್ದರು.

## ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆ



**ಮಂಡ್ಯ** : ದಿನಾಂಕ : 24.08.2025ರಂದು ಭೈರವ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಂಡ್ಯ ಇದರ ಮೂರನೆಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಶ್ರೀ ಗುರುಪ್ರಸಾದ್ ಬಂಗೇರ ಪ್ರಾಂತ್ಯ ಅಧಿಕಾರಿ ಮೈಸೂರು ಇವರು ಭಾಗವಹಿಸಿ ಸದಸ್ಯರಿಗೆ ಸೌಹಾರ್ದ ಕಾಯ್ದೆಯ ಕುರಿತು ಹಾಗೂ ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಿದರು.



**ಮಂಡ್ಯ** : ದಿನಾಂಕ : 24.08.2025ರಂದು ಕೆಂಪೇಗೌಡ ಸೌಹಾರ್ದ ಸಹಕಾರಿ ಸಂಘ ಹಲಗೂರು, ಮಳವಳ್ಳಿ ಇದರ ಎರಡನೆಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಶ್ರೀ ಬಲರಾಮ್ ಎನ್ ಇವರು ಭಗವಹಿಸಿ ಸದಸ್ಯರಿಗೆ ಸೌಹಾರ್ದ ಕಾಯ್ದೆ ಮತ್ತು ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಮೈಸೂರು** : ದಿನಾಂಕ 17.08.2025 ರಂದು ಶ್ರೀ ವಾಗ್ದೇವಿ ಸೌಹಾರ್ದ ಸಹಕಾರಿ ನಿಯಮಿತ, ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮಾನ್ಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾ–ರಿಯ ಆಡಳಿತ ಮಂಡಳಿ ಸದಸ್ಯರು ಸದಸ್ಯರು ಮತ್ತು ಮೈಸೂರು ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಭಾಗವಹಿಸಿದರು.



**ಕೊಡಗು** : ದಿನಾಂಕ : 24.08.2025ರಂದು ಕುಶಾಲ್ ನಗರ ಬಸವೇಶ್ವರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸದಸ್ಯರು ಮತ್ತು ಮೈಸೂರು ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಭಾಗವಹಿಸಿದರು.



**ಚಾಮರಾಜನಗರ** : ದಿನಾಂಕ : 19.08.2025ರಂದು ಶ್ರೀ ವೀರಭದ್ರೇಶ್ವರ ಭದ್ರಕಾಳಮ್ಮ ಸೌಹಾರ್ದ ಸಹಕಾರಿ ನಿ., ಕಾಗಲವಾಡಿ, ಚಾಮರಾಜನಗರ ಜಿಲ್ಲೆ ಈ ಸಹಕಾರಿಯ ಸರ್ವಸದಸ್ಯರ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಚಾಮರಾಜನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಬಲರಾಮ್ ಎನ್ ರವರು ಭಾಗಿಯಾಗಿ ಸಹಕಾರಿಯ ಸದಸ್ಯರಿಗೆ ಸಹಕಾರಿಯಿಂದ ಸದಸ್ಯರಿಗೆ ಸಿಗುವ ಆರ್ಥಿಕ ಸವಲತ್ತುಗಳು, ಸದಸ್ಯರ ಹಕ್ಕು ಮತ್ತು ಜವಾಬ್ದಾರಿಗಳ ಕುರಿತು ಮಾಹಿತಿಯನ್ನು ನೀಡಲಾಯಿತು.



**ಶಿವಮೊಗ್ಗ** : ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯು ನಮ್ಮ ಸಮುದಾಯದ ಮಕ್ಕಳು ಶೈಕ್ಷಣಿಕವಾಗಿ ಅಭಿವೃದ್ಧಿಯಾಗಬೇಕು ಎಂಬ ಸಹಕಾರಿಯ ಆಡಳಿತ ಮಂಡಳಿಯ ಆಶಯದಂತೆ ದಿನಾಂಕ 24.08.2025 ರ ಭಾನುವಾರದಂದು 9, 10ನೇ ತರಗತಿ ಮತ್ತು ಪ್ರಥಮ ಪಿಯುಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಕಾರ್ಯಗಾರದಲ್ಲಿ ಸುಮಾರು 60 ಮಕ್ಕಳು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4:30ರ ವರೆಗೆ ಆಸಕ್ತಿಯಿಂದ ಭಾಗವಹಿಸಿದ್ದರು ಇವರ ಜೊತೆ ಪೋಷಕರು ಸಹ ಈ ಕಾರ್ಯದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಈ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಮತಿ ಶುಭ ಮರವಂತೆ, ಶ್ರೀಮತಿ ಸವಿತಾ ಮಾಧವ್, ಡಾ. ಮಂಜುನಾಥ್ ಮತ್ತು ಶ್ರೀಯುತ ಸಮನ್ವಯ ಕಾಶೀರವರು ಆಗಮಿಸಿದ್ದರು. ಇದೆ ಸಂದರ್ಭದಲ್ಲಿ ಸುಮಾರು 125 ಷೇರುದಾರರಿಗೆ ಕರ್ನಾಟಕ ಸರ್ಕಾರದ ಆಯುಷ್ಮಾನ್ ಆರೋಗ್ಯ ಕಾರ್ಡನ್ನು ಸಹಕಾರಿಯ ವತಿಯಿಂದ ಉಚಿತವಾಗಿ ಮಾಡಿಸಿ ಸಾಂಕೇತಿಕವಾಗಿ 10 ಷೇರುದಾರರಿಗೆ ಕಾರ್ಡನ್ನು ವಿತರಣೆ ಮಾಡಲಾಯಿತು. ಶಿವಮೊಗ್ಗ ನಗರದ ಶಾಸಕರಾದ ಶ್ರೀಯುತ ಚನ್ನಬಸಪ್ಪ ಕಾರ್ಯಕ್ರಮಕ್ಕೆ ಆಗಮಿಸಿ ಸಹಕಾರಿಯಿಂದ ಆಯುಷ್ಮಾನ್ ಗಾರ್ಡನ್ನು ಉಚಿತವಾಗಿ ವಿತರಣೆ ಮಾಡುತ್ತಿರುವ ಈ ಕಾರ್ಯವನ್ನು ಪ್ರಶಂಶಿಸಿ ಕಾರ್ಡನ್ನು ವಿತರಣೆ ಮಾಡಿದರು. ಮೇಲ್ಕಂಡ ಎಲ್ಲಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿದ ನಮ್ಮ ಶಿವಮೊಗ್ಗ ಜಿಲ್ಲಾ ಬಲಿಜ ಸೇವಾ ಸಂಘದ ಪದಾಧಿಕಾರಿಗಳಿಗೂ, ಆದಿಲಕ್ಷ್ಮಿ ಬಲಿಜ ಮಹಿಳಾ ಸಂಘದ ಪದಾಧಿಕಾರಿಗಳಿಗೂ ಹಾಗೂ ನಮ್ಮ ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ಆಡಳಿತ ಮಂಡಳಿಯ ಪದಾಧಿಕಾರಿಗಳಿಗೂ ಮತ್ತು ಸಿಬ್ಬಂದಿಯವರಿಗೂ ಸಹಕಾರಿಯ ಅಧ್ಯಕ್ಷರಾದ ಎನ್ ವೆಂಕಟೇಶ್‌ನಾಯ್ಡು ರವರು ಧನ್ಯವಾದಗಳನ್ನು ತಿಳಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಮಕ್ಕಳು ಮತ್ತು ಪೋಷಕರೆಲ್ಲರಿಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿತು



**ರಾಯಚೂರು** : ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘದ 15ನೇ ವಾರ್ಷಿಕ ಮಹಾಸಭೆ ಸಿಂಧನೂರು 2024–25ನೇ ಆರ್ಥಿಕ ವರ್ಷದಲ್ಲಿ ಶ್ರೀ ಸಾಯಿ ಚನ್ನಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ಸಂಘವು ನೂರು ಕೋಟಿಗೂ ಅಧಿಕ ವ್ಯವಹಾರ ನಡೆಸಿದ್ದು, 1.32 ಕೋಟಿ ರೂ.ಗಳ ನಿವ್ವಳ ಲಾಭಗಳಿಸಿದ್ದು, ಶೇ.22 ರಷ್ಟು ಲಾಭಾಂಶ ಘೋಷಿಸಲು ಸಂತೋಷವೆನಿಸುತ್ತದೆ ಎಂದು ಸಹಕಾರಿ ಸಂಘದ ಅಧ್ಯಕ್ಷ ಎಂ.ಲೋಕನಗೌಡ ಹೇಳಿದರು.

ನಗರದ ಖಾಸಗಿ ಹೋಟೇಲ್ ನಲ್ಲಿ ನಡೆದ 15ನೇ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಮ್ಮ ಸಹಕಾರಿಯು ಹದಿನೈದು ವರ್ಷಗಳಲ್ಲಿ ಅಮೋಘವಾಗಿ ಬೆಳೆದು ನಿಂತಿದೆ. ಆಡಳಿತ ಮಂಡಳಿಯ ಸಹಕಾರ ಹಾಗೂ ಸಿಬ್ಬಂದಿ ಪರಿಶ್ರಮ ಉತ್ತಮ ಬೆಳವಣಿಗೆಗೆ ಕಾರಣವಾಗಿದೆ. ನಗರದ ಪ್ರತಿಷ್ಠಿತ ಸಹಕಾರಿಯ ಸಾಲಿನಲ್ಲಿ ನಿಂತಿದೆ. ಹಣಕಾಸಿನ ವ್ಯವಹಾರದ ಜೊತೆಗೆ ಸದಸ್ಯರಿಗೆ ವಿವಿಧ ಯೋಜನೆಗಳನ್ನು ರೂಪಿಸಲು ಆಡಳಿತ ಮಂಡಳಿ ಚಿಂತನೆ ನಡೆಸಿದೆ. ಸದಸ್ಯರಿಗೆ ಅನುಕೂಲವಾಗುವಂತೆ ವಿವಿಧ ಸಾಲದ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಸಹಕಾರಿಯ ಬೆಳವಣಿಗೆಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.

ಉಪಾಧ್ಯಕ್ಷ ಎಂ.ಆರ್. ಪ್ರಾಣೇಶ, ನಿರ್ದೇಶಕರಾದ ಸೂಗೂರಯ್ಯ ಸ್ವಾಮಿ, ಆರ್.ಪಂಪಾಪತಿ ಅಲಬನೂರು, ಹೆಚ್.ಕಲ್ಯಾಣಪ್ಪ, ಕೆ.ಶರಣಬಸವ, ಎಂ.ಸರ್ವೋತ್ತಮರೆಡ್ಡಿ ಪಾಟೀಲ್, ಮಣಿಮಾಲ, ರಂಗಮ್ಮ, ಸುನಂದ, ಲೆಕ್ಕ ಪರಿಶೋಧಕ ಕೆ.ನಾಗನಗೌಡ, ಕಾನೂನು ಸಲಹೆಗಾರ ಬಸವನಗೌಡ, ಮುಖ್ಯಕಾರ್ಯನಿರ್ವಾಹಣಾಧಿಕಾರಿ ಡಿ. ಬಸವರಾಜ, ಸಹಾಯಕ ವ್ಯವಸ್ಥಾಪಕ ಎನ್.ಬಸವರಾಜ ಅಲಬನೂರು ಸೇರಿದಂತೆ ಸಿಬ್ಬಂದಿ, ಸದಸ್ಯರು ಭಾಗವಹಿಸಿದ್ದರು.



**ಮೈಸೂರು** : ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿಯಮಿತ, ಸಹಕಾರಿಯ ಸಾಮಾನ್ಯ ಸಭೆಯಲ್ಲಿ ಮಾನ್ಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರವರು ಭಾಗವಹಿಸಿ ಸದಸ್ಯರ ಹಕ್ಕುಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರು ಭಾಗವಹಿಸಿದರು.



**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ನಿ., ಗದಗ ಇದರ ವತಿಯಿಂದ ಮುಂಜಾನೆ 8–15 ಘಂಟೆಗೆ ಸಂಘದ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ ಆಸಂಗಿ ಇವರ ಅಮೃತ ಹಸ್ತದಿಂದ ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮ ಜರುಗಿತು. ಸಭೆಯಲ್ಲಿ ಸಂಘದ ನಿರ್ದೇಶಕರಾದ ಶ್ರೀ ಎಸ್ ಎಲ್ ನೀಲಗುಂದ ವ್ಹಿ ಎಸ್ ಉಪ್ಪಿನ ಮತ್ತು ಸಂಘದ ಮ್ಯಾನೇಜವರಾದ ಶ್ರೀ ಸಿ ವ್ಹಿ ಪಾಟೀಲ , ಪರಪ್ಪ ವ್ಹಿ ಬಳೆಗೇರ ವೀರೇಶ ಕರಡಿ ಹಾಗೂ ಪಿಗ್ಮಿ ಸಂಗ್ರಹಕರಾರದ ಶ್ರೀ ರಮೇಶ ಪಿ ಅಣ್ಣಿಗೇರಿ ಮತ್ತು ಆಯ್ ಜೆ ಶಿರೂರು ಹಾಜರಿದ್ದರು.

---



**ಬೆಳಗಾವಿ :** ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿ., ಯರಗಟ್ಟಿ ಇದರ 2024–25ನೇ ಸಾಲಿನ 10ನೇಯ ವಾರ್ಷಿಕ ಸರ್ವಸದಸ್ಯರ ಸಭೆಯು ದಿನಾಂಕ 24.08.2025 ರಂದು ಜರುಗಿತು. ಈ ಸಭೆಯಲ್ಲಿ 2024–25ನೇಯ ಸಾಲಿನ ಆರ್ಥಿಕ ವರ್ಷದಲ್ಲಿ 2611 ಸದಸ್ಯರನ್ನು ಹೊಂದಿದ್ದು, ರೂ. 14,15,500/– ಶೇರು ಬಂಡವಾಳ ಹೊಂದಿದೆ. ಕಾಯ್ದೆಟ್ಟ ನಿಧಿಗಳು ರೂ. 98,73,790/– ಠೇವಣಿಯು ರೂ. 14,96,18,879/– ಸಾಲವು ರೂ. 12,93,70,556/– ವಿವಿಧ ಬ್ಯಾಂಕುಗಳಲ್ಲಿ ರೂ. 1,38,48,012/– ಠೇವಣಿ ಇಡಲಾಗಿದೆ. ವ್ಯವಹಾರಕ್ಕಾಗಿ ವಿವಿಧ ಬ್ಯಾಂಕುಗಳಲ್ಲಿ ರೂ. 1,71,72,188/– ಇಡಲಾಗಿದೆ. ಸಹಕಾರಿಯ ಒಟ್ಟು ವ್ಯವಹಾರ 59,05,84,084/– ಆಗಿರುತ್ತದೆ. ಸಹಕಾರಿಯು 3 ಶಾಖೆಗಳನ್ನು ಹೊಂದಿದೆ. 2024–25 ನೇ ಸಾಲಿನಲ್ಲಿ 19,41,35/– ಲಾಭವನ್ನು ಗಳಿಸಿದೆ. ಎಂದು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಸಿದ್ರಾಯಜ್ಜನವರು ಕಟಕೋಳ ಇವರು ವಾರ್ಷಿಕ ವರದಿಯನ್ನು ಓದಿದರು. ಈ ಸಭೆಯಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

---



**ಉಡುಪಿ :** ಜನಹಿತ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಇದರ 2024–25 ಸಾಲಿನ ಸಾಮಾನ್ಯ ಸಭೆಯು ಸೊಸೈಟಿಯ ಅಧ್ಯಕ್ಷರಾದ ಶ್ರೀ ಗೋಪಾಲ್ ಯು ಇವರ ಅಧ್ಯಕ್ಷತೆಯಲ್ಲಿ ಉಡುಪಿಯ ಡಯಾನ ಹೋಟೇಲಿನ ಸಭಾಂಗಣದಲ್ಲಿ ಜರುಗಿತು. 2025–26ನೇ ಸಾಲಿನ ಕಾರ್ಯಯೋಜನೆಗಳನ್ನು ಸಭೆಯಲ್ಲಿ ಪ್ರಸ್ತುತ ಪಡಿಸುತ್ತಾ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಧನ ನೀಡುತ್ತಾ ಸಂಸ್ಥೆಗೆ ಸರ್ವರ ಸಹಕಾರ ನಿರಂತರವಾಗಲಿ ಎಂದು ಆಶಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು

---



**ಶಿವಮೊಗ್ಗ :** ಶಾರದ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಶಿವಮೊಗ್ಗ ಇದರ 2024–25ನೇ ಸಾಲಿನ 20ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.08.2025 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಶಂಕರ ಹೆಚ್‌ಎಸ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.

2024–25ನೇ ಸಾಲಿನಲ್ಲಿ 101 ಲಕ್ಷ ಲಾಭಗಳಿಸಿದ್ದು, ಶೇಕಡಾ 11ರಂತೆ ಸದಸ್ಯರಿಗೆ ಪಾಲುಬಂಡವಾಳದ ಮೇಲೆ ಲಾಭಾಂಶ ಮತ್ತು ಸಿಬ್ಬಂದಿಗಳಿಗೆ ಎರಡು ತಿಂಗಳ ಬೋನಸ್ಸ್ ಘೋಷಿಸಲಾಯಿತು.

ಸಹಕಾರಿಯ ಷೇರು ಬಂಡವಾಳ ರೂ.3,65,83,200.00/– ನಿಧಿಗಳು ರೂ.8,21,32,686.00/– ಠೇವಣಿಗಳು ರೂ. 73,52,02,735.00/– ಮಾರಾಟ ವ್ಯವಹಾರ ಒಟ್ಟು ರೂ. 114,66,63,862/–



**ಬೆಂಗಳೂರು :** ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್ ನ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ದಿನಾಂಕ 24.08.2025 ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ಬಂಟರ ಸಂಘದ ಆವರಣದಲ್ಲಿ ಅಧ್ಯಕ್ಷರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸದಸ್ಯರಾದ ಕುಮಾರಿ ಸಂಹಿತ ಶೆಟ್ಟಿಯವರ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭಗೊಂಡು, ಉಪಾಧ್ಯಕ್ಷರಾದ ಶ್ರೀ ಹೆಚ್ ಶ್ರೀಧರ್ ಹೆಗ್ಡೆಯವರು ಸಹಕಾರಿ ಬಂಧುಗಳನ್ನು ಸಭೆಗೆ ಆಹ್ವಾನಿಸಿ "ಸೌಹಾರ್ದ ಸಹಕಾರಿಯ ನಡೆ ಸುಸ್ಥಿರ ಅಭಿವೃದ್ಧಿಯ ಕಡೆ" ಎಂಬ ಧ್ಯೇಯದಂತೆ ಪ್ರಾಸ್ತಾವಿಕ ನುಡಿಯಲ್ಲಿ ಸಂಸ್ಥೆಯ ಬೆಳವಣಿಗೆಗಳ ಬಗ್ಗೆ, ಪ್ರಸಕ್ತ ಸಾಲಿನಲ್ಲಿ ನಡೆದ ಕಾರ್ಯಕಲಾಪಗಳ ಬಗ್ಗೆ, ಸುಸ್ತಿ ಸಾಲದ ವಸೂಲಾತಿಗಳ ಅಂಕಿ ಅಂಶಗಳನ್ನು ನೀಡಿ ಬದಲಾದ ಉಪನಿಬಂಧನೆಗಳ ಪ್ರಕಾರ ಲಾಭಂಶ ವಿಂಗಡನೆಯಲ್ಲಿ ಮಾಡಲೇಬೇಕಾದ ಬದಲಾವಣೆಗಳ ಕುರಿತು ತಿಳಿಸಿ, ನೆರೆದಿದ್ದ ಸದಸ್ಯರ, ಗಣ್ಯರ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವೆಂದು ತಿಳಿಸುತ್ತಾ ಹಾಜರಾಗಿದ್ದ ಎಲ್ಲಾ ನಿರ್ದೇಶಕರುಗಳಿಗೆ, ಮಾಜಿ ನಿರ್ದೇಶಕರುಗಳಿಗೆ, ಸಹಕಾರಿಯ ವಕೀಲರುಗಳಾದ ಶ್ರೀ ಉದಯ್‌ಶಂಕರ ರೈ, ಶ್ರೀ ವಿಠ್ಠಲ್ ಎಸ್ ರೈ ಮತ್ತು ಶ್ರೀ ಎಸ್ ಬಸವರಾಜುರವರಿಗೆ ಹಾಗೂ ಅಂತರಿಕ ಲೆಕ್ಕ ಪರಿಶೋಧಕರಾದ ಬಿ.ವಿ.ಸಿ ಅಂಡ್ ಕಂಪನಿರವರಿಗೆ ಮತ್ತು ಸನ್ನದ್ದು ಲೆಕ್ಕ ಪರಿಶೋಧಕರಾದ ಮೆ॥ ವೆಂಕಟಾಚಲ ರಾಘವೇಂದ್ರ ಅಂಡ್ ಕಂಪನಿರವರಿಗೆ ಮತ್ತು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಹಕಾರಿ ಬಂಧುಗಳಿಗೆ ಆದರದ ಪ್ರೀತಿ ಪೂರ್ವಕ ಸ್ವಾಗತ ಕೋರಿದರು. ನಿರ್ದೇಶಕರಾದ ಶ್ರೀ ಡಿ ಚಂದ್ರಹಾಸ್ ರೈ ಯವರು ಪ್ರಸಕ್ತ ಸಾಲಿನಲ್ಲಿ ನಿಧನರಾಗಿರುವ ಸದಸ್ಯರಿಗೆ ಸಂತಾಪ ಸೂಚಿಸುವ ಕಾರ್ಯಕ್ರಮವನ್ನು ಒಂದು ನಿಮಿಷಗಳ ಕಾಲ ಮೌನ ಆಚರಿಸುವುದರೊಂದಿಗೆ ನಡೆಸಲಾಯಿತು. ವೇದಿಕೆಯಲ್ಲಿ ಉಪಸ್ಥಿತರಿದ್ದ ಸಂಘದ ಕಾರ್ಯದರ್ಶಿ ಶ್ರೀಮತಿ ಶೋಭ ಆರ್ ರವರು ಕಾರ್ಯಸೂಚಿಪಟ್ಟಿಗನುಗುಣವಾಗಿ ಮಹಾಸಭೆಗೆ ಎಲ್ಲಾ ಸೂಚನೆಗಳನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. ಸದಸ್ಯರೆಲ್ಲರ ಸಹಕಾರದಿಂದ ಮಾತ್ರವೇ ಸಂಸ್ಥೆಯ ಸಮೃದ್ಧಿ ಸಾಧ್ಯವೆಂಬ ಮಾತಿನೊಡನೆ ಅಧ್ಯಕ್ಷರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರು 2024–25 ನೇ ಸಾಲಿನ ಲಾಭದ ಹಂಚಿಕೆಯಲ್ಲಿ ಷೇರು ಬಂಡವಾಳದ ಮೇಲೆ 12% ಡಿವಿಡೆಂಡ್ ಘೋಷಣೆಯೊಂದಿಗೆ ಎಂದಿನಂತೆ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು. ನಂತರ ಅಧ್ಯಕ್ಷರು ಮಾತನಾಡಿ 28ನೇ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಸದಸ್ಯರಿಗೂ ಗೌರವ ಪೂರ್ವಕವಾದ ಸ್ವಾಗತ ಮತ್ತು ಅಭಿನಂದನೆಗಳನ್ನು ತಿಳಿಸಿ ಅವರ ಅಧಿಕಾರದ ಅವಧಿಯಲ್ಲಿ ಪ್ರಗತಿ ಪಥ–'ದಲ್ಲಿ ಪ್ರಾಮಾಣಿಕ ಮತ್ತು ಪಾರದರ್ಶಕ ಸೇವೆ ನಡೆಸಿಕೊಂಡು ಬಂದಿದ್ದು ಸದಸ್ಯರ ಪ್ರೋತ್ಸಾಹ, ಸಿಬ್ಬಂದಿ ವರ್ಗದ ಸೇವಾ ಮನೋಭಾವ, ಲೆಕ್ಕ ಪರಿಶೋಧಕರು ಮತ್ತು ವಕೀಲರುಗಳ ಸಲಹೆ ಸಹಕಾರದೊಂದಿಗೆ ಮುನ್ನಡೆಯುತ್ತಿರುವ ಬಗ್ಗೆ ತಿಳಿಸಿ ಮತ್ತೊಮ್ಮೆ ಎಲ್ಲರಿಗೂ ವಂದನೆಗಳನ್ನು ತಿಳಿಸಿದರು. ನಂತರ ಸಭೆಯ ಕಾರ್ಯಕಲಾಪಗಳು ಕಾರ್ಯಸೂಚಿ ಪಟ್ಟಿಯಂತೆ ಮುಂದುವರೆದು ನಿರ್ದೇಶಕರಾದ ಶ್ರೀ ಡಿ ಚಂದ್ರಹಾಸ್ ರೈಯವರು ಸಭೆಗೆ ಹಾಜರಾದ ಎಲ್ಲಾ ಸದಸ್ಯ ಬಾಂಧವರಿಗೂ ಧನ್ಯವಾದ ತಿಳಿಸಿದರು.



**ಕಲಬುರಗಿ :** ದಿನಾಂಕ 20.07.2025 ರಂದು ಶ್ರೀ ಆದಿಶಕ್ತಿ ಸೌಹಾರ್ದ ಸಹಕಾರಿ ವಾರ್ಷಿಕ ಸಾಮಾನ್ಯ ಸಭೆಯು ಬ್ರಹ್ಮಪೂರ ಆದಿಶಕ್ತಿ ಸಭಾ ಭವನ ಕಲಬುರ್ಗಿಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಹಾಜರಿದ್ದರು.



**ಕಲಬುರಗಿ :** ದಿನಾಂಕ 24.08.2025ರಂದು ಭಾನುವಾರ ಕಲಬುರ್ಗಿ ನಗರದ ಕನ್ನಡ ಭವನದಲ್ಲಿ ಕಲಬುರ್ಗಿ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ ನಡೆಯಿತು ಹಾಗೂ ದಿನಾಂಕ 16.08.2025 ರಂದು ಪ್ರವಾಸಿ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ ನಡೆಯಿತು.



**ಬಳ್ಳಾರಿ :** ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಪ್ರಧಾನ ಕಚೇರಿ, ಹೊಸಪೇಟೆ, ಇದರ 2024–25 ನೇ ಸಾಲಿನ 23 ನೇ ವಾರ್ಷಿಕ ಮಹಾಸಭೆಯು ದಿನಾಂಕ 06–09–2025 ನೇ ಶನಿವಾರ ಮಧ್ಯಾಹ್ನ 12.00 ಘಂಟೆಗೆ # 504, " ನವಕರ್ನಾಟಕ " ಬಿಲ್ಡಿಂಗ್, ಪಟೇಲ ನಗರ, 4 ನೇ ವಾರ್ಡ, ಹೊಸಪೇಟೆಯಲ್ಲಿ ಶ್ರೀ ಕೆ. ವೀರಪ್ಪ, ಅಧ್ಯಕ್ಷರು, ಇವರ ಅಧ್ಯಕ್ಷತೆಯಲ್ಲಿ ಜರುಗಿತು.ಮಹಾಸಭೆಯ ಪ್ರಾರಂಭದಲ್ಲಿ ಅಗಲಿದ ಸದಸ್ಯರ ಆತ್ಮಕ್ಕೆ ಶಾಂತಿ ದಯಪಾಲಿಸಲು 2 ನಿಮಿಷ ಮೌನಾಚರಣೆಯ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶ್ರೀಮತಿ ಸುನೀತಾ ತಡಸ ಮತ್ತು ಶ್ರೀಮತಿ ವಿಜಯಲಕ್ಷ್ಮೀ ತಡಸ ಇವರು ಪ್ರಾರ್ಥನೆ ಮಾಡಿದರು. ಶ್ರೀ ಕಲ್ಲಯ್ಯಾ ಬ. ಶಿವಪೂಜಿ, ಮುಖ್ಯ ಕಾರ್ಯನಿರ್ವಾಹಕರು, ಸ್ವಾಗತ ಭಾಷಣ ಮಾಡಿದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ. ವೀರಪ್ಪ, ಇವರು 2024–25 ನೇ ಸಾಲಿನ ಆಡಳಿತ ವರದಿಯನ್ನು ಓದಿ, ಸದರಿ ಸಹಕಾರಿಯು 2024–25 ನೇ ಸಾಲಿನಲ್ಲಿ ರೂ.23,29,798.65 ಲಾಭ ಗಳಿಸಿದ್ದು, ಸದಸ್ಯರಿಗೆ 7 % ಲಾಭಾಂಶ ಘೋಷಿಸಲಾಗಿದೆ ಎಂದು ತಿಳಿಸಿದರು. SSLC ಮತ್ತು PUC ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದು ಉತ್ತೀರ್ಣರಾದ ಸದಸ್ಯರ ಮೂರು ಮಕ್ಕಳಿಗೆ ನಗದು ರೂಪದಲ್ಲಿ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಡಾ॥ ಈರಣ್ಣ ಪಿ ಶೆಟ್ಟರ ಇವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

---



**ಪುತ್ತೂರು :** ಪುತ್ತೂರಿನಲ್ಲಿ ಪ್ರಧಾನ ಕಛೇರಿಯನ್ನು ಹೊಂದಿ ರಾಜ್ಯದಾದ್ಯಂತ 20 ಶಾಖೆಗಳೊಂದಿಗೆ ಕಾರ್ಯಾನಿರ್ವಹಿಸುತ್ತಿರುವ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 24ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ದಿನಾಂಕ 05–09–2025ನೇ ಶುಕ್ರವಾರದಂದು ಒಕ್ಕಲಿಗಗೌಡ ಸಮುದಾಯಭವನ, ತೆಂಕಿಲ, ಪುತ್ತೂರು ಇಲ್ಲಿ ನಡೆಯಿತು. ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರು ಸಹಕಾ–ರಿಯುಗಣನೀಯ ಪ್ರಗತಿ ಸಾಧಿಸಲು ಕಾರಣೀಕರ್ತರಾದ ಎಲ್ಲಾ ಸದಸ್ಯ ಬಾಂಧವರಿಗೆ ಅಭಿನಂದನೆ ಸಲ್ಲಿಸಿದರು ಹಾಗೂ ಸಹಕಾರಿಯ ಸೇವಾ ಸೌಲಭ್ಯಗಳ ಮಾಹಿತಿಯನ್ನು ನೀಡಿದರು. ರಾಜ್ಯದಾದ್ಯಂತ 20 ಶಾಖೆಗಳ ಮೂಲಕ ಸದಸ್ಯರಿಗೆ ಸೇವೆಯನ್ನು ನೀಡುತ್ತಿರುವ 2024–25ರ ಆರ್ಥಿಕ ವರ್ಷಾಂತ್ಯಕ್ಕೆ ಸಹಕಾರಿಯಲ್ಲಿ 49,257 ಸದಸ್ಯರು, ರೂ9.99ಕೋಟಿ ಪಾಲುಬಂಡವಾಳದೊಂದಿಗೆ, ಸಹಕಾರಿಯು ರೂ 42.08 ಕೋಟಿ ವಿವಿಧ ನಿಧಿಗಳನ್ನು ಹೊಂದಿಸಿ ದೃಢವಾಗಿದೆ. ಸಹಕಾರಿಯು ತನ್ನ ಸದಸ್ಯರಿಂದ ರೂ.358ಕೋಟಿ ಠೇವಣಾತಿಯನ್ನು ಸಂಗ್ರಹಿಸಿ, ರೂ.330ಕೋಟಿ ಸಾಲವನ್ನು ವಿತರಿಸಲಾಗಿದೆ, ಒಟ್ಟು ವ್ಯವಹಾರ ರೂ. 688ಯಾಗಿದ್ದು, ರೂ. 5.99ಕೋಟಿ ನಿವ್ವಳ ಲಾಭ ದಾಖಲಿಸಿದ್ದು ಸದಸ್ಯರಿಗೆ ಶೇ.13 ಡಿವಿಡೆಂಡ್‌ಅನ್ನು ಸಭೆಯಲ್ಲಿ ಘೋಷಿಸಲಾಯಿತು. ಸಹಕಾರಿಯ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಶ್ರೀವಸಂತನಾಯಕ್ ಎ ರವರು ವಾರ್ಷಿಕ ವರದಿ ಹಾಗೂ ಲೆಕ್ಕಪತ್ರಗಳನ್ನು ಮಂಡಿಸಿದರು. ಸಹಕಾರಿಯ ಸದಸ್ಯರುಗಳು ವಿವಿಧ ಸಲಹೆ ಸೂಚನೆಗಳನ್ನು ನೀಡಿದರು.

ವೇದಿಕೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಉಮೇಶ್ ಪ್ರಭು ಕೆ, ನಿರ್ದೇಶಕರಾದ ಶ್ರೀದೇವಿ ಪ್ರಸಾದ್ ಕೆ, ಶ್ರೀಜಯರಾಮಪಿ, ಶ್ರೀ ಕೆಹರೀಶ್ ಬೋರ್ಕರ್, ಶ್ರೀ ಹೇಮಂತಕುಮಾರ್ ಕೆಆರ್, ಶ್ರೀಪ್ರಕಾಶ್ಚಂದ್ರಪಿ, ಶ್ರೀ ರಮೇಶ್ಚಂದ್ರ ಎಂ, ಶ್ರೀರಾಜಗೋಪಾಲಬಿ, ಶ್ರೀಮತಿ ದೇವಕಿ ಕೆ, ಶ್ರೀಮತಿ ಸರಸ್ವತಿ ಎನ್, ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ವಸಂತಶಂಕರ್, ಶ್ರೀ ವೇದವ್ಯಾಸ ಕೆ, ಕಾರ್ಯಾನುಗುಣ ನಿರ್ದೇಶಕರಾದ ಶ್ರೀ ಶ್ರೀಕಾಂತರಾವ್‌ವಿ ಡಿ, ಶ್ರೀರವೀಶ ಪಿ ಹಾಗೂ ವರದಿ ವರ್ಷದ ಸನ್ನದು ಲೆಕ್ಕಪರಿಶೋಧಕರಾದ ಸಿ.ಎ ಚಂದ್ರಶೇಖರ್ ಎ ಜಿ ರವರು ಉಪಸ್ಥಿತರಿದ್ದರು.

ಸಹಕಾರಿಯ ಹಿರಿಯ ಅಧಿಕಾರಿ ಶ್ರೀಮತಿ ಶ್ರೀ ರಂಜಿತಾ ಎ ವಿ ಹಾಗೂ ಕುಮಾರಿ ವೈಷ್ಣವಿ ಪ್ರಾರ್ಥಿಸಿದರು, ಮುಖ್ಯಕಾರ್ಯನಿವರ್ಹಣಾಧಿಕಾರಿ ಶ್ರೀ ವಸಂತನಾಯಕ್ ಎ ಸ್ವಾಗತಿಸಿ, ವಿಭಾಗೀಯ ವ್ಯವಸ್ಥಾಪಕರಾದ ಶ್ರೀ ಪ್ರೇಮ ಚಂದ್ರನಾಯಕ್ ವಂದಿಸಿದರು. ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ಇವರು ನಿರೂಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಸಂಗೀತ ಕಾರ್ಯಕ್ರಮ :**

ಮಹಾಸಭೆಯ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಪೂರ್ವಾಹ್ನ 9 ರಿಂದ 10.30ರವರೆಗೆ ಭಾವನ ಸುಗಮಸಂಗೀತ ಕಲಾ ಶಾಲೆಯ ಶ್ರೀ ಕೆಆರ್ ಗೋಪಾಲ ಕೃಷ್ಣ ಮತ್ತು ಬಳಗದವರಿಂದ "ಸಂಗೀತ ಸಾಂಗತ್ಯ" ಸುಗಮ ಸಂಗೀತ ಕಾರ್ಯಕ್ರಮ ನಡೆಯಿತು.

**ರಜತ ಮಹೋತ್ಸವ ವರ್ಷಾಚರಣೆಯ ಉದ್ಘಾಟನೆ**

ಇದೇ ವೇದಿಕೆಯಲ್ಲಿ ಸಹಕಾರಿಯು 24 ಸಂವತ್ಸರಗಳನ್ನು ಪೂರೈಸಿ 25ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಸುಸಂದರ್ಭದಲ್ಲಿ “ಸಹಕಾ–ರಿಯ ರಜತ ಮಹೋತ್ಸವ ವರ್ಷಾಚರಣೆಯ ಉದ್ಘಾಟನೆಯನ್ನು ಪದ್ಮಶ್ರೀಪುರಸ್ಕೃತ ತೂಗುಸೇತುವೆಯ ಹರಿಕಾರ ಶ್ರೀ ಗಿರೀಶ್‌ಭಾರಧ್ವಾಜ್ ಇವರು ದೀಪ ಪ್ರಜ್ವಲನೆ ಮಾಡುವ ಮೂಲಕ ಅಧಿಕೃತ ಚಾಲನೆಯನ್ನು ನೀಡಿ ಶುಭಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಹಕಾರಿಯ ಹಿರಿಯ ಸದಸ್ಯರು, ವಿಧಾನಪರಿಷತ್ ಮಾಜಿ ಸದಸ್ಯರೂ ಆಗಿರುವ ಶ್ರೀ ಅಣ್ಣಾ ವಿನಯಚಂದ್ರ ಇವರು ಸಹಕಾರಿ ಕ್ಷೇತ್ರದಲ್ಲಿ ಸರಸ್ವತಿ ಸಹಕಾರಿಯ ಸಾಧನೆಯನ್ನು ಶ್ಲಾಘಿಸಿ, ರಜತಮಹೋತ್ಸವಕ್ಕೆ ಅತ್ಯತ್ತಮ ಯೋಜನೆಗಳನ್ನು ರೂಪಿಸಿ ಕಾರ್ಯಪ್ರವೃತ್ತರಾಗಲು ತಿಳಿಸಿಶುಭಹಾರೈಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಹಕಾರಿಯ ಹಿರಿಯ ಸದಸ್ಯರು, ಕರ್ನಾಟಕ ಲೋಕಸೇವಾ ಆಯೋಗದ ಮಾಜಿಸದಸ್ಯರೂ ಆಗಿರುವಶ್ರೀ–ಎಸ್‌ಆರ್ ರಂಗಮೂರ್ತಿಇವರು ಸರಸ್ವತಿ ಸಹಕಾರಿಯು ತನ್ನ 24 ವರ್ಷಗಳ ಸೇವೆಯಲಿ ್ಲಕಪ್ಪುಚುಕ್ಕೆಯಿಲ್ಲದೆ ಸೇವೆಯನ್ನು ಸಲ್ಲಿಸಿದುದಕ್ಕೆ ಅಭಿನಂದನೆಗಳನ್ನು ಸಲ್ಲಿಸಿ ಮತ್ತಷ್ಟು ಉತ್ಕೃಷ್ಟಸೇವೆಯನ್ನು ಸಲ್ಲಿಸುವಂತಾಗಲಿ ಎಂದು ಶುಭಹಾರೈಸಿದರು.

---




**ಗದಗ :** ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ಸಹಕಾರಿಯ 2024–25ನೇಯ ಸಾಲಿನ 29ನೇ ವಾರ್ಷಿಕ ಸರ್ವ ಸಾಧಾರಣ ಮಹಾಸಭೆಯನ್ನು ದಿನಾಂಕ 07–09–2025 ನೇಯ ರವಿವಾರ ದಿವಸ ಮದ್ಯಾಹ್ನ 12–00 ಘಂಟೆಗೆ ಸ್ಥಳ ನಮ್ಮ ಸಹಕಾರಿಯ ಆಫೀಸಿನ ಆವರಣ ದಲ್ಲಿ, ಸ್ಟೇಟ ಬ್ಯಾಂಕ ಎದುರಿಗೆ, ಎಪಿಎಮ್‌ಸಿ ಯಾರ್ಡ್, ಗದಗ 582101 ಸಹಕಾರಿಯ ಅಧ್ಯಕ್ಷರಾದ ಶ್ರೀ ಶಂಕರಗೌಡ ಎಂ ಪಾಟೀಲ ಸಾ॥ ಮಲ್ಲಸಮುದ್ರ ಇದರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯ ಸಂಘದ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ ಆಸಂಗಿ ಇವರು ಸಂಘದ ಅಧ್ಯಕ್ಷರಿಗೆ ಆಡಳಿತ ಮಂಡಳಿಯ ಸದಸ್ಯರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಪಿಗ್ಮಿ ಸಂಗ್ರಹಕಾರರಿಗೆ ಹಾಗೂ ಹಾಜರಿದ್ದ ಸಕಲ ಎಲ್ಲಾ ಸದಸ್ಯರಿಗೆ ಠೇವುದಾರಿಗೆ ಹಿತೈಷಿಗಳಿಗೆ ಸ್ವಾಗತ ಕೋರಿದರು. ಸಭೆಯ ಪ್ರಾರಂಭದ ಮೊದಲು ನಮ್ಮ ಸಹಕಾರಿಯ ಸದಸ್ಯರಾದ ಐ ಕೆ ಬಲುಚಗಿ ನಿಧನದ ನಿಮಿತ್ಯ 2 ನಿಮಿಷ ಮೌನ ಆಚರಿಸಲಾಯಿತು.

ನಂತರ ಸಹಕಾರಿಯ ಮ್ಯಾನೇಜರ ಶ್ರೀ ಸಿ ವ್ಹಿ ಪಾಟೀಲ ಇವರು ಅಜೆಂಡದ ಪ್ರಕಾರ ಸಹಕಾರಿಯ 1 ರಿಂದಾ 24 ರವರೆಗೆ ಎಲ್ಲಾ ವಿಷಯಗಳು ಚರ್ಚಿಸಿ ಸರ್ವಾನುಮತದಿಂದ ಸಭೆಯಲ್ಲಿ ಅನುಮೂದಿಸಿದರು ಸಹಕಾ–ರಿಯ ಅಡಿಟ್ ಮಾಡಿದ ಜಮಾ–ಖರ್ಚು ಲಾಭ ಹಾನಿ ಮತ್ತು ಅಡಾವೆ ಪತ್ರಿಕೆಗಳನ್ನು ಮತ್ತು ಅಡಿಟ್ ವರದಿಗೆ ಅನುಪಾಲನಾ ವರದಿಯನ್ನು ಓದಿ ಸಹಕಾರಿಯ ಸಂಪೂರ್ಣ ಮಾಹಿತಿಯನ್ನು ಹಾಜರಿದ್ದ ಸದಸ್ಯರ ಸಭೆಯಲ್ಲಿ ಓದಿ ಹೇಳಿದರು ಹಾಗೂ ಸನ್ 2025–26 ನೇಯ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆಯನ್ನು ಕೂಡಾ ಓದಲಾಯಿತು ಸಂಘದ ಸದಸ್ಯರಿಗೆ ಡಿವಿಡೆಂಡ (ಲಾಭಾಂಶವನ್ನು) ಶೇ. 8% ಘೋಷಿಸಲಾಯಿತು.

---

**ಗದಗ :** ಭಾಗ್ಯಲಕ್ಷ್ಮೀ ವಿವಿದೊದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ ಇದರ ಸಹಕಾರಿಯ 2024–25ನೇಯ ಸಾಲಿನ 15ನೇ ವಾರ್ಷಿಕ ಸರ್ವ ಸಾಧಾರಣ ಮಹಾಸಭೆಯನ್ನು ದಿನಾಂಕ 08–09–2025 ನೇಯ ಇಸ್ವಿಯ ಸೋಮವಾರ ದಿವಸ ಮಧ್ಯಾಹ್ನ 12–00 ಘಂಟೆಗೆ ಸ್ಥಳ ನಮ್ಮ ಸಹಕಾರಿಯ ಆವರಣದಲ್ಲಿ ಟಾಗೋರ ರೋಡ, ಗದಗ. 582101 ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ ಎಸ್ ಹೊಸಮಠ ಇದರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯ ಹಿರಿಯ ಉಪಾಧ್ಯಕ್ಷರಾದ ಶ್ರೀ ಅಶೋಕ ಪಿ. ಮುತ್ತಿನ ಇವರು ಸಹಕಾರಿಯ ಅಧ್ಯಕ್ಷರಿಗೆ ಮತ್ತು ನಿರ್ದೇಶಕರಿಗೆ ಹಾಗೂ ಆಡಳಿತ ಸದಸ್ಯರಿಗೆ ಸಿಬ್ಬಂದಿಗೆ ವರ್ಗದವರಿಗೆ ಪಿಗ್ಮಿ ಸಂಗ್ರಹಕಾರರಿಗೆ ಹಾಜರಿದ್ದ ಸಕಲ ಎಲ್ಲಾ ಸದಸ್ಯರಿಗೆ ಠೇವುದಾರಿಗೆ ಹಿತೈಷಿಗಳಿಗೆ ಸ್ವಾಗತ ಕೋರಿದರು. ಸಭೆಯ ಪ್ರಾರಂಭದ ಮೊದಲು ನಮ್ಮ ಸಹಕಾರಿಯ ಸದಸ್ಯರು ನಿಧನದ ನಿಮಿತ್ಯ 2 ನಿಮಿಷ ಮೌನ ಆಚರಿಸಲಾಯಿತು ಆ ಮೇಲೆ ಸಹಕಾರಿಯ ಮ್ಯಾನೇಜರ ಇವರು ಅಜೆಂಡದ ಪ್ರಕಾರ ಸಹಕಾರಿಯ 1 ರಿಂದಾ 26 ರವರೆಗೆ ಎಲ್ಲಾ ವಿಷಯಗಳು ಚರ್ಚಿಸಿ ಸರ್ವಾನುಮತದಿಂದ ಸಭೆಯಲ್ಲಿ ಅನುಮೂದಿಸಿದರು. ಸಹಕಾರಿಯ ಅಡಿಟ್ ಮಾಡಿದ ಜಮಾ–ಖರ್ಚು ಲಾಭ ಹಾನಿ ಮತ್ತು ಅಡಾವೆ ಪತ್ರಿಕೆಗಳನ್ನು ಮತ್ತು ಅಡಿಟ್ ವರದಿಗೆ ಅನುಪಾಲನಾ ವರದಿಯನ್ನು ಓದಿ ಸಹಕಾರಿಯ ಸಂಪೂರ್ಣ ಮಾಹಿತಿಯನ್ನು ಹಾಜರಿದ್ದ ಸದಸ್ಯರ ಸಭೆಯಲ್ಲಿ ಓದಿ ಹೇಳಿದರು ಹಾಗೂ ಸನ್ 2025–26 ನೇಯ ಸಾಲಿನ ಅಂದಾಜು ಆಯ–ವ್ಯಯ ಪತ್ರಿಕೆಯನ್ನು ಕೂಡಾ ಓದಲಾಯಿತು.

ನಂತರ ಸಹಕಾರಿಯ ವರದಿ ವಾಚನವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ ಎಸ್ ಹೊಸಮಠ ಓದಿದರು ಸನ್ 2024–25 ನೇಯ ಸಾಲಿನಲ್ಲಿ ನಿವ್ವಳ ಲಾಭ ರೂ 342561=50 ಗಳಿಸಿದೆ ಹಿಂದಿನ ವರ್ಷಕ್ಕೆ ಹೋಲಿಸಿದಾಗ ರೂ 16344–12 ಹೆಚ್ಚಿಗೆ ಲಾಭ ವಾಗಿದ್ದು ಸಹಕಾರಿಯ ಸದಸ್ಯರಿಗೆ ಶೇಕಡಾ 10% ರಷ್ಟು ಲಾಭಾಂಶವನ್ನು (ಡಿವ್ಹಿಡೆಂಡ) ಹಣ ವಿತರಣೆ ಮಾಡಲು ಘೋಷಣೆ ಮಾಡಲಾಯಿತು.

# ಸಕಾರಾತ್ಮಕ ಪ್ರತಿಕ್ರಿಯೆಯ ಮೂಲಕ ಧನಾತ್ಮಕ ಪ್ರಯೋಜನ

– ಶ್ರೀಮತಿ ದಿವ್ಯ ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

ಸಕಾರಾತ್ಮಕ ಪ್ರತಿಕ್ರಿಯೆಯು ಸಾಮಾನ್ಯ ಸಂವಹನಕ್ಕಿಂತ ಹೆಚ್ಚಿನ ಮಹತ್ವದ್ದಾಗಿದೆ. ಇದು ನಡವಳಿ, ಮನಸ್ಥಿತಿ ಮತ್ತು ಭಾವನಾತ್ಮಕ ಬುದ್ಧಿವಂತಿಕೆಯ ಪ್ರತಿಬಿಂಬವಾಗಿದೆ. ವೈಯಕ್ತಿಕ ಸಂಬಂಧಗಳು, ಕೆಲಸದ ಸ್ಥಳಗಳು, ಸಮಾಜ ಅಥವಾ ಸಹಕಾರಿ ಸಂಸ್ಥೆಗಳಲ್ಲಿ, ನಾವು ಇತರರಿಗೆ ಪ್ರತಿಕ್ರಿಯಿಸುವ ವಿಧಾನವು ನಂಬಿಕೆ, ಪ್ರೇರಣೆ ಮತ್ತು ಸಹಯೋಗದ ಮನೋಭಾವವನ್ನು ಬೆಳೆಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ.

**ವ್ಯಾಖ್ಯಾನ :** ಸಕಾರಾತ್ಮಕ ಪ್ರತಿಕ್ರಿಯೆ ಎಂದರೆ ಇತರರ ಪ್ರಯತ್ನಗಳನ್ನು, ದೃಷ್ಟಿಕೋನಗಳನ್ನು ಅಥವಾ ಕಾಳಜಿಗಳನ್ನು ಗೌರವಿಸುವುದು, ಪ್ರೋತ್ಸಾಹಿಸುವುದು ಮತ್ತು ಪರಿಹಾರ-ಆಧಾರಿತ ರೀತಿಯಲ್ಲಿ ಒಪ್ಪಿಕೊಳ್ಳುವುದಾಗಿದೆ. ಈ ಪ್ರಕ್ರಿಯೆಯು ಅಗತ್ಯವಾಗಿ ಎಲ್ಲದಕ್ಕೂ ಒಪ್ಪುವುದು ಎಂದರ್ಥವಲ್ಲ; ಬದಲಿಗೆ ಸಹಾನುಭೂತಿ, ಮುಕ್ತತೆ ಮತ್ತು ಸಂವಹನ ಹಾಗೂ ಸಂಬಂಧಗಳನ್ನು ಬಲಪಡಿಸುವ ಉದ್ದೇಶದಿಂದ ಪ್ರತಿಕ್ರಿಯಿಸುವುದನ್ನೊಳಗೊಂಡಿರುತ್ತದೆ.

ಉದಾಹರಣೆಗೆ ಸಹಕಾರಿ ಸಂಸ್ಥೆಯ ಸದಸ್ಯರು ಸಭೆಯ ಸಂದರ್ಭದಲ್ಲಿ ಆತಂಕವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂಬ ಸಂದರ್ಭದಲ್ಲಿ ಇದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡುವುದರ ಮೂಲಕ "ಇದು ರಚನಾತ್ಮಕ ಅಂಶ. ಅದನ್ನು ಪ್ರಸ್ತಾಪಿಸಿದ್ದಕ್ಕಾಗಿ ಧನ್ಯವಾದಗಳನ್ನು" ತಿಳಿಸಿದಲ್ಲಿ ಪ್ರತಿಕ್ರಿಯೆಗೆ ಮುಕ್ತತೆಯನ್ನು ತೋರಿಸುತ್ತದೆ ಮತ್ತು ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ.

ಸಕಾರಾತ್ಮಕ ಪ್ರತಿಕ್ರಿಯೆ ಎಂದರೆ ಒಂದು ಸನ್ನಿವೇಶ, ಪ್ರಶ್ನೆ ಅಥವಾ ಪ್ರಚೋದನೆಗೆ ಅನುಕೂಲಕರ, ಪ್ರೋತ್ಸಾಹದಾಯಕ ಅಥವಾ ರಚನಾತ್ಮಕ ಉತ್ತರ ಅಥವಾ ಪ್ರತಿಕ್ರಿಯೆ. ಇದು ಹೆಚ್ಚಾಗಿ ಆಶಾವಾದ, ಒಪ್ಪಂದ, ಬೆಂಬಲ ಅಥವಾ ತೊಡಗಿಸಿಕೊಳ್ಳುವ ಇಚ್ಛೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ವೈಯಕ್ತಿಕ, ವೃತ್ತಿಪರ ಅಥವಾ ಸಾಮಾಜಿಕ ವ್ಯವಸ್ಥೆಗಳಲ್ಲಿ ವಿಶ್ವಾಸವನ್ನು ಬೆಳೆಸಲು, ಸಂಬಂಧಗಳನ್ನು ಸುಧಾರಿಸಲು ಮತ್ತು ಸಹಕಾರಿ ವಾತಾವರಣವನ್ನು ಬೆಳೆಸಲು ಸಹಾಯ ಮಾಡುತ್ತದೆ.

ಉದಾಹರಣೆಗೆ ಇಬ್ಬರು ಸಹಕಾರಿ ಸದಸ್ಯರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವ ಸಂದರ್ಭದಲ್ಲಿ ಇದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡುವುದರ ಮೂಲಕ "ನಮ್ಮಲ್ಲಿ ವಿಭಿನ್ನ ದೃಷ್ಟಿಕೋನಗಳು ಇರಬಹುದು, ಆದರೆ ಒಟ್ಟಾಗಿ ಕೆಲಸ ಮಾಡುವುದರ ಮೂಲಕ ನಮಗೆ ಬೆಳೆಯಲು ಸಹಾಯವಾಗುತ್ತದೆ" ಎಂದು ತಿಳಿಸಿದಲ್ಲಿ ಏಕತೆ ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸುತ್ತದೆ.

### ಸಕಾರಾತ್ಮಕ ಪ್ರತಿಕ್ರಿಯೆಯ ಲಾಭಗಳು :

- ಆತ್ಮವಿಶ್ವಾಸವನ್ನು ನಿರ್ಮಿಸುತ್ತದೆ.
- ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ.
- ಸಂಘರ್ಷವನ್ನು ಕಡಿಮೆ ಮಾಡುತ್ತದೆ.
- ಸಂಬಂಧಗಳನ್ನು ಸುಧಾರಿಸುತ್ತದೆ.

ವ್ಯಕ್ತಿಗಳು ಮೆಚ್ಚುಗೆ ಅಥವಾ ರಚನಾತ್ಮಕ ಪ್ರತಿಕ್ರಿಯೆಯನ್ನು ಪಡೆದಾಗ, ಅವರ ಸ್ವ-ಮೌಲ್ಯ ಮತ್ತು ಪ್ರೇರಣೆ ಹೆಚ್ಚಾಗುವುದರ ಮೂಲಕ ಆತ್ಮವಿಶ್ವಾಸವನ್ನು ನಿರ್ಮಿಸುತ್ತದೆ. ಸಕಾರಾತ್ಮಕ ಪ್ರತಿಕ್ರಿಯೆಯು ಜನರು ಕೇಳುತ್ತಾರೆಂದು ಭಾವಿಸುವ ಮತ್ತು ಆಲೋಚನೆಗಳನ್ನು ನೀಡುವ ಅಥವಾ ಉಪಕ್ರಮವನ್ನು ತೆಗೆದುಕೊಳ್ಳುವ ಸಾಧ್ಯತೆ ಹೆಚ್ಚು ಇರುವ ಸುರಕ್ಷಿತ ಸ್ಥಳವನ್ನು ಸೃಷ್ಟಿಸುವುದರ ಮೂಲಕ ಸಂಘರ್ಷವನ್ನು ಕಡಿಮೆ ಮಾಡುತ್ತದೆ. ಭಿನ್ನಾಭಿಪ್ರಾಯಗಳ ಸಮಯದಲ್ಲಿಯೂ ಸಹ, ಶಾಂತ ಮತ್ತು ಸಕಾರಾತ್ಮಕ ಸ್ವರವು ಉಲ್ಬಣಗೊಳ್ಳುವುದನ್ನು ತಡೆಯುತ್ತದೆ ಮತ್ತು ತಿಳುವಳಿಕೆಯನ್ನು ಉತ್ತೇಜಿಸುವುದರ ಮೂಲಕ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ. ತಂಡದಲ್ಲಿ ಅಥವಾ ಕುಟುಂಬದಲ್ಲಿ ಇರಲಿ, ಸಕಾರಾತ್ಮಕ ಪ್ರತಿಕ್ರಿಯೆಗಳು ಪರಸ್ಪರ ಗೌರವ ಮತ್ತು ಭಾವನಾತ್ಮಕ ಸಂಪರ್ಕವನ್ನು ಬೆಳೆಸುವುದರ ಮೂಲಕ ಸಂಬಂಧಗಳನ್ನು ಸುಧಾರಿಸುತ್ತದೆ.

### ವ್ಯಕ್ತಿತ್ವಕ್ಕೆ ಗೌರವ :

- ನಾಯಕತ್ವದಲ್ಲಿ
- ಶಿಕ್ಷಣದಲ್ಲಿ
- ಸಹಕಾರಿ ಸಂಸ್ಥೆಗಳಲ್ಲಿ
- ದೈನಂದಿನ ಜೀವನದಲ್ಲಿ/ ಸಮಾಜದಲ್ಲಿ

ಸಕಾರಾತ್ಮಕವಾಗಿ ಪ್ರತಿಕ್ರಿಯಿಸುವ ನಾಯಕರು ತಮ್ಮ ತಂಡದ ಸದಸ್ಯರಲ್ಲಿ ನಂಬಿಕೆ ಮತ್ತು ನಿಷ್ಠೆಯನ್ನು ಪ್ರೇರೇಪಿಸುವುದರ ಮೂಲಕ ಉತ್ತಮ ನಾಯಕರಾಗುತ್ತಾರೆ. ತಾಳ್ಮೆ ಮತ್ತು ಪ್ರೋತ್ಸಾಹದೊಂದಿಗೆ ಪ್ರತಿಕ್ರಿಯಿಸುವ ಶಿಕ್ಷಕರು ವಿದ್ಯಾರ್ಥಿಗಳು ಕಲಿಯಲು ಉತ್ಸುಕರಾಗಿರುವ ವಾತಾವರಣವನ್ನು ಸೃಷ್ಟಿಸುತ್ತಾರೆ. ಸದಸ್ಯ-ಚಾಲಿತ ಸಹಕಾರಿ ಸಂಸ್ಥೆಗಳಲ್ಲಿ, ಸಕಾರಾತ್ಮಕ ಪ್ರತಿಕ್ರಿಯೆಗಳು ಪ್ರಜಾಪ್ರಭುತ್ವ ಸಂವಾದ ಮತ್ತು ಸಾಮೂಹಿಕ ಪ್ರಗತಿಯನ್ನು ಬೆಂಬಲಿಸುತ್ತವೆ. ದೈನಂದಿನ ಜೀವನದಲ್ಲಿ/ ಸಮಾಜದಲ್ಲಿ ಯಾರಿಗಾದರೂ ಧನ್ಯವಾದ ಹೇಳುವುದು, ನಗುವುದು ಅಥವಾ ಗಮನವಿಟ್ಟು ಆಲಿಸುವುದು, ವೃತ್ತಿಪರವಾಗಿ ವರ್ತಿಸುವುದು, ಧನಾತ್ಮಕವಾಗಿ ಆಲೋಚಿಸಿ, ಕಾರ್ಯಗತವಾಗುವುದು ಸೇರಿದಂತೆ ಮುಂತಾದ ಚಟುವಟಿಕೆಗಳು ಶಾಶ್ವತವಾದ ಪರಿಣಾಮವನ್ನು ಬೀರುತ್ತವೆ.

## ಸಕಾರಾತ್ಮಕ ಪ್ರತಿಕ್ರಿಯೆಯ ಪ್ರಮುಖ ಪರಿಕಲ್ಪನೆಗಳು :

ಸಕಾರಾತ್ಮಕ ಪ್ರತಿಕ್ರಿಯೆಯ ಪರಿಕಲ್ಪನೆಗಳು ಒಟ್ಟಾಗಿ ಉನ್ನತಿಗೇರಿಸುವ, ಎಲ್ಲರನ್ನೂ ಒಳಗೊಳ್ಳುವ ಮತ್ತು ಉತ್ಪಾದಕವಾದ ಸಂವಹನ ಶೈಲಿಯನ್ನು ಸೃಷ್ಟಿಸುತ್ತವೆ. ಸಕಾರಾತ್ಮಕ ಪ್ರತಿಕ್ರಿಯೆಯ ಪ್ರಮುಖ ಪರಿಕಲ್ಪನೆಗಳೆಂದರೆ;

- ಆಶಾವಾದ
- ಪ್ರೋತ್ಸಾಹ
- ಸಹಾನುಭೂತಿ ಮತ್ತು ತಿಳುವಳಿಕೆ
- ರಚನಾತ್ಮಕ ಪ್ರತಿಕ್ರಿಯೆ
- ಬೆಂಬಲ ಮತ್ತು ಸಹಕಾರ
- ಗೌರವಯುತ ಸಂವಹನ
- ಕೃತಜ್ಞತೆ ಮತ್ತು ಮೆಚ್ಚುಗೆ
- ದೃಢೀಕರಣ
- ಸಂಘರ್ಷ ಪರಿಹಾರ

## ಸಕಾರಾತ್ಮಕ ಪ್ರತಿಕ್ರಿಯೆ ಎಂದರೆ ಹೀಗಿರಬೇಕು:

ಸಕಾರಾತ್ಮಕ ಪ್ರತಿಕ್ರಿಯೆಯು ಪ್ರಾಮಾಣಿಕತೆ ಮತ್ತು ಗೌರವವನ್ನು ಕಾಪಾಡಿಕೊಳ್ಳುವಾಗ ಉನ್ನತಿ, ಬೆಂಬಲ ಮತ್ತು ಪ್ರೋತ್ಸಾಹವನ್ನು ನೀಡಬೇಕು. ಇದು ಪ್ರತಿಕ್ರಿಯಾತ್ಮಕವಾಗಿ ಅಲ್ಲ, ಚಿಂತನಶೀಲವಾಗಿ ಪ್ರತಿಕ್ರಿಯಿಸುವುದರ ಕುರಿತಂತೆ ಇರಬೇಕು. ಸಕಾರಾತ್ಮಕ ಪ್ರತಿಕ್ರಿಯೆ ಎಂದರೆ ಹೀಗಿರಬೇಕು, ಅವುಗಳೆಂದರೆ;

- **ಗೌರವಯುತ ಮತ್ತು ಸೌಜನ್ಯಯುತ :** ಸಂವಹಿಸುವಾಗ ಸಭ್ಯ ಭಾಷೆ ಮತ್ತು ಸ್ವರವನ್ನು ಬಳಸಬೇಕು. ಇತರ ವ್ಯಕ್ತಿಯ ಪ್ರಯತ್ನ ಅಥವಾ ದೃಷ್ಟಿಕೋನವನ್ನು ಒಪ್ಪಿಕೊಳ್ಳಬೇಕು. ಉದಾಹರಣೆ:ನಿಮ್ಮ ಅಭಿಪ್ರಾಯಕ್ಕೆ ಧನ್ಯವಾದಗಳು, ನಿಮ್ಮ ದೃಷ್ಟಿಕೋನವನ್ನು ನಾನು ಪ್ರಶಂಸಿಸುತ್ತೇನೆ.
- **ರಚನಾತ್ಮಕ ಮತ್ತು ಪರಿಹಾರ-ಆಧಾರಿತ :** ಏನು ತಪ್ಪಾಗಿದೆ ಎಂಬುದರ ಮೇಲೆ ಮಾತ್ರವಲ್ಲದೇ ಏನು ಮಾಡಬಹುದು ಎಂಬುದರ ಮೇಲೆ ಕೇಂದ್ರೀಕರಿಸಬೇಕು. ಸಹಾಯಕವಾದ ಸಲಹೆಗಳು ಅಥವಾ ಪ್ರೋತ್ಸಾಹವನ್ನು ನೀಡಬೇಕು. ಉದಾಹರಣೆ:ಈ ಕಾರ್ಯವನ್ನು ಸುಧಾರಿಸಬಹುದು ಮತ್ತು ಅದನ್ನು ಇನ್ನಷ್ಟು ಉತ್ತಮಗೊಳಿಸುವ ಸಾಮರ್ಥ್ಯ ನಿಮ್ಮಲ್ಲಿದೆ ಎಂದು ನಾನು ನಂಬುತ್ತೇನೆ.
- **ಆಶಾವಾದಿ ಮತ್ತು ಉನ್ನತಿಗೇರಿಸುವ :** ಫಲಿತಾಂಶದಲ್ಲಿ ಭರವಸೆ ಮತ್ತು ವಿಶ್ವಾಸವನ್ನು ತೋರಿಸಬೇಕು. ಕಾರ್ಯನಿರ್ವಹಿಸುವ ಮನೋಭಾವವನ್ನು ಪ್ರೋತ್ಸಾಹಿಸಬೇಕು. ಉದಾಹರಣೆ:ಇದನ್ನು ಮತ್ತೊಮ್ಮೆ ಪ್ರಯತ್ನಿಸೋಣ – ನಾವು ಯಶಸ್ವಿಯಾಗುತ್ತೇವೆ ಎಂದು ನನಗೆ ಖಚಿತವಾಗಿದೆ.
- **ಸಹಾನುಭೂತಿ ಮತ್ತು ತಿಳುವಳಿಕೆ :** ಇತರ ವ್ಯಕ್ತಿಯ ಭಾವನೆಗಳು ಅಥವಾ ಪರಿಸ್ಥಿತಿಯ ಬಗ್ಗೆ ಕಾಳಜಿ ವಹಿಸುತ್ತೀರಿ ಎಂಬುದನ್ನು ತೋರಿಸಬೇಕು. ಚಿಂತನಶೀಲವಾಗಿ ಪ್ರತಿಕ್ರಿಯಿಸಬೇಕು. ಉದಾಹರಣೆ:ಇದು ನಿಮಗೆ ಕಷ್ಟಕರವಾಗಿತ್ತು ಎಂದು ನನಗೆ ಅರ್ಥವಾಗಿದೆ. ನಾನು ನಿಮ್ಮನ್ನು ಬೆಂಬಲಿಸಲು ಇಲ್ಲಿದ್ದೇನೆ.
- **ಸ್ಪಷ್ಟ ಮತ್ತು ಪ್ರಾಮಾಣಿಕ :** ಪ್ರಾಮಾಣಿಕರಾಗಿರಿ, ಸಕಾರಾತ್ಮಕತೆಯನ್ನು ನಟನೆ ಮಾಡಬೇಡಿ. ನೀಡುವ ಸಂದೇಶವು ಕಠಿಣವಾಗಿರದೇ ಸ್ಪಷ್ಟವಾಗಿ ಮತ್ತು ನೈಜವಾಗಿರಬೇಕು. ಉದಾಹರಣೆ:ಇದು ಒಳ್ಳೆಯ ಆರಂಭ. ಕೆಲವು ಬದಲಾವಣೆಗಳೊಂದಿಗೆ, ಇನ್ನೂ ಬಲಶಾಲಿಯಾಗಬಹುದು.

## ಸಕಾರಾತ್ಮಕ ಪ್ರತಿಕ್ರಿಯೆಯ ಪ್ರಮುಖ ಪ್ರಯೋಜನಗಳು :

ಸಕಾರಾತ್ಮಕ ಪ್ರತಿಕ್ರಿಯೆಯು ಜನರನ್ನು ಉನ್ನತೀಕರಿಸುತ್ತದೆ, ಸಂಬಂಧಗಳನ್ನು ಸುಧಾರಿಸುತ್ತದೆ ಮತ್ತು ಹೆಚ್ಚು ಪರಿಣಾಮಕಾರಿ, ಸಾಮರಸ್ಯ ಮತ್ತು ಪ್ರೇರಿತ ವಾತಾವರಣಕ್ಕೆ ಕೊಡುಗೆ ನೀಡುತ್ತದೆ. ಸಕಾರಾತ್ಮಕ ಪ್ರತಿಕ್ರಿಯೆ ಪ್ರಮುಖ ಪ್ರಯೋಜನಗಳು ಇಲ್ಲಿವೆ:

1. ಸಂಬಂಧಗಳನ್ನು ಸುಧಾರಿಸುತ್ತದೆ
2. ಆತ್ಮವಿಶ್ವಾಸ ಮತ್ತು ನೈತಿಕತೆಯನ್ನು ಹೆಚ್ಚಿಸುತ್ತದೆ
3. ಸಹಕಾರ ಮತ್ತು ತಂಡದ ಕೆಲಸವನ್ನು ಉತ್ತೇಜಿಸುತ್ತದೆ
4. ಸಂವಹನವನ್ನು ಹೆಚ್ಚಿಸುತ್ತದೆ
5. ಒತ್ತಡ ಮತ್ತು ಉದ್ವೇಗವನ್ನು ಕಡಿಮೆ ಮಾಡುತ್ತದೆ
6. ಬೆಳವಣಿಗೆ ಮತ್ತು ಸುಧಾರಣೆಯನ್ನು ಪ್ರೋತ್ಸಾಹಿಸುತ್ತದೆ
7. ಸಕಾರಾತ್ಮಕ/ ಧನಾತ್ಮಕ ವಾತಾವರಣವನ್ನು ಸೃಷ್ಟಿಸುತ್ತದೆ
8. ಸಮಸ್ಯೆ ಪರಿಹಾರವನ್ನು ಸುಧಾರಿಸುತ್ತದೆ

## ಸಹಕಾರಿ ಸಂಸ್ಥೆಗಳಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಯ ಪ್ರಾಮುಖ್ಯತೆ ಮತ್ತು ಅವಶ್ಯಕತೆ :

ಸಹಕಾರಿ ಸಂಸ್ಥೆಗಳಲ್ಲಿ, ಸಕಾರಾತ್ಮಕ ಪ್ರತಿಕ್ರಿಯೆಯು ಅತ್ಯವಶ್ಯಕ ಅಂಶವಾಗಿದೆ. ಇದು ಆಡಳಿತವನ್ನು ಬಲಪಡಿಸುತ್ತದೆ, ಪ್ರಾಮಾಣಿಕತೆಯನ್ನು ವೃದ್ಧಿಸುತ್ತದೆ, ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ, ಏಕತೆಯನ್ನು ಬೆಳೆಸುತ್ತದೆ ಮತ್ತು ದೀರ್ಘಕಾಲೀನ ಯಶಸ್ಸನ್ನು ಖಚಿತಪಡಿಸುತ್ತದೆ. ಸಕಾರಾತ್ಮಕತೆಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಮೂಲಕ ಸಹಕಾರಿ ಸಂಸ್ಥೆಗಳು ಸಹಕಾರ ಮತ್ತು ಪರಸ್ಪರ ಸಹಾಯದ ಮನೋಭಾವವನ್ನು ನಿಜವಾಗಿಯೂ ಪ್ರತಿಬಿಂಬಿಸಬಹುದು. ಸಹಕಾರಿ ಸಂಸ್ಥೆಗಳಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಯ ಪ್ರಾಮುಖ್ಯತೆ ಮತ್ತು ಅವಶ್ಯಕತೆಯು ಈ ಕೆಳಗಿನಂತಿದೆ:

**ಪ್ರಾಮುಖ್ಯತೆ :**

- **ಪರಸ್ಪರ ಗೌರವ ಮತ್ತು ವಿಶ್ವಾಸವನ್ನು ಬೆಳೆಸುತ್ತದೆ :** ಸಹಕಾರಿ ಸಂಸ್ಥೆಗಳು ಪ್ರಜಾಸತ್ತಾತ್ಮಕ ಭಾಗವಹಿಸುವಿಕೆ ಮತ್ತು ಸಾಮೂಹಿಕ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ರಚಿಸಲ್ಪಟ್ಟಿವೆ. ಸಕಾರಾತ್ಮಕ ಪ್ರತಿಕ್ರಿಯೆಗಳು ಗೌರವಯುತ ಸಂವಹನಗಳನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಸದಸ್ಯರು, ಆಡಳಿತ ಮತ್ತು ಸಿಬ್ಬಂದಿಗಳಲ್ಲಿ ನಂಬಿಕೆಯ ಸಂಸ್ಕೃತಿಯನ್ನು ಉತ್ತೇಜಿಸುತ್ತದೆ.
- **ಸದಸ್ಯರ ಭಾಗವಹಿಸುವಿಕೆಯನ್ನು ಬಲಪಡಿಸುತ್ತದೆ :** ಸದಸ್ಯರು ಕೇಳಲ್ಪಟ್ಟರು ಮತ್ತು ಪ್ರೋತ್ಸಾಹಿಸಲ್ಪಟ್ಟರು ಎಂದು ಭಾವಿಸಿದಾಗ, ಅವರು ಹೆಚ್ಚು ಸಕ್ರಿಯರಾಗುತ್ತಾರೆ ಮತ್ತು ಸಂಸ್ಥೆಯ ಗುರಿಗಳಿಗೆ ಬದ್ಧರಾಗುತ್ತಾರೆ.
- **ಆರೋಗ್ಯಕರ ಸಾಂಸ್ಥಿಕ ಸಂಸ್ಕೃತಿಯನ್ನು ನಿರ್ಮಿಸುತ್ತದೆ :** ಸಕಾರಾತ್ಮಕತೆಯು ರಚನಾತ್ಮಕ ಸಂವಹನ, ತಂಡದ ಕೆಲಸ ಮತ್ತು ಹಂಚಿಕೆಯ ಉದ್ದೇಶದ ಪ್ರಜ್ಞೆಗೆ ಧ್ವನಿಯನ್ನು ಹೊಂದಿಸುತ್ತದೆ.

**ಅವಶ್ಯಕತೆ :**

- **ಪರಿಣಾಮಕಾರಿ ಸಂಘರ್ಷ ಪರಿಹಾರಕ್ಕಾಗಿ :** ಸಂಸ್ಥೆ ಎಂದ ಮೇಲೆ ಭಿನ್ನಾಭಿಪ್ರಾಯಗಳು ಸಹಜ. ಸಂಘರ್ಷಗಳನ್ನು ಶಾಂತಿಯುತವಾಗಿ ಪರಿಹರಿಸಲು ಮತ್ತು ಏಕತೆಯನ್ನು ಕಾಪಾಡಿಕೊಳ್ಳಲು ಸಕಾರಾತ್ಮಕ ಪ್ರತಿಕ್ರಿಯೆಗಳು ಅತ್ಯಗತ್ಯ.
- **ಪ್ರಜಾಪ್ರಭುತ್ವ ಮೌಲ್ಯಗಳನ್ನು ಉಳಿಸಿಕೊಳ್ಳಲು :** ಸಹಕಾರಿ ತತ್ವಗಳು ಭಾಗವಹಿಸುವಿಕೆ, ಸಂವಾದ ಮತ್ತು ಒಮ್ಮತವನ್ನು ಅವಲಂಬಿಸಿವೆ. ಸಕಾರಾತ್ಮಕತೆಯು ಸಮಗ್ರ ಮತ್ತು ಗೌರವಯುತವಾಗಿರುವುದನ್ನು ಖಚಿತಪಡಿಸುತ್ತದೆ.
- **ಸದಸ್ಯರನ್ನು ಪ್ರೇರೇಪಿಸಲು ಮತ್ತು ಉಳಿಸಿಕೊಳ್ಳಲು :** ಸಕಾರಾತ್ಮಕ ವಾತಾವರಣವು ನಿಷ್ಠೆಯನ್ನು ಪ್ರೋತ್ಸಾಹಿಸುತ್ತದೆ, ಸದಸ್ಯತ್ವವನ್ನು ತೊರೆಯುವ ಪ್ರಮಾಣಗಳನ್ನು ಕಡಿಮೆ ಮಾಡುತ್ತದೆ. ಅನುಭವಿ, ಕೌಶಲ್ಯಪೂರ್ಣ ಸದಸ್ಯರು ಮತ್ತು ಉದ್ಯೋಗಿಗಳನ್ನು ಉಳಿಸಿಕೊಳ್ಳಲು ಸಹಾಯ ಮಾಡುತ್ತದೆ.
- **ಸವಾಲುಗಳನ್ನು ಎದುರಿಸಲು :** ಸಹಕಾರಿ ಸಂಸ್ಥೆಗಳು ಹೆಚ್ಚಾಗಿ ಆರ್ಥಿಕ ಅಥವಾ ಕಾರ್ಯಾಚರಣೆಯ ತೊಂದರೆಗಳನ್ನು ಎದು-ರಿಸುತ್ತವೆ. ಸಕಾರಾತ್ಮಕ ಮನಸ್ಥಿತಿ ಮತ್ತು ಪ್ರತಿಕ್ರಿಯೆಯು ಸಂಸ್ಥೆಯು ಸ್ಥಿತಿಸ್ಥಾಪಕತ್ವದೊಂದಿಗೆ ಸಮಸ್ಯೆಗಳನ್ನು ಎದುರಿಸಲು ಸಹಾಯ ಮಾಡುತ್ತದೆ.
- **ಸುಧಾರಿತ ಸಂವಹನ ಮತ್ತು ತಿಳುವಳಿಕೆ :** ಸುಧಾರಿತ ಸಂವಹನ ಮತ್ತು ತಿಳುವಳಿಕೆಯು ನಿರ್ವಹಣೆ, ಮಂಡಳಿ ಮತ್ತು ಸದಸ್ಯರ ನಡುವಿನ ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ ಮತ್ತು ತಪ್ಪುಗ್ರಹಿಕೆಯನ್ನು ಕಡಿಮೆ ಮಾಡುತ್ತದೆ.
- **ಉತ್ತಮ ತಂಡದ ಕೆಲಸ ಮತ್ತು ಸಮನ್ವಯ :** ಇಲಾಖೆಗಳಾದ್ಯಂತ ಮತ್ತು ಪಾಲುದಾರರೊಂದಿಗೆ ಸಹಯೋಗವನ್ನು ಪ್ರೋತ್ಸಾಹಿಸುತ್ತದೆ, ಇದು ಉತ್ತಮ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಯೋಜನೆಯ ಅನುಷ್ಠಾನಕ್ಕೆ ಕಾರಣವಾಗುತ್ತದೆ.
- **ಹೆಚ್ಚಿನ ಉತ್ಪಾದಕತೆ ಮತ್ತು ನಾವೀನ್ಯತೆ :** ಸಕಾರಾತ್ಮಕ ವಾತಾವರಣವು ನೈತಿಕತೆ ಮತ್ತು ಸೃಜನಶೀಲತೆಯನ್ನು ಹೆಚ್ಚಿಸುತ್ತದೆ, ಹೆಚ್ಚು ಪರಿಣಾಮಕಾರಿ ಮತ್ತು ನವೀನ ಅಭ್ಯಾಸಗಳಿಗೆ ಕಾರಣವಾಗುತ್ತದೆ. ಈ ಮೂಲಕ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ.
- **ಬಲವಾದ ಸದಸ್ಯ ನಿಷ್ಠೆ ಮತ್ತು ತೃಪ್ತಿ :** ಸಕಾರಾತ್ಮಕ ಪ್ರತಿಕ್ರಿಯೆಯ ಮೂಲಕ ಸದಸ್ಯರು ಮೌಲ್ಯಯುತ ಮತ್ತು ಗೌರವಾನ್ವಿತರಾಗುತ್ತಾರೆ, ಸಹಕಾರಿಯ ನಾಯಕತ್ವ ಮತ್ತು ದೃಷ್ಟಿಕೋನದಲ್ಲಿ ಅವರ ನಂಬಿಕೆಯನ್ನು ಹೆಚ್ಚಿಸುತ್ತದೆ.
- **ಸಕಾರಾತ್ಮಕ ಸಾರ್ವಜನಿಕ ಚಿತ್ರಣ :** ರಚನಾತ್ಮಕ ಮತ್ತು ಗೌರವಾನ್ವಿತ ಸಂಸ್ಕೃತಿಗೆ ಹೆಸರುವಾಸಿಯಾದ ಸಹಕಾರಿ ಸಂಸ್ಥೆಗಳು ಹೆಚ್ಚಿನ ಸದಸ್ಯರು, ಬೆಂಬಲ ಮತ್ತು ಪಾಲುದಾರಿಕೆಗಳನ್ನು ಆಕರ್ಷಿಸುತ್ತದೆ.

**ಉಪಸಂಹಾರ :**

ಸಕಾರಾತ್ಮಕ ಪ್ರತಿಕ್ರಿಯೆಯು ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಸಾಮರಸ್ಯ, ಬೆಳವಣಿಗೆ ಮತ್ತು ಉತ್ಪಾದಕತೆಯನ್ನು ಪೋಷಿಸಲು ಪ್ರಬಲವಾದ ಆದರೆ ಹೆಚ್ಚಾಗಿ ಕಡೆಗಣಿಸಲ್ಪಡುವ ಸಾಧನವಾಗಿದೆ. ನಮ್ಮ ಪ್ರತಿಕ್ರಿಯೆಗಳಲ್ಲಿ ಪ್ರಜ್ಞಾಪೂರ್ವಕವಾಗಿ ಸಕಾರಾತ್ಮಕತೆಯನ್ನು ಆರಿಸಿಕೊಳ್ಳುವ ಮೂಲಕ, ನಾವು ಇತರರನ್ನು ಉನ್ನತೀಕರಿಸುವುದಲ್ಲದೇ ನಮ್ಮ ಸ್ವಂತ ವೈಯಕ್ತಿಕ ಮತ್ತು ವೃತ್ತಿಪರ ಪ್ರಯಾಣಗಳನ್ನು ಸಹ ಉತ್ಕೃಷ್ಟಗೊಳಿಸುತ್ತದೆ.

ಸಹಕಾರಿ ಸಂಸ್ಥೆಗಳಲ್ಲಿ ಪರಸ್ಪರ ಗೌರವವನ್ನು ಬೆಳೆಸುವ, ಸಂವಹನವನ್ನು ಹೆಚ್ಚಿಸುವ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಸಹಕಾರಿ ಸಂಸ್ಥೆಗಳ ಅಡಿಪಾಯವನ್ನು ಬಲಪಡಿಸುವಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸಂಘರ್ಷಗಳನ್ನು ಪರಿಹರಿಸಲು, ಪ್ರಜಾಪ್ರಭುತ್ವ ಮೌಲ್ಯಗಳನ್ನು ಉಳಿಸಿಕೊಳ್ಳಲು ಮತ್ತು ಆರೋಗ್ಯಕರ ಸಾಂಸ್ಥಿಕ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಇದು ಅತ್ಯಗತ್ಯವಾಗಿದೆ. ಆಶಾವಾದ, ಸಹಾನುಭೂತಿ ಮತ್ತು ರಚನಾತ್ಮಕ ಸಂವಾದವನ್ನು ಉತ್ತೇಜಿಸುವ ಮೂಲಕ, ಸಕಾರಾತ್ಮಕ ಪ್ರತಿಕ್ರಿಯೆಗಳು ವಿಶ್ವಾಸವನ್ನು ಬೆಳೆಸಲು, ತಂಡದ ಕೆಲಸವನ್ನು ಸುಧಾರಿಸಲು ಮತ್ತು ಸದಸ್ಯರು ಹಾಗೂ ಸಿಬ್ಬಂದಿಗಳಲ್ಲಿ ನೈತಿಕತೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಅಂತಿಮವಾಗಿ, ಸಕಾರಾತ್ಮಕ ವಾತಾವರಣವನ್ನು ಬೆಳೆಸುವುದರ ಮೂಲಕ ಸಹಕಾರಿ ಸಂಸ್ಥೆಗಳ ಆಂತರಿಕ ಕಾರ್ಯನಿರ್ವಹಣೆಯನ್ನು ಹೆಚ್ಚಿಸುವುದಲ್ಲದೇ, ಅವುಗಳ ಬೆಳವಣಿಗೆ, ಸ್ಥಿರತೆ ಮತ್ತು ದೀರ್ಘಕಾಲೀನ ಯಶಸ್ಸಿಗೆ ಕೊಡುಗೆ ನೀಡುತ್ತದೆ.

# ಸ್ವಾಯತ್ತ, ಸ್ವಾತಂತ್ರ ಮತ್ತು ಸ್ವಯಂ ನಿಯಂತ್ರಿತ ಸಹಕಾರ ಸಂಸ್ಥೆಗಳು

– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997ನ್ನು ರೂಪಿಸಿದಾಗ ಅಳವಡಿಸಿಕೊಂಡ ಧ್ಯೇಯೋದ್ದೇಶವೆಂದರೆ

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು......."

ಈ ಮೇಲ್ಕಂಡ ಹೇಳಿಕೆ ಸೌಹಾರ್ದ ಸಹಕಾರಿಗೆ ಸಂಬಂಧಪಟ್ಟದ್ದು, ಈ ಲೇಖನದ ಉದ್ದೇಶ ಅದಲ್ಲ ವಿಷಯದ ಬಗ್ಗೆ ಒಂದು ವಿಶಿಷ್ಟ ಆಲೋಚನೆ ಇತ್ತೀಚೆಗೆ, ಭಾರತದ ಶ್ರೇಷ್ಠ ನ್ಯಾಯಾಲಯದ ಬಗ್ಗೆ ಆರ್ನಾಟ್‌ಗೊ ಸ್ವಾಮಿ ಅವರು ವಿಮರ್ಷೆ ಮಾಡುತ್ತಾ, ನ್ಯಾಯಾದೀಶರನ್ನು ನ್ಯಾಯಾದೀಶರೇ ನೇಮಕ ಮಾಡುವುದು, ನ್ಯಾಯಾಲಯದಲ್ಲಿ ಅಶಿಸ್ತಿನ ಬಗ್ಗೆ ನ್ಯಾಯಾದೀಶರೇ ವಿಚಾರಣೆ/ತನಿಖೆ ಮಾಡುವುದು, ಸಂವಿಧಾನದಲ್ಲಿ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಸ್ವಾಯತ್ತ ಸ್ವಯಂ ನಿಯಂತ್ರಿತ ಸಂಸ್ಥೆಗಳೆಂದು ಸಂವಿಧಾನ ಸ್ಪಷ್ಟವಾಗಿ ಕೋರಿದ್ದರೂ, ಶಾಸಕಾಂಗ ಮತ್ತು ಕಾರ್ಯಾಂಗದ ಕೆಲಸ ನಿರ್ವಹಣೆಯಲ್ಲಿ ನ್ಯಾಯಾಂಗವೇ ಶ್ರೇಷ್ಠವೆಂದು ಕಾನೂನು ರೂಪಿಸಿದ ಶಾಸಕಾಂಗದ ಮೇಲೆ, ಅಸಂವಿಧಾನಕನೆಂದು ತೀರ್ಪು ಕೊಡಲು ಮುಂದಾಗುವ ನ್ಯಾಯಾಂಗದ ನೀತಿ ಬಗ್ಗೆ ಚರ್ಚಿಸುತ್ತಾ, ವಿಶ್ವದಲ್ಲಿ ಯಾವುದೇ ರಾಷ್ಟ್ರದಲ್ಲಿ ನ್ಯಾಯಾದೀಶರನ್ನು ನ್ಯಾಯಾದೀಶರೇ ನೇಮಕ ಮಾಡುವ ವ್ಯವಸ್ಥೆ ಇಲ್ಲದೇ ಇದ್ದರೂ. ಭಾರತಕ್ಕೆ ಮಾತ್ರ ನ್ಯಾಯವೇ ಶ್ರೇಷ್ಠ ಎಂದು ತೀರ್ಮಾನಿಸುತ್ತಿರುವುದನ್ನು ಅವಲೋಕಿಸಿ, ಇತ್ತೀಚೆಗೆ ಒಂದು ಉಚ್ಚನ್ಯಾಯಾಲಯದ ನ್ಯಾಯಾದೀಶರ ಮನೆಯಲ್ಲಿ ಗೋಣಿಚೀಲಗಳಲ್ಲಿ ತುಂಬಿದ ನೋಟುಗಳನು ಸುಟ್ಟಿಹಾಕಿದ್ದರ ಬಗ್ಗೆ ಉಲ್ಲೇಖಿಸಿ, ಮೂವರು ನ್ಯಾಯಾದೀಶರ ಸಮಿತಿ ರಚಿಸಿ, ವರದಿ ಪಡೆದು, ದೃಡೀಕರಿಸಿಕೊಂಡು. ಸಾಬೀತಾಗಿದೆ ಎಂದು ತಿಳಿದ ನಂತರವೂ ಶಿಸ್ತು ಕ್ರಮ ಜರುಗಿಸುವ ಬದಲು, ಕೇಂದ್ರ ಸರ್ಕಾರಕ್ಕೆ ಕ್ರಮ ಜರುಗಿಸುವಂತೆ ಪತ್ರ ಬರೆದು ಕೈತೊಳೆದುಕೊಂಡು ನ್ಯಾಯಾಂಗ ವ್ಯವಸ್ಥೆ ಬಗ್ಗೆ ಅವಲೋಕಿಸುತ್ತಾ ವ್ಯವಸ್ಥೆಯಲ್ಲಿ ಮಾರ್ಪಾಡು ಅವಶ್ಯಕ ಎಂದು ಪ್ರತಿ ಪಾದಿಸಿದ್ದಾರೆ.

ಇದಕ್ಕೆ ಪೂರಕವಾಗಿ ದಿನಾಂಕ 19.08.2025ರ ಟೈಂಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪುಟ 7ರಲ್ಲಿ ಶ್ರೀ ಡಿ.ಗೊವರ್ಧನ್ ಅವರು ಒಂದು ಕೇಂದ್ರ ಪುಟದ ಲೇಖನದಲ್ಲಿ ಈ ಕೆಳಕಂಡಂತೆ ವಿಮರ್ಷಿಸುತ್ತಾರೆ. ಶ್ರೇಷ್ಠ ನ್ಯಾಯಾಲಯ ಈ ಹಿಂದೆಯೇ, ಹಿರಿಯ ಸರ್ಕಾರದ ಅಧಿಕಾರಿಗಳು ನ್ಯಾಯಾಲಯಕ್ಕೆ ಕರೆಸಿ, ನ್ಯಾಯಾಲಯ ನಿಂದನೆಗೆ ಗುರಿ ಪಡಿಸಬಾರದೆಂಬ, ಬೆದರಿಕೆ ಹಾಕಿ ಕಾರ್ಯಾಂಗವನ್ನು ಮುಜುಗರಕ್ಕೀಡು ಮಾಡಬಾರದೆಂದು ಮಾರ್ಗದರ್ಶನ ಸೂತ್ರಗಳನ್ನು ರೂಪಿಸಿದ್ದರೂ, ಅದನ್ನು ಲೆಕ್ಕಿಸದೇ ಪದೆ ಪದೆ ಹಿರಿಯ ಅಧಿಕಾರಿಗಳು ನ್ಯಾಯಾಲಯಕ್ಕೆ ಕರೆಸಿ, ಹೇಳಿಕೆ ಪಡೆಯುವ ಪ್ರವೃತ್ತಿಯನ್ನು ಶ್ರೇಷ್ಠ ನ್ಯಾಯಾಲಯ ಖಂಡಿಸಿದೆ ಎಂದು ಉಲ್ಲೇಖಿಸುತ್ತಾ, ಕೆಲವು ನ್ಯಾಯಾದೀಶರು ಸಂವಿಧಾನದ ಜವಾಬ್ದಾರಿಗಿಂತ ಹೆಚ್ಚು ಅಧಿಕಾರ ಇದೆ ಎಂದು ತಿಳಿದಿರುವುದು ಸರಿಯೇ? ಎಂದು ಉಲ್ಲೇಖಿಸುತ್ತಾರೆ.

**ಶ್ರೇಷ್ಠ ನ್ಯಾಯಾಲಯ ತಮ್ಮ ತೀರ್ಪಿನ ಮುಖಾಂತರ ನೀಡಿದ ಮಾರ್ಗದರ್ಶನ ಸೂತ್ರ ಈ ಕೆಳಕಂಡಂತಿದೆ.**

1) ಹಿರಿಯ ಸರ್ಕಾರಿ ಅಧಿಕಾರಿಗಳನ್ನು ನ್ಯಾಯಾಲಯಕ್ಕೆ ಹಾಜರಾಗುವಂತೆ ಸಾಮಾನ್ಯವಾಗಿ ಕರೆಸುವುದು ಮತ್ತು ಇಲ್ಲವಾದರೆ ನ್ಯಾಯಾಲಯ ನಿಂದನೆ ಎಂದು ಹೇಳುವುದು.

2) ಸಾಮಾನ್ಯವಾಗಿ, ನ್ಯಾಯಾಲಯಗಳು, ನ್ಯಾಯವಾದಿಗಳ ಮುಖಾಂತರವೇ ವ್ಯವಹರಿಸಬೇಕು. (ಅಧಿಕಾರಿಗಳ ಪರವಾಗಿ ಹಾಜರಾಗುವ ನ್ಯಾಯಾವಾದಿಗಳು)

3) ಹಿರಿಯ ಅಧಿಕಾರಿಗಳನ್ನು ಹಾಜರಾಗುವಂತೆ ಆದೇಶಿಸುವುದು ಕಡೆಯ ಅಸ್ತ್ರವಾಗಿರಬೇಕು ಮತ್ತು ಅದೂ ಸಹ ಸತತವಾಗಿ, ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿದ್ದರೆ ಅಥವಾ ಉದೇಶ ಪೂರ್ವಕವಾಗಿ ನ್ಯಾಯಾಲಯದ ಆದೇಶ ಪಾಲಿಸದಿದ್ದರೆ ಅಥವಾ ಅಂತಹ ಅಧಿಕಾರಿಯ ಹೇಳಿಕೆ ಅವಶ್ಯಕವೆಂದು ತೀರ್ಮಾನಿಸಿದಾರೆ.

4) ಭೌತಿಕ ಹಾಜರಾತಿಗೆ ಬದಲಾಗಿ ವಿಡಿಯೋ ಕಾನಫರೆನ್ಸ್ ಮೂಲಕ, ಸಮಯ ನಿಗದಿ ಪಡಿಸಿ ಹಾಜರಾಗುವಂತೆ ಸೂಚಿಸುವುದು.

5) ಅಧಿಕಾರಿಗಳನ್ನು ನ್ಯಾಯಾಲಯದಲ್ಲಿ ಸಮಯ ನಿಗದಿ ಪಡಿಸಿದೆ ಕಾಯಿಸುವುದು ಮತ್ತು ಅಧಿಕಾರಿಗಳನ್ನು ಅವಮಾನಿಸುವುದು.

6) ಭೌತಿಕ ಹಾಜರಾತಿ ಅತಿ ವಿರಳವಾಗಿರಬೇಕೆಂದು ಸೂಚಿಸಿದೆ.

7) ಎಲ್ಲಾ ನ್ಯಾಯಾದೀಶರು ಈ ಮೇಲ್ಕಂಡ ನೀತಿಯನ್ನು ಅಳವಡಿಸಿಕೊಳ್ಳಲು ಶ್ರೇಷ್ಠ ನ್ಯಾಯಾಲಯ ನಿರ್ದೇಶಿಸಿದೆ.

ಆದರೆ ಈ ಮೇಲ್ಕಂಡ ನೀತಿಯನ್ನು ಪಾಲಿಸುವುದು ಎಂದು

ಸೂಚಿಸಿದ್ದರೂ, ಕೆಲವು ನ್ಯಾಯಾದೀಶರು ಇದಕ್ಕೆ ವಿರುದ್ದವಾಗಿ, ಹಿರಿಯ ಅಧಿಕಾರಿಗಳನ್ನು ನ್ಯಾಯಾಲಯಕ್ಕೆ ಕರೆಸಿ ಅವಮಾನಿಸುವುದು ಸರಿಯಲ್ಲ. ಏಕೆಂದರೆ, ಕಾರ್ಯಾಂಗದ ನ್ಯಾಯಾಗದಂತೆ ಸಂವಿಧಾನದ ಒಂದು ಸ್ವಾಯತ್ತ ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ವ್ಯವಸ್ಥೆ

ಆದರೆ ಇದು ಕಾರ್ಯರೂಪಕ್ಕೆ ಬರುವುದಿಲ್ಲ. ಅದಕ್ಕೆ ಕಾರಣ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯದ ನ್ಯಾಯಾದೀಶರು ಸಮಾನ ಅಧಿಕಾರ ಹೊಂದಿದ್ದಾರೆ. ಇದರ ಜೊತೆಗೆ ಇತ್ತೀಚೆಗೆ ಶ್ರೇಷ್ಠ ನ್ಯಾಯಾಲಯದ ದ್ವಿಸದಸ್ಯ ಪೀಠ ತಮಿಳ್‌ನಾಡು ಪ್ರಕರಣದಲ್ಲಿ ಸಂವಿಧಾನದ ಅವಕಾಶವನ್ನು ಉಪಯೋಗಿಸಿ, ರಾಜ್ಯಪಾಲರು ಮತ್ತು ರಾಷ್ಟ್ರಾಧ್ಯಕ್ಷರು, ಶಾಸಕಾಂಗ ಒಪ್ಪಿಗೆ ನೀಡಿದ ಶಾಸನಗಳಿಗೆ ರಾಜ್ಯಪಾಲರು ಮತ್ತು ರಾಷ್ಟ್ರಾಧ್ಯಕ್ಷರು ಮೂರು ತಿಂಗಳಲ್ಲಿ ಒಪ್ಪಿಗೆ ನೀಡದಿದ್ದರೆ, ಅದನ್ನು ಒಪ್ಪಿಗೆ ನೀಡಿದಂತೆ ಭಾವಿಸತಕ್ಕದ್ದು ಎಂದು ತೀರ್ಮಾನಿಸಿತು. ಇದನ್ನು ಈಗ ಐವರು ನ್ಯಾಯಾದೀಶರಿರುವ ಫೀಠ ಪರಿಶೀಲನೆ ಮಾಡುತ್ತಿದೆ. ಇದರಲ್ಲಿ ಪರಿಗಣಿಸಬೇಕಾದ ಅಂಶವೆಂದರೆ, ಸಂವಿಧಾನವನ್ನು ಅರ್ಥೈಸುವ ಬದಲಾಗಿ, ಹೊಸ ಶರತ್ತುಗಳು ನ್ಯಾಯಾಂಗವು, ಶಾಸನಾಂಗದ ಮೇಲೆ ಪ್ರಯೋಗ ಮಾಡಿ ಆಡಳಿತ ಯಂತ್ರವನ್ನು ತನ್ನ ನಿಯಂತ್ರಣಕ್ಕೆ ಪಡೆಯುತ್ತಿರುವುದನ್ನು ಕಾಣಬಹುದು. ಇದನ್ನೆ ಈಗಿನ ಐವರು ನ್ಯಾಯಾದೀಶರ ಪೀಠದ ಮುಂದೆ ರಾಷ್ಟ್ರದ ನ್ಯಾಯಾವಾದಿಗಳು ಈ ಪೀಠದ ಮುಂದೆ ಮಂಡಿಸುತ್ತಿದ್ದಾರೆ.

ಇದರ ಜೊತೆಗೆ ಗೋವರ್ದನ್ ಅವರ ಮತ್ತೊಂದು ವಿಮರ್ಷೆ ಎಂದರೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾಲಯಗಳನ್ನು 10, 15, 20, 25, 30 ವರ್ಷಗಳಿಂದ ಬಾಕಿ ಇರುವ ಪ್ರಕರಣಗಳು ವಿಲೇ ಆಗದೇ ಹಾಗೆ ಇರುವುದನ್ನು ಬೇರಾರೂ ಪ್ರಶ್ನಿಸಬಾರದೆಂಬ, ನೀತಿ ನ್ಯಾಯಾಲಯಗಳೂ ಅನುಸರಿಸುವುದು ಸರಿಯೇ ಎಂಬ ಪ್ರಶ್ನೆ? ಕಾರ್ಯಾಂಗ ಮತ್ತು ಶಾಸಕಾಂಗ ಪ್ರಶ್ನಿಸುತಿದ ನ್ಯಾಯಾಂಗ, ತನ್ನ ಸಂವಿಧಾನಿತ ಜವಾಬ್ದಾ–ರಿಗಳನ್ನು ನಿರ್ವಹಿಸಲು/ ನಿಯಂತ್ರಿಸಲು ಸ್ವಯಂ ಯೋಜನೆಯನ್ನು ಹಾಕಿ ಕೊಳ್ಳುವುದಿಲ್ಲವೇಕೆ? ಕೆಳ ನ್ಯಾಯಾಲಯಗಳು ನ್ಯಾಯಾದೀಶರು, ಅವರ ಕರ್ತವ್ಯವನ್ನ ಸಮರ್ಪಕವಾಗಿ ನಿರ್ವಹಿಸದಿದ್ದರೆ ಉಚ್ಚ ಮತ್ತು ಶ್ರೇಷ್ಠ ನ್ಯಾಯಾದೀಶರು, ಏಕೆ ಅಶಿಸ್ತು ಎಂದು ಪರಿಗಣಿಸುವುದಿಲ್ಲ ಮತ್ತು ಶಿಸ್ತು ಕ್ರಮ ಜರುಗಿಸುವುದಿಲ್ಲ. ಉಚ್ಚ ಮತ್ತು ಶ್ರೇಷ್ಠ ನ್ಯಾಯಾದೀಶರನ್ನು ದೇವ ಮಾನವರೆಂದು ಅವರೇ ತೀರ್ಮಾನಿಸುವುದು ಸರಿಯೇ?

ಪ್ರತಿಯೊಂದು ನೋಂದಾಯಿತ ಸಂಸ್ಥೆಯೂ ತನ್ನ ಆಸ್ತಿತ್ವವನ್ನು ಉಳಿಸಿಕೊಳ್ಳಲು, ಸಂಸ್ಥೆ ಒಂದು ಸ್ವಾಯತ್ತ ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಂಸ್ಥೆ ಎಂದು ತಿಳಿದು ಕೊಳ್ಳಲು ಮತ್ತು ಕಾರ್ಯನಿರ್ವಹಿಸಲು ಆಗದಿದ್ದರೆ, ಅದನ್ನು ನಿಯಂತ್ರಿಸುವ ಅಧಿಕಾರ ಸಂಯುಕ್ತ ಸಹಕಾರಿ, ನಿಬಂಧಕರು ಮತ್ತು ಸರ್ಕಾರ ಅಗಿಂದಾಗ್ಗೆ ವಿಮರ್ಷಿಸದಿದ್ದರೆ, ಈ ಉದಾ–ರೀಕರಣ ನೀತಿ ರೂಪಿಸಿದ ಉದ್ದೇಶಕ್ಕೆ ಚ್ಯುತಿ ಬರುತ್ತದೆ ಎಂಬುದನ್ನು ಸಹಕಾರಿಗಳು ಏಕೆ ಅರ್ಥೈಸಿಕೊಳ್ಳುತ್ತಿಲ್ಲ. ಭಾರತ ದೇಶ ಒಂದು ಪುರಾತನ ಚರಿತ್ರೆ ಇರುವ ದೇಶ. ನ್ಯಾಯ, ಧರ್ಮ, ಸಮಾನತೆಯಲ್ಲಿ ಎತ್ತಿ ಹಿಡಿಯುತ್ತಿರುವ ದೇಶ, ಇದರ ಅಂಗ ಸಂಸ್ಥೆಗಳಾದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ ಏಕೆ ಈ ಬಗ್ಗೆ ತಮ್ಮ ಶಕ್ತಿಯನ್ನು ತಿಳಿದು ಸ್ವಯಂ ನಿಯಂತ್ರಿಸಿಕೊಳ್ಳುತ್ತಿಲ್ಲ. ಒಬ್ಬರು ಮತ್ತೊಂಬ್ಬರ ಅಧಿಕಾರ ವ್ಯಾಪ್ತಿಯನ್ನು ಮೀರಿ, ನಿಯಂತ್ರಿಸುವ ಪ್ರಯತ್ನ ಏಕೆ ಮಾಡುತ್ತಿವೆ. ಇತ್ತೀಚಿನ ದಿನಗಳಲ್ಲಿ ಕಾರ್ಯಾಂಗ ತನ್ನ ಅಧಿಕಾರ ಮೀರಿ ಜನತೆಯ ಮೇಲೆ ಅಧಿಕಾರ ಚಲಾಯಿಸುತ್ತಾ, ಸ್ಥಾನ ದುರುಪಯೋಗ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿದೆ ಹಾಗೂ ಭ್ರಷ್ಟತನಕ್ಕೆ ಒತ್ತು ಕೊಟ್ಟಿ ಹಿಂಬಾಲಕರನ್ನು ಬೆಳೆಸುತ್ತಿದೆ. ಶಾಸಕಾಂಗ ತನ್ನ ಸಂವಿಧಾನಿಕ ಜವಾಬ್ದಾರಿ ನಿರ್ವಹಿಸುವ ಬದಲು, ಶಾಸನ ಸಭೆಗಳು ನಡೆಯದಂತೆ ತಡೆಯೊಡ್ಡಿ, ಸುಲಲಿತ ಕಾರ್ಯನಿರ್ವಹಣೆಗೆ ಅಡ್ಡಿ ಪಡಿಸುವುದೇಕೆ? ನ್ಯಾಯಾಂಗ ಸಂವಿಧಾನದಡಿ ರಚಿಸಿದ ಕಾಯಿದೆಗಳನ್ನು ವಿಮರ್ಷಿಸಿ, ಅಸಂವಿಧಾನಿಕ ಕಾಯಿದೆಯಲ್ಲಿನ ಅವಕಾಶವನ್ನು ತೆಗೆದು ಹಾಕುವುದರ ಜೊತೆ, ಹೊಸ ಅವಕಾಶಗಳನ್ನು ಆದೇಶದ ಮೂಲಕ ನೀಡಿ ಶಾಸಕಾಂಗದ ಕೆಲಸವನ್ನು ಮಾಡುವುದು ಸೂಕ್ತವೇ ಎಂಬುದನ್ನು ಒಂದು ಮಿತಿ ನಿಗದಿ ಪಡಿಸಿಕೊಳ್ಳುತ್ತಿಲ್ಲವೇಕೆ?

**ಸಾಮಾನ್ಯರಲ್ಲಿ ಅಸಮಾನ್ಯರು :**

ಮಹಾರಾಷ್ಟ್ರದ ಒಂದು ಜಾಮೀನು ನಿರಾಕರಣೆ ಬಗ್ಗೆ ಮುಂಬೈ ಉಚ್ಚನ್ಯಾಯಾಲಯ ನಿರಾಕರಿಸಿದಾಗ, ಸುಮಾರು ರಾತ್ರಿ 10 ಘಂಟೆಯಲ್ಲಿ ಅತಿ ಹಿರಿಯ ಹಾಗೂ ಪ್ರಭಾವಿ ವಕೀಲರ ಒತ್ತಡದಿಂದ ಭಾರತದ ಶ್ರೇಷ್ಠ ನ್ಯಾಯಾಲಯ ರಾತ್ರಿ 12 ಘಂಟೆಗೆ ಒಂದು ವಿಶೇಷ ನ್ಯಾಯಾಪೀಠ ರಚಿಸಿ, ಜಾಮೀನು ನೀಡಲಾಯಿತು. ಒಬ್ಬ ವ್ಯಕ್ತಿ ಗೋಸ್ಕರ ಶ್ರೇಷ್ಠ ನ್ಯಾಯಾಲಯವನ್ನು ದುರುಪಯೋಗ ಪಡಿಸಿಕೊಂಡ ವಕೀಲರು ಮತ್ತು ಅವರ ಕಕ್ಷಿದಾರರು ಸಾಮಾನ್ಯರಲ್ಲಿ ಅಸಮಾನ್ಯರಲ್ಲವೇ?

ಈ ಮೇಲ್ಕಂಡ ನೀತಿಗೆ ಪೂರಕವಾಗಿ ನಮ್ಮ ಸೌಹಾರ್ದ ಸಹಕಾರಿ ಸಂಸ್ಥೆಗಳಲ್ಲಿಯೂ ಇಂತಹ ಪ್ರಕರಣಗಳು ನಡೆಯಲು ಅವಕಾಶ ಏರ್ಪಟ್ಟರೂ, ಅದನ್ನು ತಡೆಯುವ ಪ್ರಯತ್ನಗಳು ನಡೆದಿಲ್ಲ. ಅಂದರೆ ಸಭಾ ಭತ್ಯೆ ನೀಡುವ ಸಂಬಂಧ ಒಂದು ಸಹಕಾರ ಸಂಸ್ಥೆ ಸಭಾ ಭತ್ಯೆಯನ್ನು ರೂ.30,000/– ಎಂದು ನಿಗದಿ ಪಡಿಸಿದ್ದರೂ, ಅದನ್ನು ಸ್ವೇಚ್ಚತೆ ಎಂದು ಪರಿಗಣಿಸಿ ಕ್ರಮ ಜರುಗಿಸಿದೆ, ಆ ಮೊತ್ತಕ್ಕಿಂತ ಕಡಿಮೇ ಸಭಾ ಭತ್ಯೆ ಪಾವತಿಸಿದ ಸದಸ್ಯ ಸಹಕಾರಿ ಮೇಲೆ ಕ್ರಮ ಜರುಗಿಸಲಾಗಿದೆ. ಇದನ್ನು ಸ್ವಯಂ ನಿಯಂತ್ರಣ ನೀತಿಗೆ ವಿರುದ್ದ ಮತ್ತು ಸ್ವೇಚ್ಚತೆಯನ್ನು ತಡೆಯಲು

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 38
Licensed to post without Prepayment License No. PMG BG/WPP-384/2023-2025.

ಪ್ರಯತ್ನವಾಗಲೇ ಇಲ್ಲ. ಇದರ ಜೊತೆಗೆ ಉತ್ತರ ಕರ್ನಾಟಕದ ಬಹಳಷ್ಟು ಸಂಸ್ಕರಣಾ ಘಟಕಗಳು, ಒಂದು ಸೌಹಾರ್ದ ಸಹಕಾರಿ ನೋಂದಾಯಿಸಿಕೊಂಡು ಸದಸ್ಯರು ಸರಬರಾಜು ಮಾಡಿದ ವಸ್ತುವಿನ ಹಣವನ್ನು, ಈ ಸೌಹಾರ್ದ ಸಹಕಾರಿಯಲ್ಲಿ ಹೂಡಿ, ಅದೇ ಹಣವನ್ನು ಯಾವುದೇ ಭದ್ರತೆ ಇಲ್ಲದೆ, ಅದೇ ಸಂಸ್ಕರಣಾ ಘಟಕಕ್ಕೆ, ಸಾಲ ನೀಡಿರುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ, ಇದನ್ನು ಸ್ವಯಂ ನಿಯಂತ್ರಣ ನೀತಿ ಏಕೆ ನಿರ್ವಹಿಸುತ್ತಿಲ್ಲ. ಏಕೆಂದರೆ ಈ ಎಲ್ಲಾ ಸಂಸ್ಕರಣಾ ಘಟಕದ ಮಾಲೀಕರು ರಾಜಕೀಯ ಪ್ರಭಾವಿಗಳು, ಇದು ಸ್ವಯಂ ನಿಯಂತ್ರಣಕ್ಕೆ ವಿರುದ್ಧ.

ಈ ಮೇಲ್ಕಂಡ ನೀತಿಯಂತೆ ನಮ್ಮ ಸೌಹಾರ್ದ ಸಹಕಾರಿಗಳು, ತಮ್ಮ ಮಿತಿಯನ್ನು ಅರಿತು, ಸದಸ್ಯ ಸಹಕಾರಿಗಳ ಮತ್ತು ಸದಸ್ಯರೇ ರಚಿಸಿಕೊಂಡ ಈ ಸಹಕಾರಿ ಸಂಸ್ಥೆ ಸದಸ್ಯರ ಅವಶ್ಯಕತೆಗಳನ್ನು ಪೂರೈಸಲು ಮತ್ತು ತನ್ನನ್ನು ತಾವೇ ನಿಯಂತ್ರಿಸಿಕೊಳ್ಳಲು ಏಕೆ ಪ್ರಯತ್ನಿಸುತ್ತಿಲ್ಲ. ಸಹಕಾರಿಗಳ ಇತ್ತೀಚಿನ ಪ್ರವೃತ್ತಿ ಎಂದರೆ, ಒಂದು ಸಂಸ್ಥೆಯನ್ನು ನೋಂದಾಯಿಸಿದಾಗ, ಆ ಸಂಸ್ಥೆಯ ಪಾಲು ಬಂಡವಾಳ ಹೂಡಿದ ಸದಸ್ಯರ ಹಿತಾಸಕ್ತಿಯೂ ಪ್ರಮುಖ ಎಂಬುದನ್ನು ಮರೆತು, ಮಂಡಳಿ ರಚನೆಯಲ್ಲಿ ರಾಜಕೀಯ ಮಾಡಿ, ಸ್ವಹಿತಾಸಕ್ತಿ ಬೆಳೆಸಿಕೊಂಡು, ಆ ಸಹಕಾರಿ ನೀಡುವ ಸೌಲತ್ತುಗಳನ್ನು ಕೇಲವೇ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳಲು ಏಕೆ ಪ್ರಯತ್ನಿಸುತ್ತಾರೆ. ಮಂಡಳಿ ಸದಸ್ಯರು ಆ ಸಂಸ್ಥೆಯ ಮಾಲೀಕರೆಂದು ಏಕೆ ಭಾವಿಸುತ್ತಾರೆ ಮತ್ತು ಆ ಸಂಸ್ಥೆಯ ಸಂಪನ್ಮೂಲವನ್ನು ಸ್ವರ್ಥಕ್ಕಾಗಿ ಏಕೆ ಉಳಿಸಿಕೊಳ್ಳುತ್ತಾರೆ? ಇದಕ್ಕೆ ಪ್ರಮುಖ ಕಾರಣ, ಸದಸ್ಯರು ಜಾಗೃತರಾಗಿಲ್ಲದೇ ಇರುವುದೇ. ಒಂದು ಸಹಕಾರಿಯ ಮಾಲೀಕರು ಸದಸ್ಯರೇ ಹೊರತು ಮಂಡಳಿ ಸದಸ್ಯರಲ್ಲ. ಸದಸ್ಯರು ಹೂಡಿದ ಬಂಡವಾಳವೇ ಮಾಲೀಕತ್ವದ ಕುರುಹು. ಅದನ್ನು ಸಮರ್ಪಕವಾಗಿ ನಿರ್ವಹಿಸಲು ನೇಮಿಸಿದ ಮಂಡಳಿ, ಸದಸ್ಯರ ಸೇವೆ ಮಾಡುವುದೇ ಪ್ರಮುಖ ಉದ್ದೇಶ ಅವರು ಮಾಲೀಕರಂತೆ ವರ್ತಿಸುವುದನ್ನು ಸದಸ್ಯರೇ ನಿಯಂತ್ರಿಸಬೇಕು. ಅದನ್ನು ವಾರ್ಷಿಕ ಮಹಾಸಭೆಯಲ್ಲಿ ಚರ್ಚಿಸಿ, ನಿಯಂತ್ರಿಸಬೇಕು.

ಸಹಕಾರಿ ತತ್ವದಡಿ, ಸದಸ್ಯರ ಹೂಡಿಕೆಗೆ, ಸೀಮಿತ ಲಾಭ ಎಂಬ ಸಹಕಾರ ತತ್ವಕ್ಕೆ ವಿರುದ್ಧವಾಗಿ, ಹೂಡಿಕೆ ಯಷ್ಟೆ ಡಿವಿಡೆಂಡ್ ಪಡೆಯಲು ತೀರ್ಮಾನಿಸಿದರೆ, ಅದನ್ನು ಜವಾಬ್ದಾರಿಯುತ ಮಂಡಳಿ ಎಂದು ಹೇಗೆ ಕರೆಯುವುದು? ಸಭಾ ಭತ್ಯೆ ತೆಗೆದುಕೊಳ್ಳುವಾಗ, ರೂ.25,000/– ರೂ.30,000/– ಎಂದು ನಿಗದಿ ಪಡಿಸುವಾಗ, ಸದಸ್ಯರ ಹಿತಾಸಕ್ತಿ ಎಲ್ಲಿದೆ. ಸಹಕಾರಿ ಸಂಪನ್ಮೂಲವನ್ನು ಮಂಡಳಿ ಸದಸ್ಯರೇ ಹಂಚಿಕೊಳ್ಳುತ್ತಿದ್ದಾರೆ, ಸದಸ್ಯರು ಏನು ಮಾಡುತ್ತಿದ್ದಾರೆ. ಅದಕ್ಕಾಗಿಯೇ ಸೌಹಾರ್ದ ಸಹಕಾರಿ ಕಾಯಿದೆಯನ್ನು ಸ್ವಾಯತ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಕಾಯಿದೆ ರೂಪಿಸಿದ ಉದ್ದೇಶವೇ ನೆರವೇರುವುದಿಲ್ಲ, ಸದಸ್ಯರು ಜಾಗೃತರಾಗಬೇಕು.

**ಉಪಸಂಹಾರ :**

ನಮ್ಮ ಸೌಹಾರ್ದ ಕಾಯಿದೆ ಸದಸ್ಯರೇ ರೂಪಿಸುವ, ನಿಯಂತ್ರಿಸುವ, ಸಂಸ್ಥೆಯಾಗಿದ್ದರೂ, ಇದನ್ನು ಜಾರಿ ಮಾಡುವಾಗ ಸದಸ್ಯರು ಮತ್ತು ಮಂಡಳಿ ಜವಾಬ್ದಾರಿಯುತ, ಜಾಗೃತ, ಸ್ವಯಂ ನಿಯಂತ್ರಿತ ಸಂಘಗಳಾದಾಗ ಮಾತ್ರ, ಸಂಸ್ಥೆ ಕಟ್ಟದ ಉದ್ದೇಶ ಸಾರ್ಥಕವಾಗುತ್ತದೆ. ಕೆಲವು ನ್ಯಾಯಾಂಗದ ಉದಾಹರಣೆ ನೀಡಿದ್ದು, ನಮ್ಮ ಕಾಯಿದೆ ಒಂದು ಸ್ವಾತಂತ್ರ, ಸ್ವಾಯತ್ತ ಮತ್ತು ಸ್ವಯಂ ನಿಯಂತ್ರಣ ಸಂಸ್ಥೆಯಾಗಿ ಬೆಳೆಯಬೇಕು. ಇದರಲ್ಲಿ ಸ್ವಜನ ಪಕ್ಷಪಾತ, ಪ್ರಭಾವಿಗಳ ಮೇಲೆ ಕ್ರಮ ಜರುಗಿಸದಿದ್ದರೆ, ಇದು ಸಹಕಾರಿ ಆಂದೋಲನಕ್ಕೆ ಒಂದು ಕಪ್ಪು ಚುಕ್ಕೆ, ಅದರಲ್ಲೂ ಪ್ರಮುಖವಾಗಿ ಸೌಹಾರ್ದ ಕಾಯಿದೆಗೆ ದ್ರೋಹ ಬಗೆದಂತೆ ಎಂದು ನಮ್ಮ ಸೌಹಾರ್ದ ಸಹಕಾರಿಗಳು ತಿಳಿಯಲೇಬೇಕು. ಸಹಕಾರಿ ಆಂದೋಲನಕ್ಕೆ, ಸೌಹಾರ್ದ ಸಹಕಾರಿ ಕಾಯಿದೆಯೇ ಸಂವಿಧಾನ. ಅದನ್ನು ಅಳವಡಿಸಿಕೊಂಡು, ಸಾಮಾನ್ಯ ಸಭೆ, ಆಡಳಿತ ಮಂಡಳಿ, ಕಾರ್ಯಾಂಗದ ಬಗ್ಗೆ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿಕೊಂಡು ಕಾರ್ಯನಿರ್ವಹಿಸದಿದ್ದರೆ, ಸಂವಿಧಾನದ ಮೂರು ಅಂಗಗಳಾದ ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗ ಕಾರ್ಯನಿರ್ವಹಿಸುವಂತೆ ಮಾಡುವುದೇ ಉದ್ದೇಶ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34

ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055

ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.

ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003